ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 8 ಮಂಗಳವಾರ 2024

₹4

ಸಂಪುಟ: 45 | ಸಂಚಿಕೆ: 173 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ದಸರಾ: ವ್ಯವಸ್ಥೆಯಲ್ಲಿ ಅವ್ಯವಸ್ಥೆ




ಜೆ.ಕೆ.ಮೈದಾನದಲ್ಲಿ ತಗ್ಗು ಪ್ರದೇಶವನ್ನು ಸಮತಟ್ಟು ಮಾಡುತ್ತಿರುವುದು.

ವಿಶ್ವ ವಿಖ್ಯಾತ ಮೈಸೂರು ದಸರಾ ಆರಂಭವಾಗಿ ಐದು ದಿನವಾದರೂ ಅವ್ಯವಸ್ಥೆ ತಪ್ಪಿಲ್ಲ. ಭಾರಿ ಮಳೆಯ ಕಾರಣ ಮಹಿಳಾ ಮತ್ತು ಮಕ್ಕಳ ದಸರಾ, ರೈತ ದಸರಾ ನಡೆಯುತ್ತಿರುವ ಜೆ.ಕೆ.ಮೈದಾನದಲ್ಲಿ ಕೊಚ್ಚೆ ಆವರಿಸಿದೆ. ಮೈದಾನದಲ್ಲಿ ನೀರು ತುಂಬಿ ಜನರು ಓಡಾಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿತ್ತು.

ಈ ಹಿನ್ನೆಲೆಯಲ್ಲಿ ಇಂತಹ ಜಾಗದಲ್ಲಿ ಜೆಲ್ಲಿ ಹಾಗೂ ಎಂ.ಸ್ಯಾಂಡ್ ಹಾಕಿ ಸಮತಟ್ಟು ಮಾಡುವ ಕಾರ್ಯದಲ್ಲಿ ತೊಡಗಿದ್ದರು. ಮಳೆ ಬಂದಾಗ ನೀರು ತುಂಬುತ್ತದೆ ಎಂಬ ಅರಿವಿದ್ದರೂ ಅಧಿಕಾರಿಗಳು ತಗ್ಗು ಜಾಗ ಮುಚ್ಚುವ ಕಾರ್ಯವನ್ನು ಮೊದಲೇ ಮಾಡಬೇಕಿತ್ತು. ಆದರೆ ಈಗ ಜ್ಞಾನೋದಯವಾಗಿ ತಗ್ಗು ಪ್ರದೇಶ ಸಮತಟ್ಟು ಮಾಡುವ ಕಾರ್ಯದಲ್ಲಿ ತೊಡಗಿದ್ದಾರೆ.

ದಸರಾ, ದೀಪಾವಳಿ ಪ್ರಯುಕ್ತ ಷೂ ವರ್ಲ್ಡ್‌ನಲ್ಲಿ ಭಾರಿ ರಿಯಾಯಿತಿ ಮಾರಾಟ



ಮೈಸೂರು,ಅ.7–ದಸರಾ, ದೀಪಾವಳಿ ಪ್ರಯುಕ್ತ ರಾಮಸ್ವಾಮಿ ವೃತ್ತದ ಪ್ರೆಸ್ಟೀಜ್ ಶಾಪಿಂಗ್ ಕಾಂಪ್ಲೆಕ್ಸ್‌ನಲ್ಲಿರುವ ಮೈಸೂರಿನ ಹೆಸರಾಂತ ಪಾದರಕ್ಷೆಗಳ ಮಾರಾಟ ಸಂಸ್ಥೆ 'ಷೂ ವರ್ಲ್ಡ್' ಮಳಿಗೆಯಲ್ಲಿ ಭಾರಿ ರಿಯಾಯಿತಿ ಮಾರಾಟ ಆಯೋಜಿಸಲಾಗಿದೆ. ಷೂ ವರ್ಲ್ಡ್‌ನಲ್ಲಿ ಸ್ತ್ರೀ ಮತ್ತು ಪುರುಷರ ಗುಣಮಟ್ಟದ, ಉತ್ತಮ ದರ್ಜೆಯ ಚಪ್ಪಲಿ, ಷೂ ಮತ್ತು ಇತರೆ ಎಲ್ಲಾ ಇನ್‌ಹೌಸ್ ಬ್ರ್ಯಾಂಡ್‌ನ ಪಾದರಕ್ಷೆಗಳ ಖರೀದಿಯ ಮೇಲೆ 2+1 ಆಫರ್ (2 ಖರೀದಿಸಿದಾಗ 1 ಉಚಿತ) ನೀಡಲಾಗುತ್ತಿದೆ. ಭಾರತೀಯ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಷೂಗಳು ಇಲ್ಲಿ ಲಭ್ಯವಿದೆ. ಶಾಲಾ ಕಾಲೇಜು, ಆಸ್ಪತ್ರೆ, ಸ್ವಚ್ಛತಾ ಕಾರ್ಮಿಕರಿಗೆ ಹಾಗೂ ಕೈಗಾರಿಕಾ ಸಂಸ್ಥೆಗಳಿಗೆ ಗುಣಮಟ್ಟದ ಫುಟ್‌ವೇರ್ ಸಗಟು ದರದಲ್ಲಿ ದೊರಕುತ್ತಿದೆ. ಈ ರಿಯಾಯಿತಿ ಮಾರಾಟ ನ.3 ರವರೆಗೆ ಚಾಲ್ತಿಯಲ್ಲಿರುತ್ತದೆ.

ಮನೆ ಮನೆಗಳಲ್ಲಿ ದಸರಾ ಗೊಂಬೆಗಳನ್ನು ಕೂರಿಸುವುದು ಇತಿಹಾಸದ ಪ್ರತಿಬಿಂಬ



ರಂಗ್‌ಸನ್ಸ್‌ನ ಕೃಷ್ಣ ಮತ್ತು ಸುಮಾಕೃಷ್ಣ ಅವರ ಮನೆಯಲ್ಲಿ 37ನೇ ವರ್ಷದ ಇತಿಹಾಸ ಪ್ರಸಿದ್ಧ ಗೊಂಬೆಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ಮೈಸೂರು, ಅ. 7– ಮೈಸೂರಿನ ಕುವೆಂಪುನಗರ ಪಂಚಮಂತ್ರ ರಸ್ತೆಯಲ್ಲಿರುವ ರಂಗ್‌ಸನ್ಸ್‌ನ ಕೃಷ್ಣ ಮತ್ತು ಸುಮಾಕೃಷ್ಣ ಅವರ ಮನೆಯಲ್ಲಿ 37ನೇ ವರ್ಷದ ಇತಿಹಾಸ ಪ್ರಸಿದ್ಧ ಗೊಂಬೆಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ಗೊಂಬೆಗಳ ಪ್ರದರ್ಶನವನ್ನು ಉದ್ಘಾಟಿಸಿ ಮಾತನಾಡಿದ ಗೊಂಬೆ ಆರಾಧಕರಾದ ಶ್ರೀಮತಿ ಸುಮಾಕೃಷ್ಣ, ಮೈಸೂರಿನಲ್ಲಿ ದಸರಾ ಗೊಂಬೆಗಳನ್ನು ಮನೆ ಮನೆಗಳಲ್ಲಿ ಕೂರಿಸುವುದು ಇತಿಹಾಸವನ್ನು ಪ್ರತಿಬಿಂಬಿಸುತ್ತದೆ. ನವರಾತ್ರಿ ಹಬ್ಬದ ಪ್ರಮುಖ ಆಕರ್ಷಣೆ ದಸರಾ. ದಕ್ಷಿಣ ಭಾರತದಲ್ಲಿ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡುಗಳಲ್ಲಿ ಜನಪ್ರಿಯವಾಗಿದೆ. ಕರ್ನಾಟಕದಲ್ಲಿ ಇದನ್ನು ಗೊಂಬೆ ಹಬ್ಬ ಎಂದು ಕರೆಯುತ್ತಾರೆ ಎಂದರು.

ಇಲ್ಲಿಯ ಗೊಂಬೆಗಳ ಪ್ರದರ್ಶನದಲ್ಲಿ ರಾಜರು ತಾಯಿ ಚಾಮುಂಡೇಶ್ವರಿಗೆ ಪುಷ್ಪನಮವನ್ನು ಸಲ್ಲಿಸಿ ರಾಜಬೀದಿಗಳಲ್ಲಿ ಮೆರವಣಿಗೆಯಲ್ಲಿ ಭಾಗವಹಿಸಿ, ವಿವಿಧ ಕಲಾತಂಡಗಳೊಂದಿಗೆ ಬನ್ನಿಮಂಟಪಕ್ಕೆ ಹೋಗುವುದನ್ನು ಗೊಂಬೆಗಳ ಮೂಲಕ ಮಕ್ಕಳಿಗೆ ಪರಿಚಯಿಸುತ್ತಿರುವುದು ಸಂತೋಷವೆಂದರು. ಕಾರ್ಯಕ್ರಮದಲ್ಲಿ ರಂಗ್‌ಸನ್ಸ್‌ನ ಕೃಷ್ಣ, ಅಭಿಷೇಕ್, ಪ್ರಜ್ಞ, ಹರಿ, ಮಹಿಳಾ ಇನ್ನರ್‌ವ್ಹೀಲ್ ಕ್ಲಬ್‌ನ ಸದಸ್ಯರು, ದಸರಾ ಗೊಂಬೆ ಪ್ರಿಯರು ಇದ್ದರು.

ಅಭಿನಂದನೆ...



ಮೈಸೂರಿನಲ್ಲಿ ನಡೆಯುತ್ತಿರುವ ದಸರಾ ಕ್ರೀಡಾಕೂಟದ ಸಿಎಂ ಕಪ್–2024 ಸಮಾರೋಪ ಸಮಾರಂಭದಲ್ಲಿ ಕ್ರೀಡಾ ಸಮಿತಿ ಉಪಾಧ್ಯಕ್ಷ ಎನ್.ಆರ್.ನಾಗೇಶ್ ಅವರನ್ನು ಐಪಿಎಸ್ ಅಧಿಕಾರಿ ಆರ್.ಚೇತನ್, ಕ್ರೀಡಾ ಉಪವಿಶೇಷಾಧಿಕಾರಿ ವಿ.ಕೆ.ಪ್ರಸನ್ನಕುಮಾರ್, ಆಡಳಿತ ಯುವ ಸಬಲೀಕರಣ ಕ್ರೀಡಾ ಇಲಾಖೆ ಉಪನಿರ್ದೇಶಕ ಜಿತೇಂದ್ರ ಶೆಟ್ಟಿ ಆತ್ಮೀಯವಾಗಿ ಅಭಿನಂದಿಸಿದರು.

ಮಲೆ ಮಹದೇಶ್ವರ ಜಾತ್ರೆ: ಕಬಡ್ಡಿ ಪಂದ್ಯಾವಳಿ



ಮೈಸೂರು,ಅ.7–ಮೈಸೂರಿನ ಕುಂಬಾರಕೊಪ್ಪಲಿನಲ್ಲಿ ದೀಪಾವಳಿ ಹಬ್ಬ ಮತ್ತು ಮಲೆ ಮಹದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ದೀಪಾವಳಿ ಕಪ್–2024 ಹೊನಲು ಬೆಳಕಿನ ಪ್ರೋ ಮಾದರಿಯ ಕಬಡ್ಡಿ ಪಂದ್ಯಾವಳಿಯನ್ನು ನ.1ರಿಂದ 3ರವರೆಗೆ ಕೆಂಪೇಗೌಡ ಕ್ರೀಡಾಂಗಣ (ಹಳ್ಳಿಕಟ್ಟೆ)ದಲ್ಲಿ ಆಯೋಜಿಸಲಾಗಿದೆ. ಪ್ರೋ ಕಬಡ್ಡಿ ಮಾದರಿಯಲ್ಲಿ ಬಿಡ್ಡಿಂಗ್ ಮಾಡಿ ಆಟಗಾರರನ್ನು ಆಯ್ಕೆ ಮಾಡಲಾಗುವುದು. 8 ಫ್ರ್ಯಾಂಚೈಸಿ ತಂಡಗಳು ಭಾಗವಹಿಸಬಹುದು. ಆಸಕ್ತ ಮಾಲೀಕರು ತಂಡವನ್ನು ಖರೀದಿಸಬಹುದು. ಆಟಗಾರರು ಅರ್ಜಿ ಹಾಕುವ ಕೊನೆ ದಿನಾಂಕ ಅ.15. ಬಿಡ್ಡಿಂಗ್ ಮಾಡುವ ದಿನಾಂಕ ಅ.20. ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ, ಕಾಂಗ್ರೆಸ್ ಮುಖಂಡ ಅನಿಲ್, ಪ್ರಸನ್ನ, ರಘು, ರಾಮಪ್ರಸಾದ್, ಕೇಶವ್, ಪೈ ರವಿರಾಜ್, ಪೈಶರತ್, ವಿನೋದ್, ನಿಕಿಲ್, ವರುಣ್, ರಾಮ, ಶ್ರೇಯಸ್ ಮತ್ತಿತರರು ಭಾಗವಹಿಸಲಿದ್ದಾರೆ.

ಹೃದ್ರೋಗ ಉಚಿತ ತಪಾಸಣಾ ಶಿಬಿರ

ಮೈಸೂರು,ಅ.7–ಮೈಸೂರಿನ ಸುಯೋಗ್ ಆಸ್ಪತ್ರೆ ವತಿಯಿಂದ ಅ.23ರಿಂದ 28ರವರೆಗೆ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಹೃದ್ರೋಗ ಉಚಿತ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಮಾಹಿತಿಗೆ 0821–2566966, 9986399862 ಸಂಪರ್ಕಿಸಿ.

ಕವಿಗೋಷ್ಠಿಯಲ್ಲಿ ಹಾಸ್ಯ ಜುಗಲ್‌ಬಂದಿ ಕಚಗುಳಿ



ಮೈಸೂರು ದಸರಾ ಮಹೋತ್ಸವದ ಅಂಗವಾಗಿ ದಸರಾ ಕವಿಗೋಷ್ಠಿ ಉಪಸಮಿತಿ ವತಿಯಿಂದ ಸೋಮವಾರ ಜಗನ್ಮೋಹನ ಅರಮನೆಯಲ್ಲಿ ಆಯೋಜಿಸಿದ್ದ ಸಂತಸ ಕವಿಗೋಷ್ಠಿಯನ್ನು ನಾಡೋಜ ಹಂ.ಪ.ನಾಗರಾಜಯ್ಯ ಉದ್ಘಾಟಿಸಿದರು. ಕವಯಿತ್ರಿ ಡಾ.ಲತಾ ರಾಜಶೇಖರ್, ಎಡಿಸಿ ಪಿ.ಶಿವರಾಜು, ಕವಿಗೋಷ್ಠಿ ಉಪ ಸಮಿತಿ ಕಾರ್ಯಾಧ್ಯಕ್ಷೆ ಪ್ರೊ.ಎನ್.ಕೆ.ಲೋಲಾಕ್ಷಿ, ಉಪ ವಿಶೇಷಾಧಿಕಾರಿ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.

> “ಹೃದಯದ ನಿರ್ಮಲ ಭಾವ ಮುಖದಲ್ಲಿ ಪ್ರಫುಲ್ಲಗೊಳ್ಳುತ್ತದೆ. ಮನುಷ್ಯ ಯಾವ ಪರಿಸ್ಥಿತಿಯಲ್ಲಿ, ಯಾವ ಮೂಡಿನಲ್ಲಿದ್ದರೂ ಅವನ ಹೃದಯವನ್ನು ಹಗುರಗೊಳಿಸಬಲ್ಲ ಸಾಹಿತ್ಯದ ಯಾವುದೇ ತುಣುಕು ಹಾಸ್ಯವೆನಿಸುತ್ತದೆ. ಇದರಲ್ಲಿ ವ್ಯಕ್ತಿಯ ಸ್ಥಿತ ಭಾವವನ್ನು ಬದಿಗೆ ಸರಿಸಿ ನಗೆ ಬುಗ್ಗೆಯನ್ನು ಎಬ್ಬಿಸುವ ಸಾಮರ್ಥ್ಯವಿರುತ್ತದೆ. ನಗು ಎಂಬುದು ಪ್ರತಿಯೊಬ್ಬ ಮನುಷ್ಯನಿಗೆ ಅತ್ಯಂತ ಅವಶ್ಯಕತೆಯಿದ್ದು, ಮನುಷ್ಯ ಎಷ್ಟೇ ಅಲಂಕಾರ ಮಾಡಿಕೊಂಡರೂ ನಗು ಎಂಬ ಆಭರಣ ಇಲ್ಲದಿದ್ದರೆ ಅಲಂಕಾರ ಪೂರ್ಣಗೊಳ್ಳುವುದಿಲ್ಲ. ಆದ್ದರಿಂದ ನಗುವೇ ಸ್ವರ್ಗ ಅಳುವೇ ನರಕ. **–ಡಾ.ಲತಾ ರಾಜಶೇಖರ್**

ಮೈಸೂರು,ಅ.7(ಜಿಎ)–ಮೈಸೂರು ದಸರಾ ಮಹೋತ್ಸವದ ಅಂಗವಾಗಿ ದಸರಾ ಕವಿಗೋಷ್ಠಿ ಉಪ ಸಮಿತಿ ವತಿಯಿಂದ ಆಯೋಜಿಸಿದ್ದ ಸಂತಸ ಕವಿಗೋಷ್ಠಿಯಲ್ಲಿ ಚುಟುಕುಗಳ ಮೂಲಕ ಹಾಸ್ಯ ಜುಗಲ್‌ಬಂದಿಯಲ್ಲಿ ಕವಿಗಳು ಸಂತಸದೌತಣ ಬಿಡಿಸಿದರು.

ನಗರದ ಜಗನ್ಮೋಹನ ಅರಮನೆಯಲ್ಲಿ ಏರ್ಪಡಿಸಿದ್ದ ಸಂತಸ ಕವಿಗೋಷ್ಠಿಯನ್ನು ನಾಡೋಜ ಹಂ.ಪ.ನಾಗರಾಜಯ್ಯ ತಮ್ಮ ಪತ್ನಿ ಕಮಲ ಹಂಪನಾ ಅವರ ಚುಟುಕು ಹೇಳುವ ಮೂಲಕ ಉದ್ಘಾಟಿಸಿದರು. ನಂತರ ಎರಡು ತಂಡಗಳಾಗಿ ಕವಿಗಳು 'ಕನ್ನಡ ನಾಡು–ನುಡಿ ಅಂದು ಮತ್ತು ಇಂದು', 'ಮಕ್ಕಳು ಮತ್ತು ಶಿಕ್ಷಣ', 'ಮಹಿಳೆಯರ ಸ್ಥಾನಮಾನ' ವಿಷಯ ಕುರಿತು ಹಾಸ್ಯ ಜುಗಲ್‌ಬಂದಿ ಮೂಲಕ ನೆರೆದಿದ್ದವರಿಗೆ ನಗೆಗಡಲಿಗೆ ಕರೆದಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಡಾ.ಬಸವರಾಜ ಸಾದಾರ, ಇಂದಿನ ಕವಿಗೋಷ್ಠಿಯು ಬಹಳ ಸಂತೋಷದಿಂದ ಆಯೋಜನೆಗೊಂಡಿದ್ದು, ಈ ರೀತಿಯ ಹಾಸ್ಯ ಸಂತಸ ಕವಿಗೋಷ್ಠಿಯನ್ನು ಸರ್ಕಾರ ಹೆಚ್ಚು ಹೆಚ್ಚು ಆಯೋಜಿಸಬೇಕು. ಜಗತ್ತಿನಲ್ಲಿ ಎಲ್ಲಾ ಮಾದರಿಯ ಮಹಾಕಾವ್ಯಗಳಿವೆ ಆದರೆ ಹಾಸ್ಯಮಯುಳ್ಳ ಮಹಾಕಾವ್ಯ ಇನ್ನೂ ರಚನೆಗೊಂಡಿಲ್ಲ ಎಂದರು.

ಚುಟುಕು ಕವನ ವಾಚನದ ಜುಗಲ್‌ಬಂದಿಯ ಮೊದಲನೇ ಸುತ್ತಾದ 'ಕನ್ನಡ ನಾಡು ನುಡಿ ಅಂದು ಮತ್ತು ಇಂದು' ಸುತ್ತಿನಲ್ಲಿ ನವೆಂಬರ್ ಒಂದರಂದು ಕನ್ನಡಿಗರಾಗದೆ ನಂಬರ್ ಒನ್ ಕನ್ನಡಿಗರಾಗಬೇಕು. ಕರ್ನಾಟಕದಲ್ಲಿ ಕನ್ನಡ ಸಂಸ್ಕೃತಿ ನೆಲೆಯೂರಿದೆ. ಇದಕ್ಕೆ ಉದಾಹರಣೆಯೇ ನಮ್ಮ ಹಂಪೆ, ಬೇಲೂರು ಎಂಬಂತೆ ಕರ್ನಾಟಕದಲ್ಲಿ ಪ್ರತಿಯೊಬ್ಬರೂ 'ಓಬಮಾ' ಅಂದರೆ ಕನ್ನಡವನ್ನು ಓದುವುದು, ಬರೆವುದು ಮತ್ತು ಮಾತನಾಡುವುದು ಎಂಬ ತಂತ್ರಗಳನ್ನು ಪ್ರತಿಯೊಬ್ಬ ಕನ್ನಡಿಗರು ಅಳವಡಿಸಿಕೊಳ್ಳಬೇಕು ಎಂಬ ಸಂದೇಶವನ್ನು ಕವಿಗಳು ಸಾರಿದರು.

ಚುಟುಕು ಕವನ ವಾಚನದ 2ನೇ ಸುತ್ತಾದ 'ಮಕ್ಕಳು ಮತ್ತು ಶಿಕ್ಷಣ' ಕುರಿತಾಗಿ ಪ್ರಸ್ತುತ ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆಯನ್ನು ಇಂದಿನ ಮಕ್ಕಳ ಮೊಬೈಲ್ ಬಳಕೆಯ ಶಿಕ್ಷಣದ ಬಗ್ಗೆ, ಶಾಲೆಯಲ್ಲಿ ಮೊದಲು ಶಿಕ್ಷಕರು ಬರೆದಂತಹ ಅಕ್ಷರಗಳನ್ನು ಕಾಪಿ ಮಾಡಿ ಅಂತ ಹೇಳುವ ಶಿಕ್ಷಕರು ಪರೀಕ್ಷೆಯಲ್ಲಿ ಕಾಪಿ ಮಾಡಲು ಬಿಡದಿರುವುದು, ಎಕ್ಸಾಮ್ ಹಾಲ್‌ನಲ್ಲಿ ಮಕ್ಕಳು ಕಾಪಿ ಮಾಡಿ ಬರೆಯುವ ಪರಿಯನ್ನು ಕವಿರತ್ನ ಕಾಳಿದಾಸ ಚಿತ್ರದ ಗೀತೆಯನ್ನು 'ಕಾಪಿರತ್ನ ಕಾಳಿದಾಸ' ಎಂಬ ಗೀತೆಯನ್ನು ಹಾಸ್ಯಮಯವಾಗಿ ವರ್ಣಿಸಿದ್ದು ನೆರೆದಿದ್ದವರ ಮುಖದಲ್ಲಿ ಮಂದಹಾಸ ಬೀರಲು ಕಾರಣವಾಯಿತು.

ಕವಿಯತ್ರಿ ಡಾ.ಲತಾ ರಾಜಶೇಖರ್ ಮಾತನಾಡಿ, ಎಲ್ಲಾ ಸಮಸ್ಯೆಗಳಿಗೆ ನಗು ಎಂಬುದು ಮಾನಸಿಕ ಔಷಧಿಯಾಗಿದೆ. ಜಗತ್ತಿನಲ್ಲಿ ಸಾಕ್ರಟಿಸ್‌ನಿಂದ ಹಿಡಿದು ಗಾಂಧಿವರೆಗೂ ಹಾಸ್ಯದಲ್ಲಿ ಆಸಕ್ತಿ ಇರುವವರನ್ನು ಕಾಣಬಹುದು. ಸಂತಸ ಕವಿಗೋಷ್ಠಿಯು ಸಾಹಿತ್ಯದ ಒಂದು ಪ್ರಕಾರವಾಗಿದೆ. ವಿನೋದ ಎಲ್ಲರಿಗೂ ಬೇಕು. ಸ್ವಲ್ಪ ಹೊತ್ತು ಎಲ್ಲವನ್ನು ಮರೆತು ಮುಖದಲ್ಲಿ ನಗೆ ತುಂಬಲು ಬಯಸದವನು ಎಷ್ಟು ದುಃಖಿಯೇ ಸರಿ. ನಗೆ ಆರೋಗ್ಯವಂತಿಕೆಯ ಲಕ್ಷಣ ಎಂದರು.

ಕಾರ್ಯಕ್ರಮದಲ್ಲಿ ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಡಿಸಿ ಪಿ.ಶಿವರಾಜು, ಕವಿಗೋಷ್ಠಿ ಉಪಸಮಿತಿ ಕಾರ್ಯಾಧ್ಯಕ್ಷೆ ಪ್ರೊ.ಎನ್.ಕೆ.ಲೋಲಾಕ್ಷಿ, ಉಪವಿಶೇಷಾಧಿಕಾರಿ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಕಾರ್ಯದರ್ಶಿ ಸಿ.ಕೃಷ್ಣ ಅಧಿಕಾರೇತರ ಸಮಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ಕೃಷ್ಣ ರಾಜೇಂದ್ರ ಸಹಕಾರ ಬ್ಯಾಂಕ್ ಚುನಾವಣೆಗೆ ನಾಮಪತ್ರ ಸಲ್ಲಿಕೆ




ಮೈಸೂರಿನ ಶ್ರೀ ಕೃಷ್ಣ ರಾಜೇಂದ್ರ ಸಹಕಾರ ಬ್ಯಾಂಕ್‌ಗೆ ಭಾನುವಾರ ನಡೆಯಲಿರುವ ಚುನಾವಣೆಗೆ ಹಾಲಿ ಸದಸ್ಯ ನಂ.ಸಿದ್ದಪ್ಪ, ಹಾಲಿ ಅಧ್ಯಕ್ಷ ಪ್ರತಿಧ್ವನಿ ಪ್ರಸಾದ್ ಬಣದ 12 ಸದಸ್ಯರಾದ ಅರುಣ್ ಸಿದ್ದಪ್ಪ, (ಬಿಸಿಎಂ/ಬಿ), ಬಿ.ನಾಗಜ್ಯೋತಿ ಪ್ರತಿಧ್ವನಿ ಪ್ರಸಾದ್(ಮಹಿಳಾ ಮೀಸಲು), ನಂ.ಸಿದ್ದಪ್ಪ(ಸಾಮಾನ್ಯ), ಎಂ.ಡಿ.ಪಾರ್ಥಸಾರಥಿ (ಸಾಮಾನ್ಯ), ಪ್ರತಿಧ್ವನಿ ಪ್ರಸಾದ್, (ಸಾಮಾನ್ಯ), ಜಿ.ಎಂ.ಪಂಚಾಕ್ಷರಿ(ಸಾಮಾನ್ಯ), ಟಿ.ವಿ.ಗಣೇಶ್ ಮೂರ್ತಿ(ಸಾಮಾನ್ಯ), ಡಿ.ಬಸವರಾಜು,(ಸಾಮಾನ್ಯ), ಹೆಚ್.ವಿ.ಭಾಸ್ಕರ್ (ಸಾಮಾನ್ಯ), ನವೀನ್‌ಕುಮಾರ್ ಎಂ.ಎನ್,(ಬಿಸಿಎಂ/ಎ), ಶಿವಪ್ರಕಾಶ್ (ಪ.ಪಂಗಡ), ಹೆಚ್.ಎನ್.ಸರ್ವಮಂಗಳ ಚುನಾವಣಾಧಿಕಾರಿ ಬಿ.ರಾಜು ಅವರಿಗೆ ನಾಮಪತ್ರ ಸಲ್ಲಿಸಿದರು. ಈ ವೇಳೆ ಮಂಜಪ್ಪ, ಮಹಾದೇವಸ್ವಾಮಿ, ಕಟ್ಟಹಳ್ಳಿ ಪ್ರಕಾಶ್, ಶ್ರೀಕಂಠಪ್ಪ, ನವೀನ್ ಕೆಂಪಿ, ಚಂದ್ರಶೇಖರ್ ಇದ್ದರು.

ಆ್ಯಂಜಿಯೋಗ್ರಾಂ, ಆ್ಯಂಜಿಯೋಪ್ಲಾಸ್ಟಿ ಶಿಬಿರದ ಸಮಾರೋಪ ನಾಳೆ

ಮೈಸೂರು,ಅ.7–ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಆಯೋಜಿಸಲಾಗಿದ್ದ ಉಚಿತ ಆ್ಯಂಜಿಯೋಗ್ರಾಂ ಮತ್ತು ಆ್ಯಂಜಿಯೋಪ್ಲಾಸ್ಟಿ ಶಿಬಿರದ ಸಮಾರೋಪ ಸಮಾರಂಭ ಅ.9ರಂದು ಬೆಳಗ್ಗೆ 10.30 ಗಂಟೆಗೆ ಸುಯೋಗ್ ಆಸ್ಪತ್ರೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮವನ್ನು ಮೇಘಾಲಯದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಉದ್ಘಾಟಿಸಲಿದ್ದಾರೆ. ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ ಅಧ್ಯಕ್ಷತೆ ವಹಿಸಲಿದ್ದು, ಮೂಳೆ ಮತ್ತು ಕೀಲು ಶಾಸ್ತ್ರ ತಜ್ಞರಾದ ಡಾ.ಮೋಹನ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಸುಯೋಗ್ ಆಸ್ಪತ್ರೆಯ ಟ್ರಸ್ಟಿ ಶ್ರೀಮತಿ ಸುಧಾ ಯೋಗಣ್ಣ ಉಪಸ್ಥಿತರಿರುವರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

08.10.2024 ಮಂಗಳವಾರ, ಮಳೆ ನಕ್ಷತ್ರ: ಹಸ್ತ, 27.09.2024 ರಿಂದ 09.10.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಅಶ್ವಯುಜ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ : ಮಧ್ಯಾಹ್ನ 3 ರಿಂದ 4.30 ರವರೆಗೆ

■ **ಶ್ರೀ ಶ್ರೀ ಸುಬ್ಬರಾಯ ದಾಸರ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ :** ನವರಾತ್ರಿ ಬ್ರಹ್ಮೋತ್ಸವ, ಪಂಚಮಿ, ಬೆಳಗ್ಗೆ ಮಹಾಸುದರ್ಶನ ಹೋಮ, ಉತ್ಸವ, ಸಾಯಂಕಾಲ ಮಹಾಕಲ್ಯಾಣೋತ್ಸವ, ಪ್ರವಚನ, ಮಹಾಮಂಗಳಾರತಿ, ಸ್ಥಳ: ದೇವಸ್ಥಾನ ಆವರಣ, ಕೃಷ್ಣ ವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಸ್ಥಾನ ಟ್ರಸ್ಟ್ :** ಶ್ರೀ ಲಕ್ಷ್ಮೀವೆಂಕಟರಮಣ ಸ್ವಾಮಿಯ 50ನೇ ಬ್ರಹ್ಮೋತ್ಸವ, ಬೆಳಗ್ಗೆ ಕಲಶಾರಾಧನೆ, ನಿತ್ಯಹೋಮ, ಬಲಿಪ್ರಧಾನ ಹನುಮಂತೋತ್ಸವ, ಆಂಜನೇಯ ಸಹಸ್ರನಾಮ, ನಿವೇದನ, ಮಂಗಳಾರತಿ, ಶಾತ್ತುಮೊರೈ, ತೀರ್ಥಪ್ರಸಾದ ವಿನಿಯೋಗ, ಸಂಜೆ ನಿತ್ಯ ಹೋಮ, ಶೇಷವಾಹನೋತ್ಸವ, ನಿವೇದನ, ಮಂಗಳಾರತಿ, ಶಾತುಮೊರೈ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ವಾಣಿವಿಲಾಸ ಮೊಹಲ್ಲಾ.

■ **ಶೃಂಗೇರಿ ಶ್ರೀ ಶಂಕರ ಮಠ, ಅಭಿನವ ಶಂಕರಾಲಯ :** ಶ್ರೀ ಶಾರದಾಶರನ್ನವರಾತ್ರೋತ್ಸವ–2024, ಬೆಳಗ್ಗೆಯಿಂದ ಪಂಚಮಿ, ಶ್ರೀ ಇಂದ್ರಾಣಿ ಅಲಂಕಾರ, ಶ್ರೀ ಸುಬ್ರಹ್ಮಣ್ಯ ಹೋಮ, ಸ್ಥಳ: ಶಂಕರ ಮಠದ ಆವರಣ, ಫೋರ್ಟ್ ಮೊಹಲ್ಲಾ.

■ **ತ್ರಯೀನ್ಯಾಸ್ ಶ್ರೀ ವಿದ್ಯಾ ಫೌಂಡೇಷನ್ :** 28ನೇ ವರ್ಷದ ಶರನ್ನವರಾತ್ರಿ ಮಹೋತ್ಸವ, ಬೆಳಗ್ಗೆ 8.30 ರಿಂದ ಮಹಾಭಿಷೇಕ, ಶ್ರೀ ಕಾತ್ಯಾಯಿನಿ, ಶ್ರೀ ವಿದ್ಯಾ ಜ್ವಲದುರ್ಗಾ ಪೂಜಾ, ಸಪ್ತಶತಿ ಪಾರಾಯಣ, ಲಲಿತೋಪಾಖ್ಯಾನ ಪಾರಾಯಣ, ಶ್ರೀ ಚಕ್ರಾರ್ಚನೆ, ಶ್ರೀ ಸುಂದರಕಾಂಡ ಪಾರಾಯಣ, ಸಂಜೆ 5.30 ರಿಂದ ಶ್ರೀಸುಬ್ರಹ್ಮಣ್ಯ ಅವರಣಾಂಗ ಹೋಮ, ಶ್ರೀ ದಶವಾರಾಹಿ ಹೋಮ, ಶ್ರೀ ಲಘುವಾರಾಹಿ, ಶ್ರೀ ಸ್ವಪ್ನವಾರಾಹಿ, ಶ್ರೀ ತಿರಸ್ಕರಣೀ, ಶ್ರೀ ಅಶ್ವಾರೂಢವಾರಾಹಿ, ಶ್ರೀಧೂಮ್ರವಾರಾಹಿ, ಶ್ರೀ ಕಿರಾತವಾರಾಹಿ, ಶ್ರೀ ಶತ್ರು ಸಂಹಾರವಾರಾಹಿ, ಶ್ರೀ ವಾರ್ತಾಳಿ, ಶ್ರೀ ದಶ್ಯವಾರಾಹಿ, ಶ್ರೀ ಮಹಾವಾರಾಹಿ ಹೋಮ, ಪೂರ್ಣಾಹುತಿ, ಕುಂಕುಮಾರ್ಚನೆ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ತ್ರಯಿನ್ಯಾಸ್, ಜಯಲಕ್ಷ್ಮೀಪುರಂ.

■ **ಡಿ. ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜು :** ಸಾಂಸ್ಕೃತಿಕ ವೇದಿಕೆ ಉದ್ಘಾಟನೆ, ಪ್ರತಿಭಾಶೋಧ ಕಾರ್ಯಕ್ರಮ, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಬಸವರಾಜು, ಉದ್ಘಾಟನೆ : ರಂಗಭೂಮಿ ಕಲಾವಿದ ಕೃಷ್ಣಮೂರ್ತಿ ತಲಕಾಡು, ಉಪಸ್ಥಿತರು : ಐಕ್ಯೂಎಸಿ ಸಂಚಾಲಕರಾದ ಕು. ಎಂ.ಎಲ್. ನಳಿನಾ, ಸಹ ಸಂಚಾಲಕ ಬಿ.ವಿ. ವೆಂಕಟೇಶ, ಡಾ. ಎಸ್. ಇಂದಿರಮ್ಮ, ಸ್ಥಳ: ಡಿ. ಬನುಮಯ್ಯ ಕಲಾ ಭವನ, ಬೆಳಗ್ಗೆ 10.30ಕ್ಕೆ.

■ **ಹೇಮಲತಾ ಕುಮಾರಸ್ವಾಮಿ :** ಮೈಸೂರು ಮನೆ ಮನೆ ದಸರಾ ಬೊಂಬೆ ಪ್ರದರ್ಶನ, ಸ್ಥಳ: 567/3, 2ನೇ ರಾಮಚಂದ್ರ ಅಗ್ರಹಾರ, ಖಿಲ್ಲೆ ಮೊಹಲ್ಲಾ.

■ **ಶ್ರೀ ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನ ಚಾರಿಟೆಬಲ್ ಟ್ರಸ್ಟ್ :** ಶರನ್ನವರಾತ್ರಿ ಉತ್ಸವ–2024, ಶ್ರೀ ಸೂಕ್ತ ಹೋಮ, ಸ್ಕಂದ ಮಾತ ಅಲಂಕಾರ, ಸುಮಂಗಲಿಯರಿಂದ ಕುಂಕುಮಾರ್ಚನೆ, ಸಪ್ತಸತಿ ಪಾರಾಯಣ, ಸ್ಥಳ: ದೇವಸ್ಥಾನದ ಪ್ರಾಂಗಣ, ವಾಣಿವಿಲಾಸ ಮೊಹಲ್ಲಾ, ಬೆಳಗ್ಗೆ 9 ಗಂಟೆಯಿಂದ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಫಿಸ್ತುಲಾ, ಭಗಂಧರ, ನಾಡಿವ್ರಣ, ಫಿಶರ್ ತೊಂದರೆಗಳಿಗೆ ತಜ್ಞ ವೈದ್ಯರಿಂದ ಉಚಿತ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ ಸಂಜೆ 4.30ರವರೆಗೆ.

■ **ವ್ಯವಸ್ಥಾಪಕರು :** ಕೆ.ಎಸ್. ರಾಘವೇಂದ್ರ ಅವರಿಂದ ಪೇಪರ್ ಪಲ್ಸ್ ಉಪಯೋಗಿಸಿ ಕೈಯಿಂದ ಮಾಡಿದ ಬೊಂಬೆಗಳ ಮೂಲಕ ದಶಾವತಾರ ಒಳಗೊಂಡ ಶ್ರೀ ಬಾಲಕೃಷ್ಣ ಲೀಲೆ ಪ್ರಸಂಗಗಳ ಪ್ರದರ್ಶನ, ಸ್ಥಳ: ಇಂಚರ ಕಲಾಕ್ಷೇತ್ರ, ವಿಜಯನಗರ 2ನೇ ಹಂತ, ಬೆಳಗ್ಗೆ 10 ಗಂಟೆಯಿಂದ.

■ **ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕೆ ಸೇವಾ ಟ್ರಸ್ಟ್ :** ಶರನ್ನವರಾತ್ರಿ ವೈಭವ–2024, ಷಷ್ಠಿ, ಶ್ರೀಸೂಕ್ತ ಹೋಮ, ಸ್ಥಳ: ಶ್ರೀ ವೆಂಕಟಾರ್ಜುನ ಧ್ಯಾನ ಮಂದಿರ, ಹಾರೋಹಳ್ಳಿ ಗ್ರಾಮ, ಬೆಳಗ್ಗೆ 10 ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ :** ದಸರಾ ಮಹೋತ್ಸವ–2024 ಅಂಗವಾಗಿ ಛಾಯಾಚಿತ್ರ ಪ್ರದರ್ಶನ, ಸ್ಥಳ: ಸುಚಿತ್ರ ಕಲಾ ಗ್ಯಾಲರಿ, ಕಲಾಮಂದಿರ, ಬೆಳಗ್ಗೆ 11.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ದಸರಾ ಗೀತಾರಾಧನ, 6.30 ದಸರಾದಲ್ಲಿ ಇಂದು–ಪ್ರಸ್ತುತಿ: ಜಾಂಪಣ್ಣ ಆಶೀಹಾಳ್, 6.35 ಮತ್ತು ಸಂಜೆ 6.10 'ಶ್ರದ್ಧೆಯ ಶಿಲ್ಪ' ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ರಾಜಮಾರ್ಗ–ಮೈಸೂರಿನ ಇತಿಹಾಸ ಪ್ರಸಿದ್ಧ ಮಾರ್ಗಗಳ ಪರಿಚಯ, ಪ್ರಸ್ತುತಿ : ಡಾ. ಮೈಸೂರು ಉಮೇಶ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಅ.ನ.ಕೃ. ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ : ಉಮೇಶ್ ಎಸ್.ಎಸ್., 7.45 ಶರಣ ಸಂಸ್ಕೃತಿ ಉತ್ಸವ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಶ್ರೀಜಗದ್ಗುರು ಮುರುಘ ರಾಜೇಂದ್ರ ಬೃಹನ್ಮಠ, ಚಿತ್ರದುರ್ಗ, 8.30 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್., 8.40 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 9.05 ಚಾಮುಂಡಿ ಹಬ್ಬ–ದಸರಾ ಸಂಭ್ರಮ, ಜನಪದರ ನಾಲಿಗೆಯಲ್ಲಿ ಮೈಸೂರು ದೇವತೆ, ರಚನೆ–ಡಾ. ಪಿ.ಕೆ. ರಾಜಶೇಖರ್, ಪ್ರಸ್ತುತಿ : ಡಾ. ಮೈಸೂರು ಉಮೇಶ್, 9.35 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ದಸರಾ ಪ್ರಯುಕ್ತ ಶ್ರೀ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳನ್ನೊಳಗೊಂಡ ವಿಶೇಷ ಸಂಗೀತ ಸರಣಿ–ನಮೋ ಜಗತ್ತಾರಿಣಿ, ನಿರ್ಮಾಣ–ಮೈಸೂರು. ಎಸ್. ರಾಜಲಕ್ಷ್ಮೀ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ

ಮಧ್ಯಾಹ್ನ: 12.05 ವನಿತಾ ವಿಹಾರ–ಭಾರತೀ ಮಹಿಳಾ ಸಮಾಜದವರಿಂದ ದಸರಾ ಕುರಿತು ಕಾರ್ಯಕ್ರಮ, ವೈವಿಧ್ಯ, ಪ್ರಸ್ತುತಿ : ಎಂ.ಎಸ್. ಭಾರತೀ, 12.30 ದೇವರನಾಮ–ಸುಧಾ ಮಧುಸೂದನ್, 12.45 ಜಾತ್ರಾ ವಿಶೇಷ ಬಾನುಲಿ ಮಾಲಿಕೆಯಲ್ಲಿ ಬಿಳಿಗಿರಿರಂಗನ ಬೆಟ್ಟದ ಜಾತ್ರೆಯ ಕುರಿತು ಮಾತನಾಡುತ್ತಾರೆ ಡಾ.ಕೃಷ್ಣಮೂರ್ತಿ ಹನೂರು ಮತ್ತು ಡಾ.ಮೈಸೂರು ಗುರುರಾಜ್, 1.00 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ: ಸದಾನಂದ. ಆರ್., 1.20 ಭಾವಗೀತೆಗಳು–ಬಿ. ಎಸ್. ವಿಜಯರಾಘವನ್, 2.40 ಏಳುತಲೆ ನೆನೆದೇವು–ದಸರಾ ಸಂದರ್ಭದಲ್ಲಿ ಜನಪದ ಶಕ್ತಿ ದೇವತೆಯನ್ನು ಕುರಿತ ವಿಶೇಷ ರೂಪಕ ಮಾಲಿಕೆ, ಪ್ರಸ್ತುತಿ: ಡಾ.ಮೈಸೂರು ಉಮೇಶ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ವಾದ್ಯವೃಂದ, 4.00 ಕಥಾ ಕಾಲಕ್ಷೇಪ–ಸೀತಾ ಕಲ್ಯಾಣ, ಪ್ರಸ್ತುತಿ: ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಮಳೆ ಹಾಗೂ ಚಳಿಗಾಲದಲ್ಲಿ ರೇಷ್ಮೆ ಹುಳು ರೋಗ ನಿರ್ವಹಣೆ. ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಜಿ. ಮಲ್ಲಿಕಾರ್ಜುನ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 'ಮೈಸೂರು ಜಂಕ್ಷನ್' ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಕ್ರೀಡಾ ಲೋಕ, 8.30 ಅರಮನೆ ಸಂಗೀತ ವೈಭವ–ಸಂಗೀತ ರೂಪಕ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಬಾಂಬೆ ಸಹೋದರಿಯರು–ಯುಗಳ ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ. ವಾಚನ: ಹೆಚ್.ಎಲ್.ಶ್ರೀಕಂಠ, ವ್ಯಾಖ್ಯಾನ: ಹೆಚ್.ಎಸ್. ಗೋಪಾಲ್, ಪ್ರಸ್ತುತಿ: ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

■ **ಶ್ರೀ ಮುಕ್ಕಣ್ಣೇಶ್ವರ ಸ್ವಾಮಿ ದೇವಸ್ಥಾನ :** ನವರಾತ್ರಿ ಪೂಜಾ ಕಾರ್ಯಕ್ರಮ, ಭಜನೆ, ರವಿಕಾಂತಾನಂದಸ್ವಾಮಿ ಅವರಿಂದ ಪ್ರವಚನ, ಸ್ಥಳ: ದೇವಸ್ಥಾನದ ಆವರಣ, ಸಂಜೆ 5.30 ರಿಂದ.

■ **ಕಲಾಂದಿಕ ಕಲಾ ಅಕಾಡೆಮಿ :** ಕು. ಸೂರ್ಯ ಗಾಯತ್ರಿ ಅವರಿಂದ ಕರ್ನಾಟಕ ಸಂಗೀತ, ಮುಖ್ಯ ಅತಿಥಿಗಳು : ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ವಿಭಾಗದ ಮುಖ್ಯಸ್ಥ ಡಾ. ಶೆಲ್ವಪಿಳ್ಳೈ ಅಯ್ಯಂಗಾರ್, ಸ್ಥಳ: ಕಲಾಂದಿಕ ಅಕಾಡೆಮಿ, ಸರಸ್ವತಿಪುರಂ, ಸಂಜೆ 6 ಗಂಟೆಗೆ.

■ **ಶ್ರೀ ಉತ್ತರಾದಿ ಮಠ ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಶರನ್ನವರಾತ್ರಿಯ ಪ್ರಯುಕ್ತ 'ಶ್ರೀನಿವಾಸ ಕಲ್ಯಾಣ' ಪ್ರವಚನ, ಪಂ. ಶ್ರೀ ಪ್ರಭಂಜನಾಚಾರ್ಯ ವಿದ್ಯಾಪತಿ ಅವರಿಂದ, ಸ್ಥಳ: ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ, ಶ್ರೀ ಉತ್ತರಾದಿ ಮಠ, ಸಂಜೆ 5.30ಕ್ಕೆ.

■ **ರಂಗಾಯಣ, ಮೈಸೂರು :** ನವರಾತ್ರಿ ಅಂಗವಾಗಿ ರಂಗ ಉತ್ಸವ, ಶ್ರೀ ಅಂಬಿಕಾ ದೇವಿ ಸಂಗ್ಯಾಬಾಳ್ಯ ಬಯಲಾಟ ಕಲಾ ಸಂಘದಿಂದ ಸಂಗ್ಯಾಬಾಳ್ಯ ನಾಟಕ ಪ್ರದರ್ಶನ, ಸ್ಥಳ: ರಂಗಾಯಣ ಆವರಣ, ಸಂಜೆ 6.30ಕ್ಕೆ.

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ದಸರಾ–2024 ಪ್ರಯುಕ್ತ ವಿಶೇಷ ಕಾರ್ಯಕ್ರಮ, ವಿದುಷಿ ಶ್ರುತಿರಂಜನಿ ಅವರಿಂದ ಕರ್ನಾಟಕ ಸಂಗೀತ, ಸ್ಥಳ: ಎಸ್‌ಬಿಎಂ ಮತ್ತು ಇತರ ಬ್ಯಾಂಕ್ ನೌಕರರ ಕ್ಷೇಮಾಭಿವೃದ್ಧಿ ಬಡಾವಣೆ, ವರ್ತುಲ ರಸ್ತೆ, ಸಂಜೆ 5 ಗಂಟೆಗೆ.

■ **ವಿದ್ಯಾವರ್ಧಕ ಸಂಘ, ವಿದ್ಯಾವರ್ಧಕ ಕಾನೂನು ಕಾಲೇಜು :** ವಿಕಾಸ ಪರ್ವ–2024–25ನೇ ಸಾಲಿನ ಹೊಸ ವಿದ್ಯಾರ್ಥಿಗಳಿಗೆ ಮೂರು ದಿನಗಳ ಪುನಶ್ಚೇತನ ಕಾರ್ಯಕ್ರಮ, ಸ್ಥಳ: ಪ್ರೊ. ಪಿ.ಎಂ. ಚಿಕ್ಕಬೋರಯ್ಯ ಹಾಲ್, ಕಾಲೇಜು ಆವರಣ, ಬೆಳಗ್ಗೆ 10 ಗಂಟೆಯಿಂದ.

■ **ಎನ್‌ಜೆಎಸ್ ಚಾರಿಟೆಬಲ್ ಟ್ರಸ್ಟ್, ಮೈಸೂರು ವೀರಸಜ್ಜನ ಸಂಘ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಕಂಠಿ ಮಲ್ಲಣ್ಣನವರ ಕಲ್ಯಾಣ ಮಂಟಪ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರ, ಕಬೀರ್ ರಸ್ತೆ, ಮಂಡಿ ಮೊಹಲ್ಲಾ, ಬೆಳಗ್ಗೆ 9.30ರಿಂದ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 8 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 173 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಜಾತಿ ಗಣತಿ ವರದಿ ಜಾರಿ ಸಂಬಂಧ

ಸಂಪುಟದಲ್ಲಿ ಚರ್ಚೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಹಿತಿ ● ವರದಿ ಸಂಬಂಧ ಹಿಂದುಳಿದ ವರ್ಗದ ಸಚಿವರು, ಶಾಸಕರ ಸಭೆ ನಂತರ ನಿರ್ಧಾರ ● ಒಕ್ಕಲಿಗರು, ವೀರಶೈವ ಲಿಂಗಾಯತರ ಆಕ್ಷೇಪ; ವರದಿ 'ಅವೈಜ್ಞಾನಿಕ'





ಜಾತಿ ಗಣತಿ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಚಿವರು, ಶಾಸಕರ ಜೊತೆ ಸಭೆ ನಡೆಸಿದರು.

ಬೆಂಗಳೂರು: ಜಾತಿ ಗಣತಿ (ಸಾಮಾಜಿಕ–ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ) ವರದಿ ಜಾರಿಗೊಳಿಸುವ ಸಂಬಂಧ ಅ.18 ರಂದು ನಡೆಯುವ ಸಂಪುಟ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಹೇಳಿದ್ದಾರೆ.

ಜಾತಿ ಗಣತಿ ವರದಿ ಕುರಿತು ಇಂದು ಹಿಂದುಳಿದ ವರ್ಗಗಳ ಸಚಿವರು ಮತ್ತು ಶಾಸಕರೊಂದಿಗೆ ಸಭೆ ನಡೆಸಿದ ನಂತರ ವಿಧಾನಸೌಧದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಸಂಸದರಿಗೂ ಈ ಸಭೆಗೆ ಆಹ್ವಾನಿಸಲಾಗಿತ್ತು. ಆದರೆ ಯಾರೂ ಬಂದಿಲ್ಲ. ಬಿಜೆಪಿ ಎಂಎಲ್‌ಸಿ ಎನ್.ರವಿಕುಮಾರ್ ಸೇರಿದಂತೆ ಸುಮಾರು 30 ಶಾಸಕರು ಸಭೆಯಲ್ಲಿ ಪಾಲ್ಗೊಂಡಿದ್ದರು. ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯನ್ನು ಅಂಗೀಕಾರ ಮಾಡಿ, ಜಾರಿಗೆ ತರಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸಿದ್ದಾರೆ ಎಂದರು.

ಇಡೀ ದೇಶದಲ್ಲಿ ಇಂತಹ ಸಮೀಕ್ಷೆ ನಡೆಸಿದ ಪ್ರಥಮ ರಾಜ್ಯ ಕರ್ನಾಟಕ. ಅ.18ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿದ ನಂತರ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಿಎಂ ತಿಳಿಸಿದ್ದಾರೆ. ಇದು ಹಿಂದುಳಿದ ವರ್ಗಗಳ ಜಾತಿ ಸಮೀಕ್ಷೆ ಮಾತ್ರ ಅಲ್ಲ ಎಂದು ಸ್ಪಷ್ಟಪಡಿಸಲು ಬಯಸುತ್ತೇನೆ. ಇದು 7 ಕೋಟಿ ಕನ್ನಡಿಗರ ಸಮೀಕ್ಷೆಯಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು. 2013–18ರಲ್ಲಿ ನಾನು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಎಚ್.ಕಾಂತರಾಜು ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಆಯೋಗದವರು ಸಾಕಷ್ಟು ಸಮಯ ತೆಗೆದುಕೊಂಡು ಸಮೀಕ್ಷೆ ನಡೆಸಿದ್ದಾರೆ. ರಾಜ್ಯದ ಮನೆಮನೆಗೆ ಭೇಟಿ ನೀಡಿ ಸಮೀಕ್ಷೆ ಮಾಡಿರುವುದಾಗಿ ಕಾಂತರಾಜು ತಿಳಿಸಿದ್ದಾರೆ. ನಾನು ಇಲ್ಲಿಯವರೆಗೂ ವರದಿಯನ್ನು ಪರಿಶೀಲಿಸಿಲ್ಲ.

ಹಿಂದೆ ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಕಾಂತರಾಜು ವರದಿ ಪೂರ್ಣಗೊಂಡಿರಲಿಲ್ಲ. ಆದ್ದರಿಂದ ನನ್ನ ಅವಧಿಯಲ್ಲಿ ಜಾತಿ ಗಣತಿ ವರದಿಯನ್ನು ಸ್ವೀಕರಿಸಲು ಮತ್ತು ಜಾರಿಗೊಳಿಸಲು ಸಾಧ್ಯವಾಗಿರಲಿಲ್ಲ. ■ 6ನೇ ಪುಟಕ್ಕೆ

ತಪ್ಪುಗಳ ಮುಚ್ಚಿಕೊಳ್ಳಲು ಜಾತಿ ಗಣತಿ ಮುನ್ನೆಲೆಗೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕೇಂದ್ರ ಸಚಿವ ಕುಮಾರಸ್ವಾಮಿ ವಾಗ್ದಾಳಿ ● ಮುಡಾದ ಹಗರಣದಿಂದ ಜನರ ಗಮನ ಬೇರೆಡೆ ಸೆಳೆಯುವ ತಂತ್ರವೂ ಇದಾಗಿದೆ ● ಇಷ್ಟು ದಿನ ಏಕೆ ಇದರ ಬಗ್ಗೆ ಸೊಲ್ಲೆತ್ತಲಿಲ್ಲ



ಬೆಂಗಳೂರು,ಅ.7(ಕೆಎಂಶಿ)–ತಮ್ಮ ಅಧಿಕಾರಾವಧಿಯಲ್ಲಿ ಮಾಡಿರುವ ತಪ್ಪುಗಳನ್ನು ಮುಚ್ಚಿಹಾಕಲು ಜಾತಿ ಗಣತಿ ವಿಷಯವನ್ನು ಮುನ್ನೆಲೆಗೆ ತಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನಾಟಕ ಮಾಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಆರೋಪಿಸಿದ್ದಾರೆ. ಮುಡಾ ಹಗರಣದಿಂದ ಜನರ ಗಮನ ಬೇರೆಡೆಗೆ ಸೆಳೆಯಲು ಜಾತಿಗಣತಿ ವಿಷಯ ವೈಭವೀಕರಿಸುವ ಕಾರ್ಯ ಮಾಡಲಾಗುತ್ತಿದೆ ಎಂದರು. ■ 6ನೇ ಪುಟಕ್ಕೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿಯವರಿಗೆ 14 ನಿವೇಶನ ಮಂಜೂರು ವಿವಾದ ಪ್ರಕರಣ

ದಾಖಲಾತಿ ನೀಡುವಂತೆ ಮುಡಾಗೆ ಇಡಿ ತಾಕೀತು!

ಮೊದಲೇ ಹೆಣಗಾಡುತ್ತಿದ್ದ ಮುಡಾ ಅಧಿಕಾರಿಗಳಿಗೆ ಚಳಿ–ಜ್ವರ



ಮೈಸೂರು, ಅ.7(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಅವರಿಗೆ ಮುಡಾದಿಂದ 14 ನಿವೇಶನ ಮಂಜೂರಾಗಿರುವ ಪ್ರಕರಣ ಸಂಬಂಧ ಸಮಗ್ರ ದಾಖಲಾತಿ ನೀಡುವಂತೆ ಇಡಿ (ಜಾರಿ ನಿರ್ದೇಶನಾಲಯ) ಮುಡಾಗೆ ಸೂಚನೆ ನೀಡಿದೆ.

ಪಾರ್ವತಿ ಅವರಿಗೆ ದಾನವಾಗಿ ಬಂದಿರುವ ಮೈಸೂರಿನ ಕೆಸರೆ ಸರ್ವೆ ನಂಬರ್ 464 ರಲ್ಲಿನ 3.16 ಎಕರೆ ಭೂಮಿ, ಅದರ ಡಿ ನೋಟಿಫೈ, ತರುವಾಯ ಅದಕ್ಕೆ ಪರ್ಯಾಯವಾಗಿ ವಿಜಯನಗರದಲ್ಲಿ ಮಂಜೂರಾಗಿರುವ 14 ನಿವೇಶನದ ದಾಖಲಾತಿಗಳನ್ನು ನೀಡುವಂತೆ ಇಡಿ ಅಧಿಕಾರಿಗಳು ತಾಕೀತು ಮಾಡಿದ್ದಾರೆ.

ಇಡೀ ಪ್ರಕರಣ ಸಂಬಂಧ ಎಲ್ಲಾ ದಾಖಲಾತಿಗಳನ್ನು ಬೆಂಗಳೂರಿನ ಶಾಂತಿನಗರದಲ್ಲಿರುವ ಇಡಿ ಕಚೇರಿಗೆ ಕೂಡಲೇ ತಲುಪಿಸುವಂತೆ ಸೂಚನೆ ನೀಡಲಾಗಿದೆ.

ಈಗಾಗಲೇ ಲೋಕಾಯುಕ್ತ ಹಾಗೂ ನ್ಯಾಯಮೂರ್ತಿ ಪಿ.ಎನ್.ದೇಸಾಯಿ ಆಯೋಗಕ್ಕೆ ಕಂತೆ ಕಂತೆ ದಾಖಲಾತಿ ನೀಡಬೇಕಾಗಿ ಬಂದಿರುವ ಮುಡಾ ಅಧಿಕಾರಿಗಳಿಗೆ, ಈಗ ಇಡಿಗೂ ದಾಖಲಾತಿ ಸಲ್ಲಿಸುವುದು ದೊಡ್ಡ ತಲೆನೋವಾಗಿ ಪರಿಣಮಿಸಿದೆ. ಸಿದ್ದರಾಮಯ್ಯ ಅವರ ಪ್ರಕರಣ ಸಂಬಂಧ ಎಲ್ಲಾ ದಾಖಲಾತಿಗಳನ್ನು ಸಂಗ್ರಹಿಸಿ ಅವುಗಳನ್ನು ದೃಢೀಕರಿಸಿ ಇಡಿಗೆ ಸಲ್ಲಿಸಬೇಕಿದೆ. ಈಗಾಗಲೇ ಇಡಿಯವರು ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ ಸೇರಿದಂತೆ ಇತರರ ವಿರುದ್ಧ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅನ್ವಯ ಇಸಿಐಆರ್ (ಎನ್‌ಫೋರ್ಸ್‌ಮೆಂಟ್ ಕೇಸ್ ಇನ್ಫರ್ಮೇಷನ್ ರಿಪೋರ್ಟ್) ದಾಖಲಿಸಿದ್ದು, ತನಿಖಾ ಪ್ರಕ್ರಿಯೆಯನ್ನು ಚುರುಕುಗೊಳಿಸಿದೆ. ಸರ್ಕಾರದ ಹಂತದಲ್ಲೇ ದಾಖಲಾತಿ ನೀಡುವ ವಿಚಾರದಲ್ಲಿ ಮುಡಾ ಅಧಿಕಾರಿಗಳು ಅಷ್ಟೇನು ಗಂಭೀರವಾಗಿ ಪರಿಗಣಿಸಿಲ್ಲ. ಆದರೆ ಇಡಿ ಸೂಚನೆ ಲಘುವಾಗಿ ಪರಿಗಣಿಸುವಂತಿಲ್ಲ. ಮೂರ್ನಾಲ್ಕು ದಿನದಲ್ಲೇ ಎಲ್ಲಾ ದಾಖಲಾತಿಗಳನ್ನು ಸಲ್ಲಿಸಬೇಕಾದ ಅನಿವಾರ್ಯತೆ ಎದುರಾಗಿದೆ.

ಲೋಕಾಯುಕ್ತರ ತನಿಖೆ ಮತ್ತಷ್ಟು ಚುರುಕು



ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ದಾಖಲಾಗಿರುವ FIR ಸಂಬಂಧ ಲೋಕಾಯುಕ್ತ ಎಸ್ಪಿ ಉದೇಶ್ ನೇತೃತ್ವದ ತಂಡ ಇಂದು ಕೂಡ ಹಲವು ದಾಖಲಾತಿಗಳನ್ನು ಪರಿಶೀಲನೆ ನಡೆಸಿತು. ಸಾಮಾನ್ಯವಾಗಿ ಯಾವುದೇ ಸರ್ಕಾರಿ ಕಚೇರಿಯಲ್ಲಿ 10.30ರಿಂದ ಕಾರ್ಯ ನಿರ್ವಹಣೆ ಆರಂಭವಾಗುತ್ತದೆ. ಆದರೆ ಲೋಕಾಯುಕ್ತ ಅಧಿಕಾರಿಗಳು ಇಂದು ಬೆಳಿಗ್ಗೆ 9 ಗಂಟೆಗೇ ಕಚೇರಿಯಲ್ಲಿ ಕಾರ್ಯನಿರತರಾಗುತ್ತಿದ್ದಾರೆ. ಈಗಾಗಲೇ ಮುಡಾ, ತಾಲೂಕು ಕಚೇರಿ ಹಾಗೂ ಎಡಿಎಲ್‌ಆರ್‌ನಲ್ಲಿ ಸಾವಿರಾರು ಪುಟಗಳ ದಾಖಲಾತಿಗಳನ್ನು ಸಂಗ್ರಹಿಸಿರುವ ಲೋಕಾಯುಕ್ತರು, ಇಂದು ದೂರುದಾರ ಸ್ನೇಹಮಯಿ ಕೃಷ್ಣ ನೀಡಿರುವ ದಾಖಲಾತಿ ಹಾಗೂ ತಾವು ಸಂಗ್ರಹಿಸಿರುವ ದಾಖಲಾತಿಗಳನ್ನು ತಾಳೆ ಹಾಕುತ್ತಿದ್ದಾರೆ.

ಲೋಕಾಯುಕ್ತ ಕಚೇರಿಯ 20ಕ್ಕೂ ಹೆಚ್ಚು ಅಧಿಕಾರಿಗಳು ಇಂದು ದೃಢೀಕೃತ ಪ್ರತಿ ಕಾಪಿಗಳನ್ನು ಅವಲೋಕಿಸಿದರು. ದಾಖಲಾತಿಗಳ ಆಧಾರದ ಮೇಲೆ ವರದಿ ತಯಾರಿಯಲ್ಲಿ ತೊಡಗಿದ್ದಾರೆ. ಅಗತ್ಯ ಬಿದ್ದರೆ ಸ್ನೇಹಮಯಿ ಕೃಷ್ಣಗೆ ಮತ್ತೆ ಸಮನ್ಸ್ ನೀಡಿ ವಿಚಾರಣೆ ನಡೆಸುವ ಸಾಧ್ಯತೆ ಇದೆ.

ಇ–ಖಾತೆಗೆ ಯಾವುದೇ ಕಾಲಮಿತಿ ಇಲ್ಲ

ಬೆಂಗಳೂರು: ಖಾತೆ ಇಲ್ಲದೆಯೇ ನಿವೇಶನಗಳು ಮಾರಾಟ ಆಗುತ್ತಿವೆ. ಇದು ಮಧ್ಯವರ್ತಿಗಳಿಗೆ ಅನುಕೂಲಕಾರಿ. ಖಾತೆ ಇಲ್ಲದ ಸೈಟ್‌ಗಳಿಗೆ ಶಾಶ್ವತ ಪರಿಹಾರ ಕೊಡುತ್ತೇವೆ. ಇದಕ್ಕೆ ಯಾವುದೇ ಕಾಲಮಿತಿ ಇಲ್ಲ. ಯಾರೂ ಆತುರ ಪಡಬೇಕಾದ ಅವಶ್ಯಕತೆ ಇಲ್ಲ ಎಂದು ಕಂದಾಯ ಸಚಿವ ಕೃಷ್ಣಭೈರೇಗೌಡ ಸ್ಪಷ್ಟನೆ ನೀಡಿದ್ದಾರೆ. ತುರ್ತು ಪತ್ರಿಕಾಗೋಷ್ಠಿ ಕರೆದು ಮಾತನಾಡಿದ ಅವರು, ಬಿಬಿಎಂಪಿ ವ್ಯಾಪ್ತಿಯ ಆಸ್ತಿಗಳಿಗೆ ಮಾಲೀಕರು ಇ–ಖಾತಾ ಪಡೆಯುವ ಬಗ್ಗೆ ಸಾರ್ವಜನಿಕ



ವಲಯದಲ್ಲಿ ಸಾಕಷ್ಟು ಗೊಂದಲಗಳಿವೆ. ಹೀಗಾಗಿ ಜನರ ಗೊಂದಲಗಳಿಗೆ ಸ್ಪಷ್ಟನೆ ನೀಡಿದ್ದಾರೆ. ಕೆಲವು ಅನುಕೂಲತೆಗಳನ್ನು ನಮ್ಮ ಗಮನಕ್ಕೆ ತಂದಿದ್ದಾರೆ. ಡಿಸಿಎಂ ಡಿಕೆ ಶಿವಕುಮಾರ್ ಸೂಚನೆಯಂತೆ ಕೆಲ ಸರಳೀಕರಣ ಮಾಡಿದ್ದೇವೆ. ಎಆರ್‌ಒ ಕಚೇರಿಯಲ್ಲಿ ಹೆಲ್ಪ್ ಡೆಸ್ಕ್ ಮಾಡುತ್ತಿದ್ದೇವೆ. ಇ–ಖಾತೆಗೆ ಸಹಾಯ ಮಾಡುವುದು ಇವರ ಜವಾಬ್ದಾರಿ. ಇದು ಬಿಬಿಎಂಪಿ ವ್ಯಾಪ್ತಿಯವರಿಗೆ ಅನುಕೂಲ ಆಗಲಿದೆ ಎಂದು ತಿಳಿಸಿದ್ದಾರೆ. 2–3 ದಿನಗಳೊಳಗೆ ಬೆಂಗಳೂರು ಒನ್‌ಗೆ ಅಪ್ಲೋಡ್ ಮಾಡಲಿದ್ದೇವೆ. ಖಾತಾ ನಿರ್ವಹಣೆ ಬಹಳ ತೊಂದರೆ ಆಗಿದೆ. ಇದಕ್ಕೆ ಇ–ಖಾತೆ ಒಂದೇ ಶಾಶ್ವತ ಪರಿಹಾರ. ಮನೆಯಿಂದಲೇ ಜನರು ಇ–ಖಾತೆ ಪಡೆಯಬಹುದು. ಇದು ಪ್ರಾರಂಭಿಕವಾಗಿ ಸಮಸ್ಯೆ ಆಗಬಹುದು. ಬಳಿಕ ಸಮಸ್ಯೆ ಬಗೆಹರಿಯುತ್ತೆ ಎಂದು ಹೇಳಿದ್ದಾರೆ.

ಹಿಂದುಳಿದ ವರ್ಗಗಳ ಆಯೋಗ ವರದಿ ಅಂಗೀಕಾರದ ಬಗ್ಗೆ ಚರ್ಚೆ ಆಗಿದೆ. ಸಮುದಾಯದ ಸ್ವಾಮೀಜಿಗಳು ಇದರ ಬಗ್ಗೆ ಪ್ರಶ್ನೆ ಮಾಡಿದ್ದಾರೆ. ನಮ್ಮನ್ನ ಕರೆದು ಈ ಬಗ್ಗೆ ಚರ್ಚೆ ಮಾಡಿ ಎಂದಿದ್ದಾರೆ. ಈ ನಡುವೆ ಅಂಕಿ–ಅಂಶಗಳು ಸಹ ಸೋರಿಕೆ ಆಗಿವೆ ಅಂದಿದ್ದಾರೆ. ಕ್ಯಾಬಿನೆಟ್‌ನಲ್ಲಿ ಮಂಡನೆ ಮಾಡುತ್ತೇನೆ ಎಂದು ಸಿಎಂ ಹೇಳಿದ್ದಾರೆ.

ಕ್ಯಾಬಿನೆಟ್‌ನಲ್ಲಿ ಚರ್ಚೆ ಮಾಡಿ ಮುಂದಿನ ನಿರ್ಧಾರ ಮಾಡುತ್ತೇವೆ. ವೈಜ್ಞಾನಿಕವಾಗಿ ಹೋಗೋಣ ಎಂದು ಸಿಎಂಗೆ ಹೇಳಿದ್ದೇನೆ. ಕೆಲ ಹಳ್ಳಿಗಳಲ್ಲಿ ಸರ್ವೇ ಸಮಸ್ಯೆ ಇದೆ ಅಂತಿದ್ದಾರೆ. ರ್‍ಯಾಂಡಮ್ ಆಗಿ ತಗೊಂಡು ನೋಡಿದರೆ ಗೊತ್ತಾಗುತ್ತೆ. ಸಾರ್ವಜನಿಕ ವಲಯದಲ್ಲಿ ಈ ಬಗ್ಗೆ ಚರ್ಚೆ ಆಗಲಿ. ಒಂದೇ ಬಾರಿ ವರದಿ ಜಾರಿ ಮಾಡಲ್ಲ. ಚರ್ಚೆಗೆ ಅವಕಾಶ ಇದ್ದೇ ಇದೆ ಎಂದಿದ್ದಾರೆ.

ಕೆಆರ್‌ಎಸ್ ಅಣೆಕಟ್ಟೆಯ ಹಳೇ ಕ್ರೆಸ್ಟ್‌ಗೇಟ್‌ಗಳ ಗುಜರಿಗೆ ಹಾಕಲು ಸರ್ಕಾರದ ಸೂಚನೆ

ಈ ಪಾರಂಪರಿಕ ಗೇಟ್‌ಗಳ ಸಂರಕ್ಷಿಸುವಂತೆ ರೈತರ ಸಲಹೆ



ಮೈಸೂರು, ಅ. 7(ಆರ್‌ಕೆ)–ತುಕ್ಕು ಹಿಡಿದು, ತೀವ್ರವಾಗಿ ಶಿಥಿಲಗೊಂಡು ನೀರು ಸೋರಿಕೆಯಾಗುತ್ತಿದೆ ಎಂಬ ಕಾರಣಕ್ಕೆ ಬದಲಾಯಿಸಲಾಗಿದ್ದ ಕೃಷ್ಣರಾಜಸಾಗರ (ಕೆಆರ್‌ಎಸ್) ಅಣೆಕಟ್ಟೆಯ ಕಬ್ಬಿಣದ ಕ್ರೆಸ್ಟ್‌ಗೇಟ್‌ಗಳನ್ನು ಗುಜರಿಗೆ ಹಾಕದಂತೆ ಸರ್ಕಾರ ಸೂಚನೆ ನೀಡಿದೆ.

2022ರ ಜುಲೈ ತಿಂಗಳಲ್ಲಿ ಕಾವೇರಿ ನೀರಾವರಿ ನಿಗಮ (ಸಿಎನ್‌ಎನ್)ದ ವತಿಯಿಂದ ಐತಿಹಾಸಿಕ ಕೆಆರ್‌ಎಸ್ ಅಣೆಕಟ್ಟೆಯ ಹಳೇ ಕ್ರೆಸ್ಟ್‌ಗೇಟ್‌ಗಳ ತೆಗೆದು ಹಾಕಿ ಹೊಸ ಗೇಟ್‌ಗಳನ್ನು ಅಳವಡಿಸಲಾಗಿತ್ತು. ಖ್ಯಾತ ಇಂಜಿನಿಯರ್ ಸರ್ ಎಂ. ವಿಶ್ವೇಶ್ವರಯ್ಯ ವಿನ್ಯಾಸಗೊಳಿಸಿದ್ದ ಈ ಕ್ರೆಸ್ಟ್‌ಗೇಟ್‌ಗಳಿಗೆ ವಿಶೇಷತೆ ಇದೆ. ಹಾಗಾಗಿ ಅವುಗಳ ಮ್ಯೂಸಿಯಂನಲ್ಲಿ ಸಂರಕ್ಷಿಸಿ, ಪ್ರವಾಸಿಗರ ವೀಕ್ಷಣೆಗೆ ಅವಕಾಶ ಕಲ್ಪಿಸುವುದಾಗಿ ಘೋಷಿಸಲಾಗಿತ್ತು. ವಿಶ್ವ ಬ್ಯಾಂಕ್‌ನ ಅಣೆಕಟ್ಟೆ ಪುನಶ್ಚೇತನ ಮತ್ತು ಅಭಿವೃದ್ಧಿ ಯೋಜನೆ (World Bank under Dam Rehabilitation and Improvement Project)ಯಡಿ ಕರ್ನಾಟಕ ರಾಜ್ಯ ಸರ್ಕಾರವು ಕೆಆರ್‌ಎಸ್ ಅಣೆಕಟ್ಟೆಯ ಕಬ್ಬಿಣದ ಹಳೇ ಗೇಟ್‌ಗಳನ್ನು ತೆಗೆದು ಅದೇ ವಿನ್ಯಾಸದ ಹೊಸ ಗೇಟ್‌ಗಳನ್ನು ಅಳವಡಿಸಿತ್ತು. ಇದೀಗ ಕೃಷ್ಣರಾಜಸಾಗರ ಸೇರಿದಂತೆ ಕಾವೇರಿ ನೀರಾವರಿ ನಿಗಮದ ವ್ಯಾಪ್ತಿಗೆ ಬರುವ ಅಣೆಕಟ್ಟೆಗಳ ಅನುಪಯುಕ್ತ ಕಬ್ಬಿಣದ ಪದಾರ್ಥಗಳನ್ನು ಕೆಜಿಗೆ 6 ರೂ. ಮತ್ತು ಶೇ. 40ರಷ್ಟು ಹೆಚ್ಚುವರಿ ದರದಲ್ಲಿ ಗುಜರಿಗೆ ಮಾರಾಟ ಮಾಡುವಂತೆ ಸರ್ಕಾರ ಆದೇಶಿಸಿದೆ.

ಈ ವಿಷಯ ತಿಳಿದು ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಮಂಡ್ಯ ಭಾಗದ ರೈತ ಮುಖಂಡರು, ನಾಲ್ವಡಿ ಕೃಷ್ಣರಾಜ ಒಡೆಯರ್ ಕೆಆರ್‌ಎಸ್ ಅಣೆಕಟ್ಟೆ ನಿರ್ಮಿಸಿದಾಗ ಅಳವಡಿಸಿದ ಅಪರೂಪದ ■ 6ನೇ ಪುಟಕ್ಕೆ

ಕೆಜಿಎಫ್ ಖ್ಯಾತಿಯ ರವಿ ಬಸ್ರೂರು ಅಬ್ಬರದ ಸಂಗೀತ

ಯುವ ಸಮೂಹ ಫಿದಾ!

● ಶಾಲಾ–ಕಾಲೇಜು ಮಕ್ಕಳ ನೃತ್ಯ ರೂಪಕ ನಯನ ಮನೋಹರ
● ಧ್ವನಿ ಭಾನುಶಾಲಿ ಗಾಯನಕ್ಕೆ ಮಾರುಹೋದ ಪ್ರೇಕ್ಷಕ



ಖ್ಯಾತ ಸಂಗೀತ ಸಂಯೋಜಕ ರವಿ ಬಸ್ರೂರು

ಮೈಸೂರು, ಅ.7(ಎಂಕೆ)–ರವಿ ಬಸ್ರೂರು ಸಂಗೀತ ಸಂಯೋಜನೆಯ ಸಿಡಿಲಬ್ಬರದ ನಾದ ತರಂಗಗಳಲ್ಲಿ ತೇಲಿಹೋದ ಯುವ ಸಮೂಹ...ಧ್ವನಿ ಭಾನುಶಾಲಿ ಗಾನ ಮಾಧುರ್ಯದ ನಡುವೆ ಜಾನಪದ ಝೇಂಕಾರ, ಕನ್ನಡದ ಕಂಪು ಪ್ರೇಕ್ಷಕ ಸಾಗರದ ಮನಸೂರೆಗೊಂಡಿತು...!

ಮೈಸೂರು ಹೊರವಲಯದ ರಿಂಗ್ ರಸ್ತೆಯಲ್ಲಿರುವ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದ ಸಮೀಪದಲ್ಲಿ ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಮೆಗಾ ಮನರಂಜನಾ ಭವ್ಯ ವೇದಿಕೆ ಯುವ ದಸರಾ ಕಾರ್ಯಕ್ರಮದ ಎರಡನೇ ದಿನವಾದ ಸೋಮವಾರ ಸ್ಯಾಂಡಲ್‌ವುಡ್‌ನ ಖ್ಯಾತ ಸಂಗೀತ ಸಂಯೋಜಕ ರವಿ ಬಸ್ರೂರ್ ಹಾಗೂ ಖ್ಯಾತ ಬಾಲಿವುಡ್ ಗಾಯಕಿ ಧ್ವನಿ ಭಾನುಶಾಲಿ ನೃತ್ಯ–ಸಂಗೀತ ಗಾನ ಮಾಧುರ್ಯ ಹಾಗೂ ನೃತ್ಯ ಸಂಯೋಜಕರ ರಿದಂ ಡ್ಯಾನ್ಸ್, ವಿವಿಧ ಕಾಲೇಜು ತಂಡಗಳ ಜಾನಪದ ಝೇಂಕಾರ ನೋಡುಗರ ಕಣ್ಮನಗಳಿಗೆ ಪುಳಕ ನೀಡಿತು.

ಆರಂಭದಲ್ಲಿ ಕೆ.ಆರ್.ನಗರ ಮತ್ತು ಮಡಿಕೇರಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ತಂಡ ಮಹಿಳಾ ಸಬಲೀಕರಣ ಕುರಿತು ನೃತ್ಯ ರೂಪಕ ಪ್ರದರ್ಶನದ ಮೂಲಕ ಮೆಗಾ ಮನರಂಜನೆಗೆ ಮುನ್ನುಡಿ ಬರೆದರು. ನಂತರ ಮಂಡ್ಯದ ಪಿಇಎಸ್ ಇಂಜಿನಿಯರಿಂಗ್ ಕಾಲೇಜು ಮಕ್ಕಳ ಮಲ್ಲಗಂಬ ಸಾಹಸ ರೋಮಾಂಚನ ನೀಡಿದರೆ, ಮೈಸೂರಿನ ಟೆರಿಷಿಯನ್ ಕಾಲೇಜು ವಿದ್ಯಾರ್ಥಿನಿಯರ ಸಾಂಪ್ರದಾಯಿಕ ನೃತ್ಯ ಪ್ರದರ್ಶನ ಯುವ ಸಮೂಹವನ್ನು ವೇದಿಕೆಯತ್ತಾ ಆಹ್ವಾನಿಸಿತು.

ಮೈಸೂರು ಆರ್‌ಟಿ ನಗರದ ಕರುಣಾಮಯಿ ವಿಶೇಷ ಶಾಲೆಯ ವಿಶೇಷಚೇತನರ ಕನ್ನಡಾಭಿಮಾನ, ಶ್ರೀ ವಾಣಿವಿಲಾಸ ಬಾಲಕಿಯರ ಪದವಿ ಪೂರ್ವ ಕಾಲೇಜು ತಂಡ ನಾಲ್ವಡಿ ಸ್ಮರಣೆ, ಒಂಟಿಕೊಪ್ಪಲು ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ವಿಭಾಗದ ■ 6ನೇ ಪುಟಕ್ಕೆ





ಬಾಲಿವುಡ್ ಗಾಯಕಿ ಧ್ವನಿ ಭಾನುಶಾಲಿ ಗಾನ ಮಾಧುರ್ಯ

ನಕ್ಕರೆ ಅದೇ ಸ್ವರ್ಗ

ಹೆಂಡತಿ ಮೆಸೇಜು

ತವರು ಮನೆಗೆ ಹೋದ ಹೆಂಡತಿ ಗಂಡನಿಗೆ ಕಳಿಸಿದ ಮೆಸೇಜ್ ಹೀಗಿತ್ತು; ಕೆಲಸದ ಮೀನಾಗೆ ಸಂಬಳ ಚುಕ್ತಾ ಮಾಡಿದ್ದೇನೆ. ನಾನು ಊರಿಂದ ಬರುವವರೆಗೂ ಅವಳು ಬರಲ್ಲ. ಅವರಮ್ಮ ಬರುತ್ತಾರೆ...!

ಮೈಸೂರು ಮಿತ್ರ

ಮಂಗಳವಾರ, 8 ಅಕ್ಟೋಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........


ಎಲ್ಲರನ್ನೂ ಮೆಚ್ಚಿಸಲು ಯತ್ನಿಸುವವನು
ಕೊನೆಗೆ ಯಾರನ್ನೂ ಮೆಚ್ಚಿಸುವುದಿಲ್ಲ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರಲ್ಲ

ನಿಮ್ಮ ಪತ್ರಗಳು

■ ಲಿಂಗಾಂಬುದಿ ಕೆರೆಯ ಫಲಪುಷ್ಪ ಪ್ರದರ್ಶನದಲ್ಲಿ ನಗದು ರೂಪದಲ್ಲೇ ಹಣ ನೀಡಬೇಕೆಂಬ ಧೋರಣೆ ಸರಿಯೇ

ಮಾನ್ಯರೆ,


LINGAMBUDHI BOTANICAL GARDEN MYSORE MACHINE 01
TICKET ESTIMATE
GRAND TOTAL - 60

ಬಹು ನಿರೀಕ್ಷಿತ ದಸರಾ 2024 ಅದ್ಧೂರಿಯಾಗಿಯೇ ಪ್ರಾರಂಭವಾಗಿದೆ. ಈ ಬಾರಿ ಸ್ಥಳೀಯರು ಹಾಗೂ ಪ್ರವಾಸಿಗರಿಗೆ ಅನುಕೂಲವಾಗಲಿ ಎಂದು ಸರ್ಕಾರ ಲಿಂಗಾಂಬುದಿ ಕೆರೆಯ ಪಕ್ಕದಲ್ಲಿ ಸಸ್ಯೋದ್ಯಾನದಲ್ಲಿ ಫಲಪುಷ್ಪ ಪ್ರದರ್ಶನ ಏರ್ಪಡಿಸಿದೆ ಅದನ್ನು ನೋಡಲು ಬರುವ ಸಾರ್ವಜನಿಕರು ನಗದು ರೂಪದಲ್ಲೇ ಹಣ ನೀಡಿ ಒಳಗೆ ಹೋಗಬೇಕೆಂಬ ಧೋರಣೆ. ಹಾಗೆಯೇ ಈ ಡಿಜಿಟಲ್ ಯುಗದಲ್ಲೂ scanner ವ್ಯವಸ್ಥೆ ಇಲ್ಲ. ಕೇಳಲು ಹೋದಾಗ ಜಗಳಕ್ಕೆ ಮುಗಿಬಿದ್ದ ಸಿಬ್ಬಂದಿಯ ಧೋರಣೆ ಸರ್ಕಾರದ ಕೆಟ್ಟ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ.

ಹಾಗೆಯೇ ನಾವು ಮಧ್ಯಾಹ್ನ 12.45ಕ್ಕೆ ದ್ವಾರ ಪ್ರವೇಶ ಮಾಡಿದರೆ ಟಿಕೆಟ್‌ನಲ್ಲಿ ಹನ್ನೆರಡು ಗಂಟೆಯೆಂದು ತೋರಿಸುತ್ತಿತ್ತು ಅದನ್ನು ಪ್ರಶ್ನೆ ಮಾಡಿದರೆ ಉದಾಸೀನಾ ಉತ್ತರ. ಜೊತೆಗೆ ಒಳಗೆ ಟಿಕೆಟ್ ಹರಿಯದೆ ಹಾಗೆಯೇ ಕಳಿಸುತ್ತಿದ್ದರು. ಅದೇ ಟಿಕೆಟ್ ವಾಪಸ್ ಬಂದು ಮಾರಾಟವಾಗುತ್ತಿರುವ ಅನುಮಾನ, ನಮ್ಮ ಟಿಕೆಟ್ ಸಮಯ ನಮೂದಿಸಿದ್ದಾಗ ದೃಢಪಟ್ಟಿತು. ಟಿಕೆಟ್‌ನಲ್ಲೂ estimate ಎಂದು ನಮೂದಿಸಲಾಗಿದೆ. ಹಾಗಾದರೆ ಇದು ವಂಚನೆಯಲ್ಲವೇ?

ದಸರಾ ಹಬ್ಬವೆಂದರೆ ಇಂತಹ ಕೆಲವು ಮಂದಿಗೆ ದುಡ್ಡು ಮಾಡಲು ನೀಡುವ ಪರವಾನಗಿಯೇ ಎಂಬುದನ್ನು ದಸರಾ ಸಮಿತಿ ಹೇಳಬೇಕಾಗಿದೆ. ಈ ಬಗ್ಗೆ ತನಿಖೆ ಮಾಡಿ ಸಾರ್ವಜನಿಕರಿಗೆ ಆಗುತ್ತಿರುವ ಉಪಟಳ ಹಾಗೂ ಸರ್ಕಾರದ ಬೊಕ್ಕಸಕ್ಕೆ ಬೀಳುತ್ತಿರುವ ಕತ್ತರಿ ಬಗ್ಗೆ ಈ ಕೂಡಲೇ ಜಿಲ್ಲಾಧಿಕಾರಿಗಳು, ದಸರಾ ಉತ್ಸವ ಸಮಿತಿ ಕ್ರಮ ಕೈಗೊಳ್ಳಲಿ..ಸಾರ್ವಜನಿಕರ ವೈಭವದ ದಸರಾವನ್ನು ಕಣ್ತುಂಬಿಕೊಳ್ಳುವಲ್ಲಿ ಬರೆ ಎಳೆಯುವ ಕರ್ನಾಟಕ ಸರ್ಕಾರದ ಮೈಸೂರು ಜಿಲ್ಲಾಡಳಿತದ ಧೋರಣೆ ಸರಿಯಲ್ಲ.

ಈ ಕೂಡಲೇ ಈ ಬಗ್ಗೆ ಎಚ್ಚರವಹಿಸಿ ಸರ್ಕಾರ, ತನ್ಮೂಲಕ ನಮ್ಮಂತಹವರ ಜವಾಬ್ದಾರಿ ವರ್ತನೆಯ ಅಳಲು ಸರ್ಕಾರಕ್ಕೆ ತಲುಪುವಂತಾಗಲಿ. ಡಿಜಿಟಲ್ ಯುಗದಲ್ಲೂ ನಗದನ್ನೇ ನೀಡಬೇಕೆಂಬ ದಬ್ಬಾಳಿಕೆ ದೂರವಾಗಲಿ ಎಂಬುದೇ ನಮ್ಮ ಆಶಯ..

–ಶಿವಮೊಗ್ಗ ನಾ.ದಿನೇಶ್ ಅಡಿಗ, ಮೈಸೂರು, –ವಿ. ಗುರುದತ್ತ, ಮೈಸೂರು

■ ಯುವ ದಸರಾದಲ್ಲಿ ಪ್ರೇಕ್ಷಕರಿಗೆ ರಕ್ಷಣೆ ಇಲ್ಲ!

ಮಾನ್ಯರೆ,

ಯುವ ದಸರಾಗೆ ವರುಣಾತಂಕ (ಪತ್ರಿಕೆ ಸುದ್ದಿ 06.10.24.) ಓದಿ ದಿಗಿಲಾಯಿತು. ಮೈಸೂರಿನಲ್ಲಿ ನಡೆಯುವ ಯುವ ದಸರಾ ಕಾರ್ಯಕ್ರಮ ಮಕ್ಕಳು ಮತ್ತು ಯುವಕರಿಗೆ ಅಚ್ಚುಮೆಚ್ಚಿನ ಕಾರ್ಯಕ್ರಮ. ಇಂತಹ ಕಾರ್ಯಕ್ರಮ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುತ್ತಿದ್ದಾಗ ಪ್ರತಿ ವರ್ಷ ಪೆಂಡಾಲ್ ವ್ಯವಸ್ಥೆ ಇರುತ್ತಿತ್ತು. ಇದರಿಂದ ಜನರು ಮಳೆ ಬಂದರೂ ಯಾವುದೇ ತೊಂದರೆ, ಆತಂಕವಿಲ್ಲದೆ ಕಾರ್ಯಕ್ರಮ ನೋಡುತ್ತಿದ್ದರು. ಆದರೆ ಈ ಬಾರಿ ಕೂಡ ಮಹಾರಾಜ ಕಾಲೇಜು ಮೈದಾನದಲ್ಲೇ ನಡೆಸುವಂತೆ ಜನರಿಂದ ಒತ್ತಾಯವಿದ್ದರೂ ಲೆಕ್ಕಿಸದೆ ಲಕ್ಷ ಜನ ಸೇರುತ್ತಾರೆ ಎಂದು ಉತ್ತನಹಳ್ಳಿಯಲ್ಲಿರುವ ನೂರು ಎಕರೆ ಖಾಲಿ ಜಾಗದಲ್ಲಿ ಕಾರ್ಯಕ್ರಮ ನಡೆಸುತ್ತಿದ್ದಾರೆ. ಆದರೆ ಪೆಂಡಾಲ್ ಹಾಕದೆ ಮಳೆ ಬಂದರೆ ಜನರನ್ನು ದಿಕ್ಕಾಪಾಲಾಗುವಂತೆ ಮಾಡಿದ್ದಾರೆ. ಮಕ್ಕಳು, ಮಹಿಳೆಯರ ಗತಿ ಏನು? ದಸರೆಗೆ 40 ಕೋಟಿ ಹಣ ಖರ್ಚು ಮಾಡುವ ಸರ್ಕಾರ, 8, 5 ಹಾಗೂ ಎರಡೂವರೆ ಸಾವಿರ ರೂ.ಗಳ ವಿಐಪಿ ಟಿಕೆಟ್ ಮಾಡಿ ಜನರನ್ನು ಸುಲಿಯುವ ಕಾರ್ಯಕ್ರಮ ಆಯೋಜಕರಿಗೆ ಕನಿಷ್ಠ ಜ್ಞಾನವೂ ಬೇಡವೇ? ಜಿಲ್ಲಾ ಉಸ್ತುವಾರಿ ಸಚಿವರು ಇದ್ದೂ ಪ್ರಯೋಜನವೇನು? ಜನರ ಮನೋರಂಜನೆಗಾಗಿ ಕಾರ್ಯಕ್ರಮ ಏರ್ಪಡಿಸಿ ಜನರಿಗೆ ಕನಿಷ್ಠ ಮಳೆಯಿಂದ ರಕ್ಷಣೆ ಇಲವೆಂದರೆ ಹೇಗೆ? ಸರ್ಕಾರ ಉಳಿದ ಕಾರ್ಯಕ್ರಮಕ್ಕಾದರೂ ಕೂಡಲೇ ಪೆಂಡಾಲ್ ವ್ಯವಸ್ಥೆ ಮಾಡಲಿ.

–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.

■ ಮುಡಾದಿಂದ ಮತ್ತೊಂದು 'ದಾಖಲೆ'

ಮಾನ್ಯರೆ,

ಮುಡಾದ 14 ನಿವೇಶನಗಳ ವಿಷಯಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಅವರ ಧರ್ಮಪತ್ನಿಯವರು ಮುಡಾ ಆಯುಕ್ತರಿಗೆ ಒಂದು ಪತ್ರ ರವಾನೆ ಮಾಡಿ ತಾವು ಪಡೆದಿರುವ ಎಲ್ಲಾ 14 ನಿವೇಶನಗಳನ್ನು ಹಿಂದಿರುಗಿಸುತ್ತೇವೆ ಎಂದು ತಿಳಿಸುತ್ತಾರೆ. ಪತ್ರ ತಲುಪಿದ 24 ಗಂಟೆಯ ಅವಧಿಯೊಳಗೆ ಆಯುಕ್ತರು ಪತ್ರದ ಪರಿಶೀಲನೆ ಮಾಡಿ, ನಿವೇಶನಗಳನ್ನು ಹಿಂಪಡೆಯಲು ಆದೇಶವನ್ನು ಮಾಡಿದ್ದು ಅಲ್ಲದೆ, ಅದೇ ದಿನ ಎಲ್ಲಾ 14 ನಿವೇಶನಗಳ ಖಾತೆಯನ್ನು ರದ್ದುಗೊಳಿಸಿ ಆದೇಶ ಹೊರಡಿಸುತ್ತಾರೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಊಹಿಸಲು ಅಸಾಧ್ಯವಾದ ಅಧಿಕಾರಿಗಳ ಶರವೇಗದ ಕಾರ್ಯಕ್ಷಮತೆ. ಇದು ಕೂಡ ಮುಡಾ ಮಾಡಿರುವ ಮತ್ತೊಂದು "ದಾಖಲೆ"ಯೇ. ಈ ರೀತಿಯ ಕಾರ್ಯಕ್ಷಮತೆಯು, ಕ್ರಮಬದ್ಧವಾಗಿ ಖಾತೆ ಕೋರಿ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ನಾಗರಿಕನಿಗೂ ದೊರಕಬೇಕಲ್ಲವೇ. ನಿಯಮ ಎಲ್ಲರಿಗೂ ಒಂದೇ ಅಲ್ಲವೇ. **–ಶಿವಪ್ರಕಾಶ್ ಎ.ಎಸ್., ವಕೀಲರು, ಮೈಸೂರು.**

■ ಅಪಘಾತಕ್ಕೆ ಆಹ್ವಾನ ನೀಡುತ್ತಿರುವ ರಾಮಕೃಷ್ಣನಗರದ ರಸ್ತೆ ಕಾಮಗಾರಿ



ಮಾನ್ಯರೆ,

ಬೃಹತ್ ಕಾಮಗಾರಿಯೊಂದು ಮೈಸೂರು ನಗರದ ರಾಮಕೃಷ್ಣನಗರದಲ್ಲಿರುವ ರಮಾ ಗೋವಿಂದ ರಂಗಮಂದಿರದ ಬಳಿ ನಡೆಯುತ್ತಿದೆ ಇದು ಹಿರಿಯ ನಾಗರಿಕರಿಗೆ ಅನಾಹುತಕ್ಕೆ ಆಸ್ಪದ ನೀಡುವಂತಿದೆ. ಭಾನುವಾರ ಸಂಜೆ ನಡೆದುಕೊಂಡು ಹೊರಟ ದಂಪತಿಗಳಲ್ಲಿ ಪತ್ನಿ ಕೈಯೂರಿಕೊಂಡು ರಸ್ತೆ ದಾಟುವುದರಲ್ಲಿ ಸಫಲರಾದರೂ ಪತಿ ಕೈಜಾರಿ ಆಯತಪ್ಪಿ ರಸ್ತೆಯಲ್ಲಿ ತೋಡಿರುವ ಈ ಹಳ್ಳದಲ್ಲಿ ಬಿದ್ದು ತಲೆಗೆ ಏಟು ಬಿದ್ದು ರಕ್ತಸ್ರಾವವಾಯಿತು. ಸ್ಥಳೀಯ ದಾರಿಹೋಕರು ನೆರವು ನೀಡಿ ವೃದ್ಧರನ್ನು ಕೆಲಕಾಲದ ನಂತರ ಮೇಲೆ ಕರೆದುಕೊಂಡು ಬರುವುದರಲ್ಲಿ ಸಫಲರಾದರು. ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿಭಾಗಗಳು ತ್ವರಿತ ಗತಿಯಲ್ಲಿ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಿದರೆ ಮುಂದೆ ಆಗಬಹುದಾದ ಅನಾಹುತಗಳನ್ನು, ಅಪಘಾತಗಳನ್ನು ತಪ್ಪಿಸಬಹುದು.

– ಪೂರ್ಣಿಮಾ ಭಗವಾನ್, ಮೈಸೂರು



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಮೈಸೂರು; ಸಾಂಸ್ಕೃತಿಕ ನಗರಿ, ಕರುನಾಡಿನ ನವಿಲುಗರಿ



ಮೈಸೂರು ದಸರಾ ಎಷ್ಟೊಂದು ಸುಂದರ ಎಂಬ ಕರುಳಿನ ಕರೆ ಚಿತ್ರದ ಸಾಲುಗಳು ಮತ್ತೆ ಮತ್ತೆ ಮರುಕಳಿಸುತ್ತಿವೆ. ದಸರಾ ಎಂದರೆ ಮೈಸೂರು, ಮೈಸೂರು ಎಂದರೆ ದಸರಾ, ಎನ್ನುವಷ್ಟರ ಮಟ್ಟಿಗೆ ಒಂದಕ್ಕೊಂದು ತಳುಕು ಹಾಕಿಕೊಂಡಿರುವ ನಾಡಹಬ್ಬ, ನಾಡೋಜ ಪ್ರೊ. ಹಂಪನಾ ಅವರಿಂದ ಈ ಬಾರಿ ವಿಧ್ಯುಕ್ತವಾಗಿ ಚಾಲನೆಗೊಂಡಿದೆ.

ಮೈಸೂರು ತನ್ನ ಬೆಳಕಿನ ಕಣ್ಣುಗಳಿಂದ ಕಂಗೊಳಿ ಸುತ್ತಿದೆ. ಕುಂದಾನಗರಿ ಬೆಳಗಾವಿ, ಉದ್ಯಾನ ನಗರಿ ಬೆಂಗಳೂರು, ಸಕ್ಕರೆ ನಗರಿ ಮಂಡ್ಯ, ಕರ್ನಾಟಕದ ನವಿಲುಗರಿ, ಸಾಂಸ್ಕೃತಿಕ ನಗರಿ ಮೈಸೂರು. ನೀವೇನೇ ಹೇಳಿ ಇಂಥಾ ಊರಿನಲ್ಲಿ ಬದುಕುವುದೇ ಒಂದು ಸುಖ ಕಣ್ರಿ. ಪ್ರಪಂಚದಲ್ಲಿ ಎಂಥೆಂಥಾ ಊರುಗಳಿವೆ ಗೊತ್ತ! ಬರೀ ಅರಮನೆಗಳನ್ನೇ ನೋಡಿಕೊಂಡು ಬರುವುದಕ್ಕೇ ಕೆಲವು ಊರುಗಳಿವೆ, ಸಮುದ್ರ ನೋಡಿ ಬರುವುದಕ್ಕೇ ಊರುಗಳಿವೆ, ಬೆಟ್ಟಗಳನ್ನು ನೋಡಿ ಬರುವುದಕ್ಕೇ ಊರುಗಳಿವೆ. ಜಯಪುರ, ಗೋವಾ, ಮುನಾರ್ಸ್ ಹೀಗೆ ಸೇತುವೆಗಳನ್ನು, ರಸ್ತೆಗಳನ್ನು, ಏರ್‌ಪೋರ್ಟ್ ಗಳನ್ನು, ದ್ವೀಪಗಳನ್ನು ಸುತ್ತಿಬರುವುದಕ್ಕೆ ಎಂತಲೇ ಒಂದೊಂದಕ್ಕೂ ಒಂದೊಂದು ಊರು ಪ್ರಸಿದ್ಧಿ. ಆದರೆ 'ದಸರಾ ಸಂಸ್ಕೃತಿ'ಯನ್ನು ನೋಡಿ ಬರುವುದಕ್ಕೆ ಜನ ಮೈಸೂರಿಗೇ ಬರಬೇಕು. ಹೀಗೆ ಜನ ಸಂಸ್ಕೃತಿಯ ಸಾಂಸ್ಕೃತಿಕ ವೈಭವವನ್ನು ಮುಡಿಗೇರಿಸಿ ಕೊಂಡು ತನ್ನ ಹೆಸರಿನ ಜೊತೆ 'ಸಾಂಸ್ಕೃತಿಕ ನಗರಿ' ಎಂದು ಕರೆಸಿಕೊಂಡ ಊರಿದು. ತನ್ನ ಪರಂಪರೆಯನ್ನು, ಸಂಸ್ಕೃತಿಯನ್ನು ವಿಶ್ವವಿಖ್ಯಾತ ಮಾಡಿಕೊಂಡು ಅದರ ಕುರುಹಾಗಿ ಪ್ರತಿ ವರ್ಷ ದಸರಾ ಆಚರಿಸಿಕೊಂಡು ಬಂದ ಮೈಸೂರಿನಲ್ಲಿ ಬದುಕುವ ಜನ ನಾವು.

ದೇಶ ಸುತ್ತಿ ನೋಡು, ಕೋಶ ಓದಿ ನೋಡು ಅಂತ ಗಾದೆ ಮಾತಿದೆಯಲ್ಲ ಹಾಗೆ ತುಂಬಾ ಜನಕ್ಕೆ ಊರು ಸುತ್ತುವ ಚಟ. ಅಂಥವರು ಊರು ಸುತ್ತಿಕೊಂಡು ವಾಪಸ್ಸು ಮೈಸೂರಿಗೆ ಬರುವಾಗ ಇಲ್ಲಿನ ಗಾಳಿ ಮೈ ತಾಕಿದ ಕೂಡಲೇ ಅವರ ಮುಖದಲ್ಲಿನ ಸುಖ ನೋಡಬೇಕು ನೀವು! ಹಿಗ್ಗಿ ಹೀರೇಕಾಯಿಯಾಗಿ ಬಿಡುತ್ತಾರೆ. ಇನ್ನು ಕೆಲವರಿಗೆ ಮೈಸೂರಿನಿಂದ ಬೆಂಗಳೂರಿಗೆ ಹೋಗಿ ಬರುವುದೇ ಒಂದು ದೊಡ್ಡ ಪ್ರಯಾಸ. ಹೋದ ಮೇಲಂತೂ ಅವತ್ತು ರಾತ್ರಿಯೇ ವಾಪಸ್ಸು ಮೈಸೂರಿಗೆ ಬಂದುಬಿಡಬೇಕು. ರಾತ್ರಿ ಎಷ್ಟೊತ್ತಾದರೂ ಸರಿ ನಿದ್ದೆಗಣ್ಣಿನಲ್ಲಿಯೇ ಬಸ್ಸಿನ ಕಿಟಕಿ ತೆಗೆದು ಫೈವ್‌ಲೈಟ್ ಸರ್ಕಲ್ ನೋಡಿಬಿಡಬೇಕು. ಆಗಲೇ ಅವರಿಗೆ ಸಮಾಧಾನ. ಈ ಕೆಟಗರಿಯಲ್ಲಿ ಯಾರು ಬೇಕಾದರೂ ಇರಬಹುದು. ನಾವು ವಾಸಿಸಲು ಒಂದು ಊರು ಬೇಕು. ಎಲ್ಲೋ ಇದ್ದರಾಯಿತು ಬಿಡು, ಹೇಗೋ ಇದ್ದರಾಯಿತು ಬಿಡು ಎನ್ನುವ ಕಾಲ ಇದಲ್ಲ. ಇದ್ದರೆ ಇಂಥಾ ಊರಿನಲ್ಲೇ ಇರಬೇಕು ಅಂತ ಅರಸಿಹೊರಡುವ ಅನ್ವೇಷಕರ ದೊಡ್ಡ ಗುಂಪೇ ಈಗ ವಿಶ್ವದಾದ್ಯಂತ ಸಿದ್ಧವಾಗಿದೆ. ಕೈಯ್ಯಲ್ಲಿ ಪಾಸ್‌ಪೋರ್ಟು, ವೀಸಾ ಹಿಡಿದು ಹೊರಟ ನಮ್ಮ ದೇಶದ ಹುಡುಗರು ಗ್ರೀನ್ ಕಾರ್ಡಿನ ಆಸೆಯಿಂದ ವಿದೇಶಗಳಲ್ಲಿ ಮಕ್ಕಳನ್ನು ಪಡೆಯುತ್ತಾರೆ, ಅಲ್ಲಿ ನೆಲೆಯೂರಿ ಇಂಡಿಯಾದ ರಸ್ತೆಗಳನ್ನು, ಇಂಡಿಯಾದ ಕೊಳಕನ್ನು ಕುರಿತು ತರಾವರಿ ಮಾತಾಡುತ್ತಾ ತಾವಿರುವ ಜಾಗದ ಬಗ್ಗೆ ಖುಷಿಪಡುತ್ತಾರೆ. ಆದರೆ ದಸರಾ ವಿಷಯಕ್ಕೆ ಬಂದಾಗ ತಮ್ಮ ಬಗ್ಗೆ ತಾವು ಹೆಮ್ಮೆಯಿಂದ ಹೇಳಿಕೊಳ್ಳೋದು ಏನು ಗೊತ್ತಾ? ನಾನು 'Mysorian' ಅಂತ. ಮೈಸೂರು Cultural Capital? ಕರ್ನಾಟಕದ ಸಾಂಸ್ಕೃತಿಕ ಹೆಬ್ಬಾಗಿಲು. ಹೀಗೆ ಊರಿನ ಹೆಸರು ಹೇಳಿಕೊಂಡರೆ ಸಾಕು ನಮ್ಮ ಸಾಂಸ್ಕೃತಿಕ ಐಡೆಂಟಿಟಿ ಗೊತ್ತಾಗುವ ಒಂದೇ ಒಂದು ಊರು ಮೈಸೂರು. ಇಂಥ ಊರಿನಲ್ಲಿ ನಾವಿದ್ದೇವಲ್ಲ ತೃಪ್ತಿಗೆ, ಸಂತೃಪ್ತಿಗೆ ಇನ್ನೇನು ಬೇಕು ಹೇಳಿ.

ನಾವು ಚಿಕ್ಕವರಿದ್ದಾಗ ಕಯ್ಯಾರ ಕಿಞ್ಞಣ್ಣರೈ ಎಂಬ ಕವಿ ಬರೆದ ಪದ್ಯ 'ಒಂದತ್ತು ಬರಿಯ ಹಣ್ಣುಗಳನ್ನೇ ಪಟ್ಟಿ ಮಾಡಿ ಅವರು ನಮಗೆ ಕರ್ನಾಟಕವನ್ನೇ ಕಟ್ಟಿಕೊಟ್ಟಿದ್ದರು.

ನಂಜನಗೂಡಿನ ರಸಬಾಳೆ
ತಂದಿಹೆ ಕೊಡಗಿನ ಕಿತ್ತಿಳೆ
ಬೀದರ ಜಿಲ್ಲೆಯ ಸೀಬೆಯ ಹಣ್ಣು
ಬೆಂಗಳೂರಿನ ಸೇಬಿನ ಹಣ್ಣು
ಕೊಳ್ಳಿರಿ ಹಿಗ್ಗನು ಹರಿಸುವೆವು
ಕಲ್ಲುಸಕ್ಕರೆಯ ಮರೆಸುವೆವು
ಕೊಳ್ಳಿರಿ ಮಧುಗಿರಿ ದಾಳಿಂಬೆ
ಬೆಳವಲ ಬಯಲಿನ ಸಿಹಿಲಿಂಬೆ
ಬೆಳಗಾವಿಯ ಸವಿ ಸಪೋಟ
ದೇವನಹಳ್ಳಿಯ ಚಕ್ಕೋತ
ನಾಲಿಗೆ ಬರವನು ಕಳೆಯುವೆವು
ದೇಹದ ಬಲವನು ಬೆಳೆಸುವೆವು
ಗಂಜಾಮ್ ಅಂಜೀರ್
ತುಮಕೂರ್ ಹಲಸು
ಧಾರವಾಡದ ಆಪೂಸು
ಮಲೆನಾಡಿನ ಅನಾನಸು
ಸವಿಯಿರಿ ಬಗೆಬಗೆ ಹಣ್ಣುಗಳ
ಕನ್ನಡ ನಾಡಿನ ಹಣ್ಣುಗಳ ॥
–ಕಯ್ಯಾರ ಕಿಞ್ಞಣ್ಣರೈ

ಕರ್ನಾಟಕದಲ್ಲಿ ಎಲ್ಲೇ ಹೋದರೂ ನಾಲಿಗೆಯಲ್ಲಿ ಮೈಸೂರಿನ ಹೆಸರು ಹೇಳಿಯೇ ಸಿಹಿ ಸುರಿಸುವ ಮೈಸೂರು ಪಾಕಿನ ಸವಿಯಿದೆ. ನೀವೆಲ್ಲಾ ದರೂ ನೋಡಿದ್ದೀರಾ? ಊರಿನ ಮಧ್ಯೆ ಬೆಟ್ಟ, ಅಲ್ಲೊಂದು ದೇವಾಲಯ. ರಸ್ತೆಗೆ ಅಡ್ಡ ಸಿಕ್ಕುವ ಚಿರತೆಗಳು, ಬೆಟ್ಟದ ಮೇಲೆ ಕುಳಿತು ಬಗ್ಗಿ ನೋಡಿದರೆ ಜಗಮಗಿಸುವ ಬೆಳಕು. ಅರಮನೆಯ ಅಂದ, ಪ್ರವಾಸಿಗರ ಸ್ವಚ್ಛಂದ. ಬಲಕ್ಕೆ ತಿರುಗಿದರೆ ಬಲಮುರಿ ಎಡಕ್ಕೆ ತಿರುಗಿದರೆ ಎಡಮುರಿ. ರಸ್ತೆಯಲ್ಲಿ ನಿಂತಿದ್ದರೂ ಜಿರಾಫೆಯ ತಲೆಕಾಣಿಸುವ ಮೃಗಾಲಯ, ಮಕ್ಕಳ ಉಡಾಫೆಗೆ ಗುದ್ದು ಕೊಟ್ಟು ನಕ್ಕು ನಲಿಸುವ ಚಿಂಪಾಂಜಿ, ಪ್ರಾಣಿ ಸಂಗ್ರಹಾಲಯ. ಎಡಬಲ ತಿರುಗಿ ಕತ್ತು ನೋವಾಗಿದ್ದರೆ ಸ್ವಲ್ಪ ಮುಂದಕ್ಕೆ ಹೋಗಿ ನಿಮ್ಮ ಬೆನ್ನ ಹಿಂದೆ ರಕ್ಷಣೆಗೆ ನಿಂತಿದ್ದಾಳೆ ಕಾವೇರಿ. ಕುವೆಂಪು ಹೇಳುವ ಹಾಗೆ ನೀನ್ ಕುಡಿಯುವ ನೀರ್ ಕಾವೇರಿ. ಕನ್ನಂಬಾಡಿಗೆ ಕುಡಿನೋಟವೊಂದಿದ್ದರೆ ಅದು ನಮ್ಮೂರು ಮೈಸೂರು. ಆದರೆ ಈ ಬಾರಿ ಕನ್ನಂಬಾಡಿ ಸೊರಗಿದೆ. ತಾಯಿ ಕಾವೇರಿ ಮತ್ತೆ ಮೈತುಂಬಿ ಹರಿಯಬೇಕು ಎಂಬುದು ಕನ್ನಡಿಗರೆಲ್ಲರ ಅಪೇಕ್ಷೆ. ಈ ದಸರಾ ಸಂದರ್ಭದಲ್ಲಿ ತಾಯಿ ಚಾಮುಂಡೇಶ್ವರಿಯ ಶ್ರೀರಕ್ಷೆ ಕಾವೇರಿಯನ್ನು ಮತ್ತೆ ಮೈತುಂಬಿದ ಸೊಗಸಿಗೆ ಕಣ್ತೆರೆಯುವಂತೆ ಮಾಡಲಿ ಎಂಬುದು ಕರುನಾಡಿನ ಅಪೇಕ್ಷೆ. ಮೈಸೂರಿನ ಬಗ್ಗೆ ಬರೆಯುವ ಬರಹಗಾರರೆಲ್ಲರಿಗೂ ಮೈತುಂಬಾ ಪದವೇ. ಯಾವುದನ್ನು ಬರೆಯುವುದು? ಯಾವುದನ್ನು ಬಿಡುವುದೆಂಬ ಗೊಂದಲ. ಇಷ್ಟು ಸಂಭ್ರಮಕೊಟ್ಟ ಊರಲ್ಲೀಗ ಎಂದಿನಂತೆ ಮತ್ತೆ ದಸರಾದ ಹರವು. ಊರಹಬ್ಬವೊಂದು ನಾಡಹಬ್ಬವಾಗಿ ಆಚರಿಸಲ್ಪಡುತ್ತಿರುವ ಇದು ಪ್ರಾರಂಭವಾಗಿದ್ದು 1910ರಲ್ಲಿ. ಹೀಗೆ ಮೈಸೂರಿನಲ್ಲಿ ಶುರುವಾದ ಈ ದಸರಾ ಇವತ್ತು ದೇಶದಾದ್ಯಂತ ಬೇರೆ ಬೇರೆ ಹೆಸರುಗಳಲ್ಲಿ ಆಚರಿಸಲ್ಪಡುತ್ತಿದೆ.

ಧರ್ಮ, ಸಂಸ್ಕೃತಿ, ಪುರಾಣ, ಪರಂಪರೆಗಳನ್ನು ಬೆರೆಸಿಕೊಂಡು ರೂಪುಗೊಂಡದ್ದು ದಸರಾ. ದಶಹರ ಎಂಬುದರ ತದ್ಭವ ರೂಪವೇ ಈ ದಸರಾ. ನವರಾತ್ರಿಯ ಈ ಕಾಲದಲ್ಲಿ ದೇಶದ ನಾನಾ ರಾಜ್ಯದ ಕಡೆ ದಸರಾ ಉತ್ಸವಗಳನ್ನು ಆಯೋಜಿಸಲಾಗುತ್ತಿದೆ. ಆದರೆ ಮೈಸೂರು ಮತ್ತು ದಸರಾ ಎಂಬ ಪದಗಳು ಒಟ್ಟೊಟ್ಟಿಗೆ ಪ್ರಯೋಗಗೊಳ್ಳುತ್ತಿರುವ ಮಟ್ಟಿಗೆ ಅವು ಒಂದಕ್ಕೊಂದು ಬೆರೆತು ಹೋಗಿವೆ. ಹೀಗೆ ಶ್ರೀಮಂತ ದೇಸೀ ಪರಂಪರೆಯೊಂದು ತನ್ನ ಆಚರಣೆಗಳಿಂದಲೇ ವಿಶ್ವವಿಖ್ಯಾತವಾಗಿ ಹೊಂದಿದ್ದು ಮಾತ್ರ ಇತಿಹಾಸ. ಕರ್ನಾಟಕದ ರಾಜಮನೆತನಗಳು ಶರನ್ನವರಾತ್ರಿಯನ್ನು ನಿರಂತರವಾಗಿ ಆಚರಿಸಿಕೊಂಡು ಬಂದವು. ಇದನ್ನು ತುಂಬಾ ಪ್ರಸಿದ್ಧಿಗೆ ತಂದವರು

> “
> ಧರ್ಮ, ಸಂಸ್ಕೃತಿ, ಪುರಾಣ, ಪರಂಪರೆಗಳನ್ನು ಬೆರೆಸಿಕೊಂಡು ರೂಪುಗೊಂಡದ್ದು ದಸರ. ದಶಹರ ಎಂಬುದರ ತದ್ಭವ ರೂಪವೇ ಈ ದಸರಾ. ನವರಾತ್ರಿಯ ಈ ಕಾಲದಲ್ಲಿ ದೇಶದ ನಾನಾ ರಾಜ್ಯದ ಕಡೆ ದಸರಾ ಉತ್ಸವಗಳನ್ನು ಆಯೋಜಿಸಲಾಗುತ್ತಿದೆ. ಆದರೆ ಮೈಸೂರು ಮತ್ತು ದಸರಾ ಎಂಬ ಪದಗಳು ಒಟ್ಟೊಟ್ಟಿಗೆ ಪ್ರಯೋಗಗೊಳ್ಳುತ್ತಿರುವ ಮಟ್ಟಿಗೆ ಅವು ಒಂದಕ್ಕೊಂದು ಬೆರೆತು ಹೋಗಿವೆ.

ವಿಜಯನಗರದ ಅರಸರು. ಇವರನ್ನೇ ಅನುಸರಿಸಿದ ಮೈಸೂರು ಅರಸರು ದಸರಾ ಆಚರಣೆಯನ್ನು ಇನ್ನೂ ಹೆಚ್ಚು ವೈಭವೀಕರಿಸಿದರು. ತನ್ನ 50 ವರ್ಷಗಳ ಆಳ್ವಿಕೆಯ ನಂತರ ಮೈಸೂರು ಸಂಸ್ಥಾನದ ಅಧಿಕಾರವನ್ನು 1881ರಲ್ಲಿ ಬ್ರಿಟಿಷ್ ಚಕ್ರಾಧಿಪತ್ಯ ರಾಜವಂಶಸ್ಥರಿಗೆ ಬಿಟ್ಟುಕೊಟ್ಟರು. ಆಗ 10ನೇ ಚಾಮರಾಜ ಒಡೆಯರ್ ಇದ್ದರು. ಆಗಲೂ ಯಾವ ರಾಜಕೀಯ ಪಲ್ಲಟಗಳೇ ನಡೆಯಲಿ, ಯಾರೇ ಅಧಿಕಾರದಲ್ಲಿರಲಿ, ನವರಾತ್ರಿಯ ಸಾಂಸ್ಕೃತಿಕ ವಿನ್ಯಾಸಗಳು ಬದಲಾಗಲಿಲ್ಲ. ಮೈಸೂರಿನ ಜನ ತಮ್ಮ ಜೀವನ ವಿಧಾನದ ಕ್ಯಾಲೆಂಡರುಗಳಲ್ಲಿ ದಸರಾವನ್ನು ಅಧಿಕೃತವಾಗಿ ಘೋಷಿಸಿಕೊಂಡು ಬಿಟ್ಟರು. ವರ್ಷಕ್ಕೊಮ್ಮೆ ನಡೆಯುವ ಉತ್ಸವದಲ್ಲಿ ಅವರು ಪಾಲ್ಗೊಂಡರು, ಹಾಡಿದರು, ಹರಸಿಕೊಂಡರು, ನಡೆಸಿಕೊಂಡು ಬಂದರು. ಹೀಗೆ ಇದು ಮೈಸೂರಿನ ಪರಂಪರೆಯಾಗಿ ಹೋಯಿತು. ಶ್ರೀರಂಗಪಟ್ಟಣದ ಕಾವೇರಿ ನದಿಯ ಪಕ್ಕದ ಗೌರಿ ಕಡುವೆಯ ಎಂಬ ಸ್ಥಳದಲ್ಲಿ 9ನೇ ಮಹಾರಾಜ ರಾಜಒಡೆಯರ್ 1610ರಲ್ಲಿ ಇದನ್ನು ಪ್ರಾರಂಭಿಸಿದರೂ 25 ಮಂದಿ ಅರಸರ ಪೈಕಿ ಎಂಟು ಜನ ಅರಸರು ಈ ದಸರೆಯನ್ನು ನೋಡಲೇ ಇಲ್ಲ. ಇದೊಂದು ಮನುಷ್ಯ ಲೋಕದ ಸುಗ್ಗಿಯ ಕಾಲ. ಗಜಪಡೆಗಳ ಗಾಂಭೀರ್ಯ ಪ್ರದರ್ಶನ, ಸ್ತಬ್ಧಚಿತ್ರಗಳು, ಮೆರವಣಿಗೆ, ಜನಪದ ಕಲಾತಂಡಗಳ ಕಾಲ್ನಡಿಗೆ, ಅವುಗಳ ಪಟ್ಟಿ ಒಂದೇ ಎರಡೇ, ಬರೆದರೇ ಒಂದು ದೊಡ್ಡ ಪುಸ್ತಕವೇ ಆದೀತು. ಡೊಳ್ಳು ಕುಣಿತ, ಜೇಡರ ಕುಣಿತ, ವೀರಗಾಸೆ, ಕಂಸಾಳೆ, ಗಾರುಡಿ ಗೊಂಬೆ, ಪೂಜಾ ಕುಣಿತ – ಹೀಗೆ ದೇಸಿ ಕಲೆಗಳ ಸಾಲು ಸಾಲು ಕರ್ನಾಟಕದ ಕಣ್ಮನ ಸೆಳೆದಿವೆ. ರಸ್ತೆಯುದ್ದಕ್ಕೂ ಸಂಚರಿಸುವ ಕಲಾವಿದರ ಡೋಲು ಸವಾಲು ಪ್ರತೀ ವರ್ಷವೂ ತನ್ನ ಲವಲವಿಕೆಯನ್ನು ತೋರಿಸಿವೆ. ಸಾರ್ವಜನಿಕರ ಸಹಭಾಗಿತ್ವವನ್ನು ಕೇಳುವ ಹಬ್ಬ ನಾಡ ದಸರಾ. ನಮ್ಮ ನಾಡಿನ ಕಲಾವಿದರು ತಮ್ಮ ಪ್ರತಿಭೆ, ಕೈಚಳಕ, ಕಸರತ್ತುಗಳನ್ನು ತೋರಿಸಲು ಇರುವ ಒಂದೇ ಒಂದು ಸಾರ್ವಜನಿಕ ಸದಾವಕಾಶ ಎಂದರೆ ಮೈಸೂರು ದಸರಾ. ಕರ್ನಾಟಕದಲ್ಲಿ ಸಾಂಸ್ಕೃತಿಕ ನೀತಿ ರೂಪುಗೊಂಡಿರುವ ಈ ದಿನಗಳಲ್ಲಿ ಯಾವ ನೀತಿಯೂ ಇಲ್ಲದೆ 413 ವರ್ಷಗಳ ಕಾಲ ನಡೆದು ಬಂದ ಜನಸಾಮಾನ್ಯ ತನಗೆ ತಾನೇ ಸಂಸ್ಕೃತಿಯ ದಾರಿ ಹುಡುಕಿಕೊಂಡಿದ್ದಾನೆ. ಈಗ 414ನೇ ದಸರಾ ಗಜಪಡೆಯ ತಾಲೀಮಿಗೆ ಹೆಜ್ಜೆ ಹಾಕಲು ನಿಂತಿದ್ದಾನೆ. ಇದು ಮೈಸೂರಲ್ಲಿ ಮಾತ್ರವಲ್ಲ ಪಕ್ಕದ ಮಡಿಕೇರಿಯಲ್ಲಿ, ಮಂಗಳೂರಿನ ಕುದ್ರೋಳಿಯಲ್ಲಿ, ಧಾರವಾಡದ ಗೆಳೆಯರ ಬಳಗದಲ್ಲಿ, ಚಿತ್ರದುರ್ಗದಲ್ಲಿ, ಕುದ್ರೋಳಿಯಲ್ಲಿ ಹೀಗೆ ಎಲ್ಲ ಕಡೆ ಇಂಥ ಸಾಂಸ್ಕೃತಿಕ ಉತ್ಸವಗಳು ತಮ್ಮ ತಮ್ಮ ದೇಸೀ ಕಲೆಯ ಮಾದರಿಗಳಿಗೆ ಜೀವ ತುಂಬಿವೆ.

ಹಿರಿಯ ವಿಜ್ಞಾನಿ ಸಿ.ಎನ್.ಆರ್.ರಾವ್ ಈ ಹಿಂದೆ ಒಮ್ಮೆ ದಸರಾ ಉದ್ಘಾಟಿಸಿ ಒಂದು ಮಾತು ಹೇಳಿದ್ದರು. "ಮೈಸೂರು ಬೆಂಗಳೂರಿನಂತಲ್ಲ. ಈ ಊರಿಗೆ ತನ್ನದೇ ಆದ ಆತ್ಮವಿದೆ" ಅಂತ. ಬೆಂಗಳೂರಿನಲ್ಲಿ ಎಲ್ಲವೂ ಇದೆ, ದುಡ್ಡಿದೆ, ಶ್ರೀಮಂತಿಕೆಯಿದೆ, ಐಷಾರಾಮಿ ಜೀವನವಿದೆ, ನಿಮಗೆ ಗೊತ್ತಿರಲಿ ಪಕ್ಕದಲ್ಲೇ ಕೊಳಗೇರಿಯಿದೆ. ಇದೆಲ್ಲಾ ಭೌತಿಕವಾಗಿ ಕಣ್ಣಿಗೆ ಕಾಣುವ ವಸ್ತು, ವಿವರಗಳು ಅಷ್ಟೇ. ಆದರೆ ಕಣ್ಣಿಗೆ ಕಾಣದ ಆತ್ಮಸುಖ ಈ ಊರಿನಲ್ಲಿದೆ. ಬದುಕಿನ ದುಡಿಮೆ ಮುಗಿಸಿ ಮಕ್ಕಳಿಗೆ ಮದುವೆ ಮುಂಜಿ ಮಾಡಿ ತಮ್ಮ ಬದು ಕಿನ ಸಂಧ್ಯಾ ಕಾಲದ ಜೀವನವನ್ನು ಮೈಸೂರಿ ನಲ್ಲಿ ಕಳೆಯಲು ಜನಕ್ಕೆ ಏನಿಷ್ಟವೋ ಏನೋ! ಸಯ್ಯಾಜಿರಾವ್ ರೋಡಿನ ಹೋಟೆಲಿನಲ್ಲಿ ಮಸಾಲೆ ದೋಸೆ ತಿಂದು, ಕಾಫಿ ಕುಡಿದು ಈಚೆಗೆ ಬರುವ ನಿವೃತ್ತರಾದವರನ್ನು! ಮೈಸೂರಿನ ಸಂಜೆಗಳಲ್ಲಿ ಬಾಯಿ ಚಪ್ಪರಿಸಿಕೊಂಡು ಇಡ್ಲಿ ಚಟ್ನಿ ತಿನ್ನುವ ವಯಸ್ಸಾದವರನ್ನು ನೋಡಿಯೇ ಮೈಸೂರನ್ನು 'ನಿವೃತ್ತರ ಸ್ವರ್ಗ'? ಅಂತ ಕರೆದಿರುವ ಸತ್ಯ ಗೊತ್ತಾಗುತ್ತದೆ. ಇವತ್ತಿಗೂ ಕೇವಲ ನೂರು ರೂಗಳಲ್ಲಿ ದಿನ ಕಳೆಯುವ ವ್ಯವಸ್ಥೆ ಇರುವ ಊರು ಮೈಸೂರು. ದಿನಕ್ಕೆ ಲಕ್ಷಗಟ್ಟಲೆ ಖರ್ಚು ಮಾಡುವ ಮೋಜು–ಮಸ್ತಿಯೂ ಇಲ್ಲಿದೆ. ಮೊದಲನೇ ಆಯ್ಕೆಯ ಜನರೇ ಇಲ್ಲಿ ಜಾಸ್ತಿ ಇರುವ ಕಾರಣ ಮೈಸೂರಿನ ಪರಂಪರೆಗೆ ಅಡ್ಡಿಯಿಲ್ಲ.

ಆದರೆ ಪರಂಪರೆಯನ್ನು ಉಳಿಸಿಕೊಂಡೇ ಮೈಸೂರನ್ನು ಅಭಿವೃದ್ಧಿಪಡಿಸಲು ಕಳೆದ ವರ್ಷಗಳಲ್ಲಿ ಕೋಟಿ ಕೋಟಿ ಹಣ ಇಲ್ಲಿಗೆ ಬಂದಿದೆ. ಜೆ.ಎನ್. ನರ್ಮ್, ಏಷ್ಯನ್ ಅಭಿವೃದ್ಧಿ ಬ್ಯಾಂಕ್, ಮುಖ್ಯಮಂತ್ರಿಗಳ ನಿಧಿ ಹೀಗೆ–ಹಲವಾರು ಬಾಬ್ತು ಗಳಲ್ಲಿ ಇಲ್ಲಿಗೆ ದುಡ್ಡು ಬಂದಿದೆ. ನಿವೃತ್ತಿಯಾದ ಮೇಲೆ ತಾವು ಕೂಡ ನಿವೃತ್ತರ ಸ್ವರ್ಗಕ್ಕೆ ಸೇರಿಕೊಳ್ಳ ಬಯಸುವ ಅಧಿಕಾರಿಗಳು ಅಭಿವೃದ್ಧಿಗಾಗಿ ಮನಸ್ಸು ಮಾಡಬೇಕು. 250 ಚದರ ಕಿಲೋ ಮೀಟರ್‌ವರೆಗೆ ವಿಸ್ತಾರವಾಗಿ ಹರಡಿಕೊಂಡಿರುವ ಮೈಸೂರಿಗೆ ಮಹಾ ನಗರಪಾಲಿಕೆಯಿದೆ. 65 ವಾರ್ಡ್‌ಗಳಿವೆ. ಲಕ್ಷಾಂತರ ಜನ ಇಲ್ಲಿ ವಾಸ್ತವ್ಯ ಹೂಡಿದ್ದಾರೆ. ಇಲ್ಲಿ ಸಮಸ್ಯೆಗಳಿವೆ, ಹಾಗೆಯೇ ಅದರ ಜೊತೆಜೊತೆಗೆ ಪರಂಪರೆಯ ಸ್ವಚ್ಛ ಸುಂದರ ಮೈಸೂರನ್ನು ನಿರ್ಮಿಸಬೇಕಿದೆ. ತುಮಕೂರಿಗೆ ಫುಡ್‌ಪಾರ್ಕ್ ಬಂದಂತೆ. ಮೈಸೂರಿಗೆ ಟೆಕ್ಸ್‌ಟೈಲ್ ಪಾರ್ಕ್ ಬರಬೇಕು. ಹೆಚ್ಚಿದ ಜನಸಂಖ್ಯೆಯ ಒತ್ತಡದಿಂದ ಹಳ್ಳಿಗಳಿಂದ ಮೊದಲ್ಗೊಂಡು ಮೈಸೂರಿನ ಕಡೆಗೆ ಜನರ ವಲಸೆ ಶುರುವಾಗಿದೆ. ಸ್ಥಳೀಯರ ಕೈಗೆ ನಿವೇಶನಗಳು ಗಗನಕುಸುಮವಾಗಿವೆ. ಶಾಲೆ–ಕಾಲೇಜುಗಳಲ್ಲಿ ಸೀಟಿಲ್ಲ. ಕೈಗಾರಿಕೆಯ ಅಭಿವೃದ್ಧಿ ಹೆಸರಲ್ಲಿ ಪಡೆದುಕೊಂಡ ದೊಡ್ಡ ದೊಡ್ಡ ನಿವೇಶನಗಳು ನಿಯೋಜಿತ ಕಾರ್ಯಕ್ಕೆ ಬಳಕೆಯಾಗುತ್ತಿಲ್ಲ. ನಗರಾಭಿವೃದ್ಧಿ ಪ್ರಾಧಿಕಾರದ ಗ್ರೇಟರ್ ಮೈಸೂರು–2030ರ ನಿರೀಕ್ಷೆಗಳು ಫಲಪ್ರದವಾಗಬೇಕು. ಕಾಂಕ್ರೀಟ್ ಕಟ್ಟಡಗಳ ಐಷಾರಾಮಿ ನಿರ್ಮಾಣಗಳು ಮೈಸೂರನ್ನು ಬದಲಿಸಿವೆ. ಇಲ್ಲಿರುವ ಖಾಲಿ ನಿವೇಶನಗಳಲ್ಲಿ ಅರ್ಧದಷ್ಟು ಹೊರ ಊರಿನವರದು. ಮುಂದೆ ಮೈಸೂರು ಬೆಳೆಯುತ್ತದೆ, ಯಾವುದಕ್ಕೂ ಮೈಸೂರಿನಲ್ಲೊಂದು ಪ್ರಾಪರ್ಟಿ ಇರಲಿ, ಎಂಬ ಲೆಕ್ಕಾಚಾರದಲ್ಲಿಯೇ ನಿವೇಶನ ತೆಗೆದಿಟ್ಟ ಮಂದಿ ಮೈಸೂರಿನ ಬಗ್ಗೆ ಒಂದು ಆಸಕ್ತಿ ಇಟ್ಟುಕೊಂಡೇ ಆಸ್ತಿ ಮಾಡಿದ್ದಾರೆ. ಸಮಸ್ಯೆಗಳಿಲ್ಲದ ನಗರ, ಪಟ್ಟಣಗಳು ಎಲ್ಲಿವೆ ಹೇಳಿ? 'ನಿವೃತ್ತರ ಸ್ವರ್ಗಕ್ಕೆ' ಜೀವಂತಿಕೆ ತರುವಂತೆ, ಸಣ್ಣ–ಸಣ್ಣ ಉದ್ಯೋಗಗಳಲ್ಲಿದ್ದುಕೊಂಡು ಜೀವನ ಮಾಡುತ್ತಿರುವವರು, ಚಿಕ್ಕ–ಚಿಕ್ಕ ವೃತ್ತಿಗಳಿಂದ ಬದುಕುತ್ತಿರುವವರು, ಕಷ್ಟಪಟ್ಟು ಸಾಲ–ಸೋಲ ಮಾಡಿ ಒಂದು ಮನೆ ಕಟ್ಟಿಕೊಂಡ ಮಧ್ಯಮ ವರ್ಗದವರು, ಭೂಮಿ ಮಾರಿಕೊಂಡು ಹಳ್ಳಿ ಬಿಟ್ಟು ಇಲ್ಲಿಗೆ ಬಂದು ಮಕ್ಕಳನ್ನು ಓದಿಸುತ್ತಿರುವವರು, ಕಡ್ಲೇಕಾಯಿ ಮಾರುತ್ತಲೇ ಮರಗಾಲು ಕುಣಿತವನ್ನು ಬೆರಗುಗಣ್ಣಿನಿಂದ ನೋಡುತ್ತಾ ನಾನೂ ದಸರಾ ನೋಡಿದೆ ಅಂತ ಎದೆ ತಟ್ಟಿಕೊಳ್ಳುವ ಕಡ್ಲೆಕಾಯಿ ಮಾರುವ ಹುಡುಗನಿಂದ ಹಿಡಿದು ಬಂಗಲೆಗಳಲ್ಲಿ ಬಾಳುತ್ತಿರುವವರವರೆಗೆ ಎಲ್ಲರಿಗೂ ಇಲ್ಲಿ ವಾಸಕ್ಕೆ ಬೇರೆ–ಬೇರೆ ಸೂರುಗಳಿವೆ. ಆದರೆ ಊರು ಮಾತ್ರ ಒಂದೇ ಅದು ಮೈಸೂರು. ಇಷ್ಟೆಲ್ಲದರ ನಡುವೆಯೂ ನಾಲಿಗೆಗೆ ಮೈಸೂರು ಪಾಕು. ತೃಪ್ತಿಗೆ ಮೈಸೂರು ಸಾಕು.

ಶತಮಾನಗಳ ಸಂಭ್ರಮವನ್ನೂ ಆಚರಿಸಿಕೊಂಡ ಗಂಗೋತ್ರಿಗೆ, ಕನ್ನಡ ಸಾಹಿತ್ಯ ಪರಿಷತ್‌ಗೆ, ಮೈಸೂರು ರೇಷ್ಮೆಗೆ, ಹೀಗೆ ನೂರು ತುಂಬಿದ ಅನೇಕ ವಿಷಯಗಳು ಇಲ್ಲಿವೆ. ನಾನೂರು ತುಂಬಿದ ರಾಜಪಥದ ಟಾಂಗಾ ಗಾಡಿಗೆ ವೀರನಗೆರೆ ಬದನೆಗೆ, ಮೈಸೂರು ಮಲ್ಲಿಗೆಗೆ, ಮೈಸೂರು ಪೇಟಕ್ಕೆ, ಕುಸ್ತಿಯ ಆಟಕ್ಕೆ, ವಿಚಾರವಂತರ ಆಗ್ರಹಕ್ಕೆ ಆಚಾರವಂತರ ಬಿನ್ನಹಕ್ಕೆ ಸಾಕ್ಷಿಯಾಗಿ, ಪರಂಪರೆಯೊಂದಿಗೆ ಬದುಕಿ ಬಿಡೋಣ ಏನಂತೀರಿ?

ಪೋಕ್ಸೊ ಪ್ರಕರಣ: ಆರು ತಿಂಗಳ ಬಳಿಕ ಜೈಲಿನಿಂದ ಹೊರಬಂದ ಮುರುಘಾ ಶ್ರೀ

ಚಿತ್ರದುರ್ಗ: ಪೋಕ್ಸೊ ಪ್ರಕರಣದಲ್ಲಿ ಜೈಲು ಸೇರಿದ್ದ ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಸ್ವಾಮೀಜಿ ಜೈಲಿನಿಂದ ಹೊರಬಂದಿದ್ದಾರೆ.

ಚಿತ್ರದುರ್ಗದ ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಪ್ರಕರಣಕ್ಕೆ ಸಂಬಂಧಪಟ್ಟ ಸಾಕ್ಷ್ಯಗಳ ವಿಚಾರಣೆ ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಜೈಲಿನಿಂದ ಬಿಡುಗಡೆ ಮಾಡುವಂತೆ ಆದೇಶವನ್ನು ಹೊರಡಿಸಿತ್ತು.

ಈ ಹಿಂದೆ ಹೈಕೋರ್ಟ್ ಮುರುಘಾ ಶ್ರೀಗೆ ಷರತ್ತುಬದ್ಧ ಜಾಮೀನು ನೀಡಿತ್ತು.



ಆದರೆ, ಸಾಕ್ಷ್ಯಗಳ ವಿಚಾರಣೆ ಮುಗಿಯುವವರೆಗೂ ಬಂಧನದಲ್ಲಿಡಲು ಸುಪ್ರೀಂ ಕೋರ್ಟ್ ಕಳೆದ ಏಪ್ರಿಲ್ 23ರಂದು ಆದೇಶಿಸಿತ್ತು.

ಈ ಹಿನ್ನೆಲೆಯಲ್ಲಿ ಜಾಮೀನು ಸಿಕ್ಕರೂ ಮುರುಘಾಶ್ರೀಗಳು ಜೈಲಿಗೆ ಮತ್ತೆ ಹೋಗಬೇಕಾಗಿ ಬಂದಿತ್ತು. ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ತೆಯರಿಬ್ಬರು ಸೇರಿದಂತೆ 12 ಸಾಕ್ಷಿಗಳ ವಿಚಾರಣೆ ಪೂರ್ಣಗೊಂಡಿದೆ. ಈ ಹಿನ್ನೆಲೆಯಲ್ಲಿ ಹೈಕೋರ್ಟ್ ಜಾಮೀನಿನ ಆದೇಶದ ಪ್ರಕಾರ ಮುರುಘಾಶ್ರೀ ಬಿಡುಗಡೆ ಮಾಡಬೇಕಿತ್ತು. ಆದೇಶದ ಪ್ರತಿ ಜಿಲ್ಲಾ ಕಾರಾಗೃಹ ಅಧಿಕಾರಿಗಳ ಕೈ ಸೇರಿದ್ದು ಪ್ರಕ್ರಿಯೆಗಳು ಮುಗಿದ ನಂತರ ಶ್ರೀಗಳು ಜೈಲಿನಿಂದ ಹೊರಬಂದಿದ್ದಾರೆ. ಇನ್ನು ಹೈಕೋರ್ಟ್ ಚಿತ್ರದುರ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಮುರುಘಾಶ್ರೀ ಇರುವಂತಿಲ್ಲ ಎಂದು ಷರತ್ತು ವಿಧಿಸಿ ಜಾಮೀನು ನೀಡಿದ್ದರಿಂದ ಅವರು ದಾವಣಗೆರೆಗೆ ತೆರಳಿದ್ದಾರೆ.

ಕಲ್ಲಿದ್ದಲು ಗಣಿಯಲ್ಲಿ ಸ್ಫೋಟ; 7 ಕಾರ್ಮಿಕರ ಸಾವು

ಬೀರ್ ಭೂಮ್: ಪಶ್ಚಿಮ ಬಂಗಾಳದ ಬೀರ್ ಭೂಮ್ ಜಿಲ್ಲೆಯ ಕಲ್ಲಿದ್ದಲು ಗಣಿಯೊಂದರಲ್ಲಿ ಸಂಭವಿಸಿದ ಸ್ಫೋಟದ ನಂತರ ಏಳು ಮಂದಿ ಸಾವನ್ನಪ್ಪಿದ್ದು, ಹಲವರು ಗಾಯಗೊಂಡಿದ್ದಾರೆ. ಬೀರ್ ಭೂಮ್‌ನ ಲೋಕಪುರ ಪ್ರದೇಶದಲ್ಲಿರುವ ಗಂಗಾರಾಮ್‌ಚಕ್ ಮೈನಿಂಗ್ ಪ್ರೈ ಲಿಮಿಟೆಡ್ ಗಣಿಗಾರಿಕೆಯಲ್ಲಿ ಈ ಸ್ಫೋಟ ಸಂಭವಿಸಿದೆ. ಕಲ್ಲಿದ್ದಲು ಪುಡಿ ಮಾಡುವ ವೇಳೆಯಲ್ಲಿ ಸ್ಫೋಟ ಸಂಭವಿಸಿದ್ದು, ದುರಂತದಲ್ಲಿ ಏಳು ಮಂದಿ ಸಾವನ್ನಪ್ಪಿರುವುದಾಗಿ ಮೂಲಗಳಿಂದ ತಿಳಿದುಬಂದಿದೆ.



ಮತ್ಸ್ಯ ಮೇಳ: ಅ.10ರವರೆಗೆ ವಿಸ್ತರಣೆ

ಮೈಸೂರು,ಅ.7– ರೈತ ದಸರಾ ಕಾರ್ಯಕ್ರಮದ ಅಂಗವಾಗಿ, ಆಯೋಜಿಸಲಾಗಿದ್ದ ಮತ್ಸ್ಯಮೇಳ ಕಾರ್ಯಕ್ರಮವನ್ನು ಅ.10ರವರೆಗೆ ವಿಸ್ತರಿಸಲಾಗಿದೆ ಎಂದು ಮೀನುಗಾರಿಕೆ ಇಲಾಖೆಯ ಉಪನಿರ್ದೇಶಕರು ಹಾಗೂ ರೈತರ ದಸರಾ ಉಪ ಸಮಿತಿಯ ಸದಸ್ಯ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com



ಮೈಸೂರು ದಸರಾ ಮಹೋತ್ಸವ–2024 ಇಂದಿನ ಕಾರ್ಯಕ್ರಮಗಳು

ಬೆಳಗ್ಗೆ 10.30	:	ಸಮಷ್ಟಿ ಕವಿಗೋಷ್ಠಿ, ಉದ್ಘಾಟನೆ : ಹಿರಿಯ ಕವಿ ಡಾ. ಎಚ್.ಎಸ್. ಶಿವಪ್ರಕಾಶ್, ಸ್ಥಳ: ಜಗನ್ಮೋಹನ ಅರಮನೆ
ಸಂಜೆ 4.00	:	ದಸರಾ ಕಿರುಚಿತ್ರ ಸ್ಪರ್ಧೆ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ರಂಗಭೂಮಿ ಕಲಾವಿದರು ಹಾಗೂ ಚಲನಚಿತ್ರ ನಟ ಮಂಡ್ಯ ರಮೇಶ್

ಯುವ ದಸರಾ

ಸಂಜೆ 6.00	:	ಖ್ಯಾತ ರ್‍ಯಾಪರ್ ಹಾಗೂ ಬಾಲಿವುಡ್ ಗಾಯಕ ಬಾದ್‌ಶಾ ಅವರಿಂದ ಸಂಗೀತ ರಸಸಂಜೆ, ಸ್ಥಳ: ಜ್ವಾಲಾಮುಖಿ ತ್ರಿಪುರ ಸುಂದರಿ ದೇವಸ್ಥಾನದ ಸಮೀಪ, ಉತ್ತನಹಳ್ಳಿ ರಿಂಗ್ ರಸ್ತೆ.

ಸಾಂಸ್ಕೃತಿಕ ಕಾರ್ಯಕ್ರಮಗಳು–ಅರಮನೆ ಆವರಣ

ಸಂಜೆ 4.00	:	ಸೋಸಲೆ ಗಂಗಾಧರ್ ಮತ್ತು ತಂಡ, ಮೈಸೂರು ಅವರಿಂದ ನಾಲ್ವಡಿ ಕಾವ್ಯ–ಕುಂಚ–ಗಾಯನ
ಸಂಜೆ 5.00	:	ಡಾ. ಕೆ. ರಾಮೇಶ್ವರಪ್ಪ ಮತ್ತು ತಂಡದಿಂದ ಜನಪದ ಗಾಯನ
ಸಂಜೆ 6.30	:	ಮಾಸ್ ಬ್ಯಾಂಡ್ ಅವರಿಂದ ಪೊಲೀಸ್ ಬ್ಯಾಂಡ್
ರಾತ್ರಿ 8.30	:	ವಿದ್ವಾನ್ ಶಿವಶಂಕರಸ್ವಾಮಿ ಮತ್ತು ತಂಡ ಅವರಿಂದ ವಾದ್ಯ ಸಂಗೀತ –ರಿದಮ್ಸ್ ಆಫ್ ಇಂಡಿಯಾ

ಜಗನ್ಮೋಹನ ಅರಮನೆ

ಸಂಜೆ 5.00	:	ಬಿ.ವಿ. ಆದ್ಯಾ ಮತ್ತು ತಂಡ, ಬೆಂಗಳೂರು ಅವರಿಂದ ಕೂಚಿಪುಡಿ ನೃತ್ಯ
ಸಂಜೆ 6.00	:	ಡಾ.ಟಿ. ಭವ್ಯಾರಾಣಿ ಮತ್ತು ತಂಡ, ಚಿತ್ರದುರ್ಗ ಅವರಿಂದ ಹಿಂದೂಸ್ಥಾನಿ ವಯೋಲಿನ್ ವಾದನ
ಸಂಜೆ 7.00	:	ಡಾ. ಉಮಾ ತಪಸ್ಯಾನಂದ ಮತ್ತು ತಂಡ, ಕೇರಳ ಅವರಿಂದ ಮೋಹಿನಿಯಾಟ್ಟಂ
ರಾತ್ರಿ 8.00	:	ಬಿ.ವಿ. ಶೈಲಾ ಮತ್ತು ತಂಡ ಅವರಿಂದ ಭರತನಾಟ್ಯ
ರಾತ್ರಿ 9.00	:	ಯಶೋಧಾ ನಡುವಿನಮನಿ ಮತ್ತು ತಂಡ, ಬಾಗಲಕೋಟೆ ಅವರಿಂದ ತತ್ತ್ವಪದ

ಮಹಿಳಾ ದಸರಾ, ಜೆ.ಕೆ. ಮೈದಾನ

ಬೆಳಗ್ಗೆ 10.00	:	ಶ್ರೀನಿವಾಸ್ ಮತ್ತು ತಂಡದಿಂದ ಮ್ಯಾಜಿಕ್ ಶೋ
ಬೆಳಗ್ಗೆ 11.00	:	ಮಕ್ಕಳ ವೇಷಭೂಷಣ ಸ್ಪರ್ಧೆ
ಮಧ್ಯಾಹ್ನ 12.30	:	ಗಿನ್ನಿಸ್ ಬುಕ್ ಆಫ್ ವರ್ಲ್ಡ್ ರೆಕಾರ್ಡ್‌ಗೆ ಪ್ರವೇಶ ಪಡೆದ ಡಾ.ರಾಧಾ ಮಲ್ಲಪ್ಪ ಅವರೊಂದಿಗೆ ಸಂವಾದ
ಮಧ್ಯಾಹ್ನ 1.00	:	ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮಂಗಳಮುಖಿ ಅಕ್ಕೈ ಪದ್ಮಾಶಾಲಿ ಅವರೊಂದಿಗೆ ಸಂವಾದ
ಮಧ್ಯಾಹ್ನ 1.30	:	ಮಹಿಳೆಯರಿಗೆ ವಿವಿಧ ಸ್ಪರ್ಧೆಗಳು (ಎಂಬ್ರಾಯಿಡರಿ, ಕರಕುಶಲ, ಪೋಸ್ಟರ್ ಮೇಕಿಂಗ್ ಮತ್ತು ತರಕಾರಿ ಕೆತ್ತನೆ)
ಮಧ್ಯಾಹ್ನ 2.30	:	ಬಾಲ ತೇಜಂ ಪ್ರಶಸ್ತಿ ಪುರಸ್ಕೃತರಾದ ಆದ್ಯಾ ಲಕ್ಷ್ಮಿ ಅವರಿಂದ ಕೂಚಿಪುಡಿ
ಮಧ್ಯಾಹ್ನ 3.00	:	ಮಹಿಳೆಯರಿಗೆ ವಿಶೇಷ ಆಟಗಳು (ಬ್ಯಾಲೆನ್ಸ್ ದಿ ವಾಟರ್ ಪೈಪ್, ಕ್ಯಾಟರ್‌ಪಿಲ್ಲರ್ ರೇಸ್ ಮತ್ತು ಸ್ಕಿಪ್ಪಿಂಗ್)
ಸಂಜೆ 4.00	:	ಜಾನಪದ ನೃತ್ಯ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು (ಕೆ.ಆರ್. ನಗರ ತಾಲೂಕು ಮಹಿಳೆಯರಿಂದ)
ಸಂಜೆ 5.30	:	ವಿವಿಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಣೆ ಮತ್ತು ಸಮಾರೋಪ ಸಮಾರಂಭ

ಕಲಾಮಂದಿರ

ಸಂಜೆ 4.45	:	ಎಸ್. ಸಂಜಯ್ ಮತ್ತು ತಂಡ, ಮೈಸೂರು ಅವರಿಂದ ನಾದಸ್ವರ
ಸಂಜೆ 5.15	:	ವಿಜಯಕುಮಾರ್ ಸೋನಾರೆ ಮತ್ತು ತಂಡ, ಬೀದರ್ ಅವರಿಂದ ಜಾನಪದ ಗೀತೆಗಳು
ಸಂಜೆ 6.00	:	ಆರ್. ರೋಹಿತ್ ಕಶ್ಯಪ್ ಮತ್ತು ತಂಡದವರಿಂದ ದಾಸರಪದಗಳು
ಸಂಜೆ 7.00	:	ವಿದ್ಯಾ ಮಂಗಳೂರು ಮತ್ತು ತಂಡ, ಕೊಪ್ಪಳ ಅವರಿಂದ ನೃತ್ಯ ರೂಪಕ
ರಾತ್ರಿ 8.00	:	ಎಂ. ಅರುಣ್ ಕುಮಾರ್ ಮತ್ತು ತಂಡ, ಚಾಮರಾಜನಗರ ಅವರಿಂದ ಸುಗಮ ಸಂಗೀತ
ರಾತ್ರಿ 9.00	:	ತಮರ ಡ್ಯಾನ್ಸ್ ಕಂಪನಿ, ಬೆಂಗಳೂರು ಅವರಿಂದ ಮೋಹಿನಿಯಾಟ್ಟಂ

ಗಾನಭಾರತಿ, ಕುವೆಂಪುನಗರ

ಸಂಜೆ 5.00	:	ಶ್ರೀ ವಿದ್ಯಾ ಮಹಂತೇಶ್ವರ ಸುಗಮ ಸಂಗೀತ ಕಲಾಬಳಗ, ಚಿತ್ರದುರ್ಗ ಅವರಿಂದ ಸುಗಮ ಸಂಗೀತ
ಸಂಜೆ 6.00	:	ಅನಿರುದ್ಧ ಮತ್ತು ತಂಡ, ಮೈಸೂರು ಅವರಿಂದ ಕೊಳಲು ವಾದನ
ರಾತ್ರಿ 8.00	:	ಲಯಲಹರಿ ಸಂಗೀತ ನೃತ್ಯ ಶಾಲೆ, ಬೆಂಗಳೂರು ಅವರಿಂದ ಭರತನಾಟ್ಯ
ರಾತ್ರಿ 9.00	:	ಚಿಗುರು ಕಲಾತಂಡ, ಮೈಸೂರು ಅವರಿಂದ ಜಾನಪದ ಗೀತೆಗಳು

ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ

ಸಂಜೆ 5.00	:	ಆನಂದ್ ಮತ್ತು ತಂಡ, ಮೈಸೂರು ಅವರಿಂದ ಕಂಸಾಳೆ
ಸಂಜೆ 5.30	:	ಸಿದ್ದಪ್ಪಾಜಿ ಮತ್ತು ತಂಡ, ರಾಮನಗರ ಅವರಿಂದ ಡೊಳ್ಳು ಕುಣಿತ
ಸಂಜೆ 6.00	:	ಲಾಸ್ಯ ನೃತ್ಯ ಕ್ಷೇತ್ರ, ಬೆಂಗಳೂರು (ಮೇಘನಾ ಐಯ್ಯಂಗಾರ್) ಅವರಿಂದ ಭರತನಾಟ್ಯ
ಸಂಜೆ 7.00	:	ಹೆಚ್.ಕೆ. ರವೀಂದ್ರ ಮತ್ತು ತಂಡ, ಮೈಸೂರು ಅವರಿಂದ ಸುಗಮ ಸಂಗೀತ
ರಾತ್ರಿ 8.00	:	ನಾತ್ಯ ಸನ್ನಿಧಿ (ಕೆ.ಹೆಚ್. ಮೋನಿಶಾ ಮತ್ತು ತಂಡ), ಬೆಂಗಳೂರು ಅವರಿಂದ ಭರತನಾಟ್ಯ
ರಾತ್ರಿ 9.00	:	ಪದ್ಮಪಾನಿ ಲಲಿತಾ ಕಲಾ ಅಕಾಡೆಮಿ, ಮೈಸೂರು (ನಾರಾಯಣಸ್ವಾಮಿ) ಅವರಿಂದ ಭಕ್ತಿಗೀತೆಗಳು.

ಚಿಕ್ಕಗಡಿಯಾರ (ಡೆಫರಿನ್ ಟವರ್)

ಸಂಜೆ 5.00	:	ಅಂತರರಾಷ್ಟ್ರೀಯ ಕಂಸಾಳೆ ಮಹದೇವಯ್ಯ ಕಲಾತಂಡ, ಮೈಸೂರು ಅವರಿಂದ ಕಂಸಾಳೆ
ಸಂಜೆ 5.30	:	ಭಾರ್ಗವಿ ಜನಪದ ಕಲಾಸಂಘ (ಆರ್. ಮಂಜುಳ)ದಿಂದ ಮಹಿಳಾ ಕೋಲಾಟ
ಸಂಜೆ 6.00	:	ಚಲುವನಹಳ್ಳಿ ಶೇಖರಪ್ಪ ಮತ್ತು ತಂಡ, ಹಾಸನ ಅವರಿಂದ ಕರಪಲ ಮೇಳ
ಸಂಜೆ 7.00	:	ಶ್ರೀ ಸಚಿನ್ ಕಲ್ಲಪ್ಪ ಮಾಂಗ, ಬಾಗಲಕೋಟೆ ಅವರಿಂದ ಕಣಿವಾದನ
ರಾತ್ರಿ 8.00	:	ಕವಿತಾ ಮತ್ತು ತಂಡ, ಬೆಂಗಳೂರು ಅವರಿಂದ ಮಹಿಳಾ ತಮಟೆ
ರಾತ್ರಿ 9.00	:	ಮಹೇಶ್ ಮತ್ತು ತಂಡ, ಚಾಮರಾಜನಗರ ಅವರಿಂದ ಜಾನಪದ ಗೀತೆಗಳು

ಪುರಭವನ

ಬೆಳಗ್ಗೆ 10.30	:	ಶಿವ ಪಾರ್ವತಿ ಕಲಾಭಿವೃದ್ಧಿ ಟ್ರಸ್ಟ್, ರಾಮನಗರ ಅವರಿಂದ 'ಕುರುಕ್ಷೇತ್ರ' ಪೌರಾಣಿಕ ನಾಟಕ ಪ್ರದರ್ಶನ
ಮಧ್ಯಾಹ್ನ 3.00	:	ಭುವನೇಶ್ವರಿ ಕಲಾಸಂಘ, ಬೆಂಗಳೂರು (ಶ್ರೀನಿವಾಸ) ಅವರಿಂದ 'ಮೀನಿನ ಹೆಜ್ಜೆ' ನಾಟಕ ಪ್ರದರ್ಶನ
ಸಂಜೆ 6.00	:	ಮನೋಜ್ ಮತ್ತು ತಂಡ, ಮೈಸೂರು ಅವರಿಂದ 'ಶ್ರೀರಾಮ ಪಟ್ಟಾಭಿಷೇಕ' ಪೌರಾಣಿಕ ನಾಟಕ

ಕಿರು ರಂಗಮಂದಿರ, ಕಲಾಮಂದಿರ ಆವರಣ

ಮಧ್ಯಾಹ್ನ 2.00	:	ಚನ್ನಸಂಗಮೇಶ್ವರ ಕಲಾ ಮತ್ತು ಸಾಂಸ್ಕೃತಿಕ ಸಂಘದವರಿಂದ ಜಾನಪದ ಗೀತೆಗಳು
ಮಧ್ಯಾಹ್ನ 3.00	:	ರಂಗವಲ್ಲಿ, ಮೈಸೂರು ಅವರಿಂದ 'ಪ್ರತಿಜ್ಞಾ ಸ್ವಪ್ನ ನಾಟಕ' ಪ್ರದರ್ಶನ
ಸಂಜೆ 7.00	:	ಸಂಕಲ್ಪ, ಮೈಸೂರು (ಹುಲುಗಪ್ಪ ಕಟ್ಟಿಮನಿ) ಅವರಿಂದ 'ಜತೆಗಿರುವನು ಚಂದಿರ' ನಾಟಕ ಪ್ರದರ್ಶನ

ರಮಾಗೋವಿಂದ ರಂಗಮಂದಿರ, ರಾಮಕೃಷ್ಣನಗರ

ಸಂಜೆ 5.15	:	ಶಿವರಾಮಯ್ಯ ಮತ್ತು ತಂಡದವರಿಂದ ಚಂಡೇ ಮೇಳ
ಸಂಜೆ 5.45	:	ಪಿ.ಜಿ. ಸಹನಾ ಮತ್ತು ತಂಡ, ಸಾಗರ ಅವರಿಂದ ಸುಗಮ ಸಂಗೀತ
ಸಂಜೆ 6.30	:	ಶ್ರೀ ಮಾರುತಿ ತೊಗಲುಗೊಂಬೆ ಟ್ರಸ್ಟ್, ಬಳ್ಳಾರಿ ಅವರಿಂದ ತೊಗಲು ಗೊಂಬೆಯಾಟ
ರಾತ್ರಿ 7.30	:	ಸ್ಪಂದನ ಸಾಂಸ್ಕೃತಿಕ ಪರಿಷತ್, ಮಂಡ್ಯ (ಟಿ. ಸತೀಶ್ ಜವರೇಗೌಡ) ಅವರಿಂದ 'ನಮ್ಮಮ್ಮ ಅಂದರೆ ನನಗಿಷ್ಟ' ನಾಟಕ ಪ್ರದರ್ಶನ

ನಟನ ರಂಗಮಂದಿರ, ರಾಮಕೃಷ್ಣನಗರ

ಸಂಜೆ 5.00	:	ಸುಪ್ರಿಯಾ ಟಿ. ಭಟ್ಟ ಮತ್ತು ತಂಡ, ಧಾರವಾಡ ಅವರಿಂದ ಶಾಸ್ತ್ರೀಯ ಸಂಗೀತ
ಸಂಜೆ 6.30	:	ನಿರಂತರ, ಮೈಸೂರು ಅವರಿಂದ 'ಗೊರೂರು' ನಾಟಕ ಪ್ರದರ್ಶನ

ಶ್ರೀಕಂಠೇಶ್ವರ ದೇವಸ್ಥಾನ, ನಂಜನಗೂಡು

ಸಂಜೆ 5.00	:	ಗೌತಮ್ ಮತ್ತು ತಂಡ, ರಾಮನಗರ ಅವರಿಂದ ಹುಲಿವೇಷ
ಸಂಜೆ 5.30	:	ಸಿ. ವೆಂಕಟೇಶ್ ಮತ್ತು ತಂಡ, ರಾಮನಗರ ಅವರಿಂದ ಪಟ ಕುಣಿತ
ಸಂಜೆ 6.00	:	ಮಹಿಳಾ ಭಾರತಿ ಎ. ಶುಭಾಶ್ರೀ, ಮೈಸೂರು ಅವರಿಂದ ಭಕ್ತಿಗೀತೆಗಳು
ಸಂಜೆ 7.00	:	ಎಸ್.ಸಿ. ಪುಷ್ಪಲತಾ ಮತ್ತು ತಂಡ, ಚಾಮರಾಜನಗರ ಅವರಿಂದ ಬುದ್ಧ ಗೀತೆಗಳು
ರಾತ್ರಿ 8.00	:	ನೃತ್ಯ ದಿಶಾ ಟ್ರಸ್ಟ್, ಬೆಂಗಳೂರು (ದರ್ಶಿನಿ ಮಂಜುನಾಥ್) ಅವರಿಂದ ನೃತ್ಯ ರೂಪಕ
ರಾತ್ರಿ 9.00	:	ಪುಷ್ಪಕ್ ಕಲಾವೃಂದ, ಬೆಂಗಳೂರು (ಬಿ.ಆರ್. ಪುಷ್ಪಕ್ ಸವಾಲ್) ಅವರಿಂದ ಸುಗಮ ಸಂಗೀತ

ನವರಾತ್ರಿ ಜನಪದ ರಂಗ ಉತ್ಸವ, ವನರಂಗ, ರಂಗಾಯಣ

ಸಂಜೆ 6.30	:	ಶ್ರೀ ಅಂಬಿಕಾ ದೇವಿ ಸಂಗ್ಯಾ ಬಾಳ್ಯಾ ಬಯಲಾಟ ಕಲಾಸಂಘ, ಅಮ್ಮನಗಿ, ಬೆಳಗಾವಿ ಅವರಿಂದ 'ಸಂಗ್ಯಾ ಬಾಳ್ಯಾ' ನಾಟಕ ಪ್ರದರ್ಶನ

ಪ್ರತಿದಿನದ ಆಕರ್ಷಣೆ

ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಪ್ಪಣ್ಣ ಪಾರ್ಕ್	–	ಬೆಳಗ್ಗೆ 9 ರಿಂದ ರಾತ್ರಿ 8.30
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಲಿಂಗಾಂಬುದಿ ಕೆರೆ	–	ಬೆಳಗ್ಗೆ 9 ರಿಂದ ರಾತ್ರಿ 7
ದಸರಾ ಫಲಪುಷ್ಪ ಪ್ರದರ್ಶನ, ಸ್ಥಳ: ಕುಕ್ಕರಹಳ್ಳಿ ಕೆರೆ	–	ಬೆಳಗ್ಗೆ 9 ರಿಂದ ರಾತ್ರಿ 7
ಪುಸ್ತಕ ಮೇಳ, ಸ್ಥಳ: ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ	–	ಬೆಳಗ್ಗೆ 10 ರಿಂದ ರಾತ್ರಿ 7
ದಸರಾ ವಸ್ತುಪ್ರದರ್ಶನ, ಸ್ಥಳ: ವಸ್ತುಪ್ರದರ್ಶನ ಮೈದಾನ	–	ಮಧ್ಯಾಹ್ನ 2.30 ರಿಂದ ರಾತ್ರಿ 8.30
ಆಹಾರ ಮೇಳ, ಸ್ಥಳ: ಮಹಾರಾಜ ಕಾಲೇಜು ಮೈದಾನ	–	ಬೆಳಗ್ಗೆ 11 ರಿಂದ ರಾತ್ರಿ 9
ರೈಲ್ ಮ್ಯೂಸಿಯಂ	–	ಬೆಳಗ್ಗೆ 10 ರಿಂದ ರಾತ್ರಿ 8

ಪ್ರಜಾಪ್ರಭುತ್ವಕ್ಕಾಗಿ ಸಾವಿರಾರು ಮಂದಿಯಿಂದ ಯೋಗ ಸರಪಳಿ



ಮೈಸೂರು ಅರಮನೆ ಆವರಣದಲ್ಲಿ ಸೋಮವಾರ ಸಾವಿರಾರು ಮಂದಿ ಯೋಗಾಸಕ್ತರು ಪ್ರಜಾಪ್ರಭುತ್ವಕ್ಕಾಗಿ ಮಾನವ ಸರಪಳಿ ನಿರ್ಮಿಸಿದರು.

ಮೈಸೂರು,ಅ.7(ಆರ್‌ಕೆ)–ಮೈಸೂರು ಅರಮನೆ ಆವರಣದಲ್ಲಿ ಸೋಮವಾರ ಸಾವಿರಾರು ಮಂದಿ ಪ್ರಜಾಪ್ರಭುತ್ವಕ್ಕಾಗಿ ಮಾನವ ಸರಪಳಿ ನಿರ್ಮಿಸಿ ಜನರಲ್ಲಿ ಜಾಗೃತಿ ಮೂಡಿಸಿದರು. ಜಿಲ್ಲಾಡಳಿತ, ಆಯುಷ್ ಇಲಾಖೆ, ಯೋಗ ದಸರಾ ಉಪಸಮಿತಿ, ಜಿಎಸ್‌ಎಸ್ ಯೋಗ ಪ್ರತಿಷ್ಠಾನ, ಮೈಸೂರು ಯೋಗ ಒಕ್ಕೂಟ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಂಸ್ಥೆ, ಭಾರತೀಯ ಸ್ವಾಭಿಮಾನ ಟ್ರಸ್ಟ್, ಯೋಗ ಕ್ರೀಡಾ ಪ್ರತಿಷ್ಠಾನ ಹಾಗೂ ಹಲವು ಯೋಗ ತರಬೇತಿ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 2024ರ ದಸರಾ ಮಹೋತ್ಸವ ಅಂಗವಾಗಿ ಏರ್ಪಡಿಸಿದ್ದ ಪ್ರಜಾಪ್ರಭುತ್ವಕ್ಕಾಗಿ ಮಾನವ ಯೋಗ ಸರಪಳಿ ಕಾರ್ಯಕ್ರಮದಲ್ಲಿ 4,500 ಮಂದಿ ಯೋಗಾಸಕ್ತರು ಪಾಲ್ಗೊಂಡಿದ್ದರು.

ಬೆಳಗ್ಗೆ 6ರಿಂದ 9 ಗಂಟೆವರೆಗೆ ನಡೆದ ಯೋಗ ಪ್ರದರ್ಶನವನ್ನು ಯೋಗ ದಸರಾ ಉಪಸಮಿತಿ ಅಧ್ಯಕ್ಷ ಎಂ.ಯೋಗೇಶ್ ಉದ್ಘಾಟಿಸಿದರು. ಇದೇ ವೇಳೆ ಭಾರತದ ಸಂವಿಧಾನ ಪೀಠಿಕೆಯನ್ನು ಬೋಧಿಸಲಾಯಿತು. ಸೂರ್ಯ ನಮಸ್ಕಾರ, ವಜ್ರಾಸನ, ತ್ರಿಕೋನಾಸನ, ಸಿದ್ಧಾಸನ, ಅರ್ಧ ಚಂದ್ರಾಸನ ಸೇರಿದಂತೆ ವಿವಿಧ ಭಂಗಿಯ ಯೋಗ ಪ್ರದರ್ಶನ ಮಾಡಲಾಯಿತು.

ಟೀ ಶರ್ಟ್, ಟ್ರ್ಯಾಕ್ ಪ್ಯಾಂಟ್ ಧರಿಸಿ ಮ್ಯಾಟ್‌ನೊಂದಿಗೆ ಆಗಮಿಸಿದ್ದ ಯೋಗಾಸಕ್ತರು ಜೆಎಸ್‌ಎಸ್ ಮತ್ತು ಸರ್ಕಾರಿ ಆಯುರ್ವೇದ ಕಾಲೇಜು ವಿದ್ಯಾರ್ಥಿಗಳು ಯೋಗ ಸರಪಳಿ ನಿರ್ಮಿಸಿ, ಪ್ರಜಾಪ್ರಭುತ್ವದ ಮಹತ್ವ ಸಾರಿದರು. ಅವರಿಗೆ ದಸರಾ ಯೋಗ ಸಮಿತಿಯಿಂದ ಉಪಾಹಾರದ ವ್ಯವಸ್ಥೆ ಮಾಡಲಾಯಿತು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪಾ, ಜೆಎಸ್‌ಎಸ್ ಪ್ರತಿಷ್ಠಾನದ ಮುಖ್ಯಸ್ಥ ಡಿ.ಶ್ರೀಹರಿ, ಉಪಸಮಿತಿ ವಿಶೇಷಾಧಿಕಾರಿ ಕೆ.ರಮ್ಯಾ, ಕಾರ್ಯಾಧ್ಯಕ್ಷ ಅನಂತರಾಜು, ಕಾರ್ಯದರ್ಶಿ ಪುಷ್ಪಾ ಹಾಗೂ ಇನ್ನಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಹಾಲು ಕರೆಯುವ ಸ್ಪರ್ಧೆ: ಆನೇಕಲ್ ಹಸುವಿಗೆ ಪ್ರಥಮ ಬಹುಮಾನ



ರೈತ ದಸರಾ ಉಪಸಮಿತಿ ಆಯೋಜಿಸಿದ್ದ ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಆನೇಕಲ್ ತಾಲೂಕಿನ ಕಗ್ಗಲೀಪುರದ ರಾಮಚಂದ್ರರೆಡ್ಡಿ ಅವರ ಹಸುವನ್ನು ಶಾಸಕ ಕೆ.ಹರೀಶ್‌ಗೌಡರು ಅಭಿನಂದಿಸಿದರು.

> “ನಾಲ್ಕು ವರ್ಷದಿಂದ ದಸರಾ ಹಾಲು ಕರೆಯುವ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದೇನೆ. ವಿವಿಧೆಡೆ ನಡೆದ ಮಿಲ್ಕ್ ಶೋಗಳಲ್ಲಿ ಭಾಗವಹಿಸುವುದೇ ಒಂದು ಹವ್ಯಾಸ. ನಮ್ಮ ಫಾರಂನಲ್ಲಿ 80 ಹಸು ಸಾಕಿದ್ದೇನೆ. ರಾಜ್ಯದಲ್ಲಿ ನಡೆಯುವ ಎಲ್ಲಾ ಸ್ಪರ್ಧೆಗಳಲ್ಲಿಯೂ ಭಾಗವಹಿಸುತ್ತೇನೆ. ಎಚ್‌ಎಫ್, ಜರ್ಸಿ, ಸಾಯ್‌ವಾನ್ ತಳಿಯ ಹಸುಗಳು ಸಾಕಿದ್ದೇನೆ. ಈ ಬಾರಿ ನಮ್ಮ ಹಸುವಿಗೆ ಪ್ರಥಮ ಬಹುಮಾನ ಬಂದಿರುವುದಕ್ಕೆ ಸಂತೋಷವಾಗಿದೆ.
>
> –ರಾಮಚಂದ್ರರೆಡ್ಡಿ

> “ರೈತರು ಹೈನುಗಾರಿಕೆ ಅವಲಂಬಿಸುವುದರಿಂದ ಆರ್ಥಿಕವಾಗಿ ಲಾಭ ಮಾಡಿಕೊಳ್ಳಬಹುದು. ಅತಿವೃಷ್ಟಿ, ಅನಾವೃಷ್ಟಿಯಿಂದ ಬೆಳೆದ ಬೆಳೆ ಕೈ ಸೇರದೇ ಕಂಗಾಲಾದ ಸಂದರ್ಭ ಒದಗಿ ಬಂದರೆ, ಅಂತಹ ಸನ್ನಿವೇಶದಲ್ಲಿ ಉಪ ಕಸುಬುಗಳು ರೈತರಿಗೆ ವರದಾನವಾಗುತ್ತದೆ. ಹೈನುಗಾರಿಕೆ ರೈತರ ಆರ್ಥಿಕ ಸ್ಥಿತಿಗತಿ ಸುಧಾರಿಸುತ್ತದೆ. ಹೈನುಗಾರಿಕೆ ಪ್ರೋತ್ಸಾಹಿಸಲು ಇಲಾಖೆ ಕ್ರಮ ಕೈಗೊಂಡಿದ್ದು, ಅದರ ಅಂಗವಾಗಿ ಈ ಸ್ಪರ್ಧೆ ಆಯೋಜಿಸಲಾಗಿದೆ.
>
> –ನಾಗರಾಜ್, ಪಶುಪಾಲನಾ ಇಲಾಖೆ ಉಪ ನಿರ್ದೇಶಕ


ಮೈಸೂರು,ಅ.7(ಎಂಟಿವೈ)– ದಸರಾ ಮಹೋತ್ಸವದ ಅಂಗವಾಗಿ ರೈತ ದಸರಾ ಉಪಸಮಿತಿ ಆಯೋಜಿಸಿದ್ದ ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಆನೇಕಲ್ ತಾಲೂಕಿನ ಕಗ್ಗಲೀಪುರದ ರಾಮಚಂದ್ರರೆಡ್ಡಿ ಅವರ ಹಸು 42.840 ಲೀಟರ್ ಹಾಲು ಕರೆದು ಪ್ರಥಮ ಸ್ಥಾನ ಪಡೆದರೆ, ಚನ್ನರಾಯಪಟ್ಟಣ ತಾಲೂಕಿನ ತೋಟಿ ಗ್ರಾಮದ ಬಾಬು ಎಂಬುವರ ಹಸು ಎರಡನೇ ಬಹುಮಾನ ಪಡೆದುಕೊಂಡು ಗಮನ ಸೆಳೆಯಿತು.

ಮೈಸೂರಿನ ಜೆ.ಕೆ.ಮೈದಾನದಲ್ಲಿ ರೈತ ದಸರಾ ಉಪ ಸಮಿತಿ ಹಾಗೂ ಪಶು ಸಂಗೋಪನಾ ಇಲಾಖೆ ವತಿಯಿಂದ ಆಯೋಜಿಸಿದ್ದ ರಾಜ್ಯ ಮಟ್ಟದ ಹಾಲು ಕರೆಯುವ ಸ್ಪರ್ಧೆಯಲ್ಲಿ ಮೈಸೂರು ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಿಂದ 40ಕ್ಕೂ ಹೆಚ್ಚು ಹೆಚ್‌ಎಫ್‌ಎಕ್ಸ್ ತಳಿಯ ಹಸುಗಳನ್ನು ಗೋಪಾಲಕರು ಕರೆತಂದಿದ್ದರು. ಎರಡು ದಿನಗಳ ಕಾಲ ನಡೆದ ಸ್ಪರ್ಧೆಯಲ್ಲಿ ಆರಂಭದಲ್ಲಿ ಬಹುತೇಕ ಹಸುಗಳು ಬೆಳಗ್ಗೆ 20 ಲೀಟರ್ ಹಾಲು ಕರೆಯುತ್ತಿದ್ದವು. ಅವುಗಳಲ್ಲಿ ಕೆಲವು ಸಂಜೆ ವೇಳೆಗೆ ಕಡಿಮೆ ಪ್ರಮಾಣದ ಹಾಲು ಕರೆದ ಹಿನ್ನೆಲೆಯಲ್ಲಿ ಫೈನಲ್ ಸುತ್ತಿಗೆ ಕೇವಲ ಏಳು ಹಸುಗಳನ್ನು ಮಾತ್ರ ಆಯ್ಕೆ ಮಾಡಲಾಯಿತು.

ಇಂದು ಬೆಳಗ್ಗೆ ನಡೆದ ಫೈನಲ್ ಸುತ್ತಿನ ಸ್ಪರ್ಧೆಯಲ್ಲಿ ಆಯ್ಕೆಯಾಗಿದ್ದ ಎಲ್ಲಾ 7 ಹಸುಗಳು 16 ಲೀಟರ್‌ನಿಂದ 22 ಲೀಟರ್‌ವರೆಗೂ ಹಾಲು ಕರೆದವು. ಸಂಜೆ ವೇಳೆ ನಡೆದ ಮತ್ತೊಂದು ಸುತ್ತಿನ ಸ್ಪರ್ಧೆಯಲ್ಲಿ 14ರಿಂದ 20 ಲೀಟರ್‌ವರೆಗೆ ಹಾಲು ಕರೆದವು. ಅಂತಿಮವಾಗಿ ಪ್ರಥಮ ನಾಲ್ಕು ಹಸುಗಳನ್ನು ಬಹುಮಾನಕ್ಕೆ ಆಯ್ಕೆ ಮಾಡಲಾಯಿತು.

ಪ್ರಥಮ ಬಹುಮಾನ ಪಡೆದ ಆನೇಕಲ್ ತಾಲೂಕಿನ ಕಗ್ಗಲೀಪುರದ ರಾಮಚಂದ್ರ ರೆಡ್ಡಿ ಅವರ ತನುಷ್ ಡೈರಿ ಫಾರಂಗೆ ಸೇರಿದ ಹಸು ಬೆಳಗ್ಗೆ 22.800 ಲೀಟರ್, ಸಂಜೆ 20.040 ಲೀಟರ್‌ನೊಂದಿಗೆ ದಿನಕ್ಕೆ 42.840 ಲೀಟರ್ ಹಾಲು ಕರೆದು ಪ್ರಥಮ ಸ್ಥಾನ ಅಲಂಕರಿಸಿತು. ಎರಡನೇ ಸ್ಥಾನ ಪಡೆದ ಚನ್ನರಾಯಪಟ್ಟಣ ತಾಲೂಕಿನ ಹಿರಿಸಾವೆ ಹೋಬಳಿಯ ತೋಟಿ ಗ್ರಾಮದ ಬಾಬು ಅವರ ಹಸು ಬೆಳಗ್ಗೆ 22.560 ಲೀ, ಸಂಜೆ 19.740 ಲೀಟರ್ ಹಾಲಿನೊಂದಿಗೆ ಒಟ್ಟು 42.300 ಲೀಟರ್ ಹಾಲು ಕರೆಯಿತು. ಆನೇಕಲ್ ತಾಲೂಕಿನ ದೊಮ್ಮಸಂದ್ರದ ನಕುಂದಿ ಗ್ರಾಮದ ಅಜಯ್ ಪಿ.ರೆಡ್ಡಿ ಅವರ ಅಜಯ್ ವೆಟ್ ಫಾರಂನ ಹಸು ಬೆಳಗ್ಗೆ 21.610 ಲೀಟರ್, ಸಂಜೆ 19.690 ಲೀಟರ್ ಹಾಲಿನೊಂದಿಗೆ 41.300 ಲೀಟರ್ ಹಾಲು ಕರೆದು 3ನೇ ಸ್ಥಾನ ಪಡೆಯಿತು. ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ತಾಲೂಕಿನ ಕಣಿಯನಹುಂಡಿ ದೇವರಾಜ್ ಎಂಬುವರ ಎಜಿಎಂ ಫಾರಂಗೆ ಸೇರಿದ ಹಸು ಬೆಳಗ್ಗೆ 20.830 ಲೀಟರ್, ಸಂಜೆ 19.750 ಲೀಟರ್ ಹಾಲು ಕರೆದು, ದಿನವೊಂದಕ್ಕೆ 40.580 ಲೀಟರ್ ಹಾಲು ಕರೆದು 4ನೇ ಬಹುಮಾನ ತನ್ನದಾಗಿಸಿಕೊಂಡಿತು. ಉಳಿದಂತೆ ಮೈಸೂರಿನ ಗಾಯತ್ರಿಪುರಂ ಸತೀಶ್‌ಕುಮಾರ್ ಅವರ ಹಸು 38.350 ಲೀಟರ್, ಹಿನಕಲ್ ಧನ್ಯಸಿರಿ ಡೈರಿ ಫಾರಂನ ಎಸ್.ಮಹೇಶ್ ಅವರ ಹಸು 36.150 ಲೀಟರ್, ನೆಲಮಂಗಲದ ಭಕ್ತನಪಾಳ್ಯದ ಮುನಿರಾಜು ಎಂಬುವರ ಶ್ರೀ ಲಕ್ಷ್ಮೀ ಡೈರಿ ಫಾರಂಗೆ ಸೇರಿದ ಹಸು 31.170 ಲೀಟರ್ ಹಾಲು ಕರೆದು 7ನೇ ಸ್ಥಾನ ಪಡೆಯಿತು. ಪ್ರಥಮ ಬಹುಮಾನವಾಗಿ 1 ಲಕ್ಷ ರೂ. ನಗದು, ದ್ವಿತೀಯ ಸ್ಥಾನಕ್ಕೆ 80 ಸಾವಿರ ರೂ., ತೃತೀಯ ಸ್ಥಾನಕ್ಕೆ 60 ಸಾವಿರ ರೂ., 4ನೇ ಸ್ಥಾನ ಪಡೆದವರಿಗೆ 40 ಸಾವಿರ ರೂ. ನಗದು ಬಹುಮಾನ ನೀಡಲಾಯಿತು.

ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ 66ನೇ ಅಕ್ವಟಿಕ್ ಮೀಟ್ ಉದ್ಘಾಟನೆ...





ಮೈಸೂರಿನ ಯಾದವಗಿರಿಯ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ 66ನೇ ಅಕ್ವಟಿಕ್ ಮೀಟ್ ಅನ್ನು ಶಾಲೆಯ ಅಲುಮ್ನಿಯೂ ಆದ ರಘುಲಾಲ್ ಅಂಡ್ ಕಂಪನಿಯ ಎನ್. ರಾಘವನ್ ಇತ್ತೀಚೆಗೆ ಉದ್ಘಾಟಿಸಿದರು. ಈ ವೇಳೆ ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಕರಸ್ಪಾಂಡೆಂಟ್ ಸ್ವಾಮಿ ಯುಕ್ತೇಶಾ ನಂದಜೀ ಅವರಿಗೆ ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ಅರ್ಪಿಸಿದರು. ಚಿತ್ರದಲ್ಲಿ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ, ಪ್ರಿನ್ಸಿಪಾಲ್ ಟಿ.ಕೆ. ಚಂದ್ರಶೇಖರ್ ಕಾಣಬಹುದು. ಬಲಚಿತ್ರದಲ್ಲಿ ವಿದ್ಯಾರ್ಥಿಗಳು ಈಜು ಸ್ಪರ್ಧೆಯಲ್ಲಿ ಪಾಲ್ಗೊಂಡಿರುವುದನ್ನು ಕಾಣಬಹುದು.

ಮೈಸೂರು ಮಿತ್ರ ಮಂಗಳವಾರ 8 ಅಕ್ಟೋಬರ್ 2024

ಶ್ರೀರಂಗಪಟ್ಟಣದಲ್ಲಿ ಯುವ ದಸರಾ ಸಂಭ್ರಮ

ವಿದ್ಯಾರ್ಥಿಗಳು, ಜನಪದ ತಂಡಗಳಿಂದ ಸಂಗೀತ, ನೃತ್ಯ ರಸದೌತಣ


ಪಿ.ಹೊಸಹಳ್ಳಿ ಆರಾಧನಾ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ನವದುರ್ಗೆ ನೃತ್ಯ


ನಗುವನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಸಮೂಹ ಜನಪದ ನೃತ್ಯ


ಶ್ರೀರಂಗಪಟ್ಟಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳ ಅರ್ಜುನ ಆನೆಯ ಬಗ್ಗೆ ನೃತ್ಯ


ನಗುವನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ ಪೂಜೆ ಕುಣಿತ ಹಾಗೂ ವೀರಗಾಸೆ

ಶ್ರೀರಂಗಪಟ್ಟಣ, ಅ.7– ಶ್ರೀರಂಗಪಟ್ಟಣ ದಸರಾ ಮಹೋತ್ಸವ ಅಂಗವಾಗಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಏರ್ಪಡಿಸಿದ್ದ ಯುವ ದಸರಾ ಕಾರ್ಯಕ್ರಮದಲ್ಲಿ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಜಾನಪದ ಕಲಾ ತಂಡಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಪಟ್ಟಣದ ಶ್ರೀರಂಗನಾಥಸ್ವಾಮಿ ಮೈದಾನದಲ್ಲಿನ ಶ್ರೀರಂಗ ವೇದಿಕೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಸಾಧನೆ ಬಗ್ಗೆ ಸಮೂಹ ನೃತ್ಯ, ಆರಾಧನಾ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ನೃತ್ಯ (ನವದುರ್ಗೆಯರು), ನಗುವನಹಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಸಮೂಹ ನೃತ್ಯ (ಜಾನಪದ ಕಲೆ ಆಧಾರಿತ), ಅರಕೆರೆ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಸಮೂಹ ನೃತ್ಯ (ಕನ್ನಡ ನಾಡು ನುಡಿ), ಶ್ರೀರಂಗಪಟ್ಟಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ ನೃತ್ಯ(ಅರ್ಜುನ ಆನೆಯ ಬಗ್ಗೆ), ಪರಿವರ್ತನಾ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ ಜಾನಪದ ಸಮೂಹ ಗೀತಗಾಯನ, ಭಾರತಿನಗರ ಕಾಲೇಜಿನಿಂದ ಪೌರಾಣಿಕ ನಾಟಕ ದೃಶ್ಯ, ಹನುಮಂತನಗರ ಭಾರತಿ ಪದವಿ ಪೂರ್ವ ಕಾಲೇಜಿನಿಂದ ವೈಶಂಪಾಯನ ಸರೋವರದಲ್ಲಿ ದುರ್ಯೋಧನ ಪ್ರಹಸನಗಳನ್ನೊಗೊಂಡ ಯುವ ದಸರಾ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ: ವಿವಿಧ ಕಲಾ ತಂಡಗಳಿಂದ ಜನಪದ ಗೀತೆ, ಜನಪದ ಸಂಗೀತ, ಭರತನಾಟ್ಯ, ಜಾನಪದ ನೃತ್ಯ, ಪೌರಾಣಿಕ ನಾಟಕ, ಸುಗಮ ಸಂಗೀತ, ಭರತ ನಾಟ್ಯ, ಸೋಬಾನೆಪದ, ಕರ್ನಾಟಕ ಶಾಸ್ತ್ರೀಯ ಸಂಗೀತ, ಹಿಂದೂಸ್ಥಾನಿ ತಬಲ, ಜಾನಪದ ಗೀತೆ ಸೇರಿದಂತೆ ಇನ್ನಿತರೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಮಕ್ಕಳ ಸಿನಿಮೋತ್ಸವ ಕಾರ್ಯಕ್ರಮ: ಮಕ್ಕಳ ಚಲನಚಿತ್ರಗಳ ಸಿನಿಮೋತ್ಸವದ ಅಂಗವಾಗಿ ಗಂಜಾಂನ ಶ್ರೀದೇವಿ ಚಿತ್ರ ಮಂದಿರದಲ್ಲಿ 'ಅನ್ನ', ಬಾಬುರಾಯನ ಕೊಪ್ಪಲಿನ ಭಾರತಿ ಚಿತ್ರಮಂದಿರದಲ್ಲಿ 'ನಾನು ಸಚಿನ್ ತೆಂಡೂಲ್ಕರ್ ಅಲ್ಲ' ಹಾಗೂ ಅರಕೆರೆ ಮಂಜುನಾಥ್ ಚಿತ್ರಮಂದಿರದಲ್ಲಿ 'ಜೀರ್ಜಿಂಬೆ' ಮಕ್ಕಳ ಚಲನ ಚಿತ್ರಗಳು ಪ್ರದರ್ಶನಗೊಂಡವು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಡಾ. ಬಿ.ವಿ.ನಂದೀಶ್ ಕಾರ್ಯಕ್ರಮ ಉದ್ಘಾಟಿಸಿದರು. ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ನಿರ್ದೇಶಕ ಸಿಚಲುವಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಉದ್ಘಾಟನೆಯಾದ ಒಂದೇ ವರ್ಷಕ್ಕೆ ಶಿಥಿಲಗೊಂಡ ಎಕ್ಸ್‌ಪ್ರೆಸ್‌ವೇ ತಡೆಗೋಡೆ

ಭರದಿಂದ ಸಾಗಿದೆ ದುರಸ್ತಿ ಕಾರ್ಯ

ಮಂಡ್ಯ,ಅ.7– ಕೇಂದ್ರ ಸರ್ಕಾರದ ಪ್ರತಿಷ್ಠಿತ ಯೋಜನೆಯಾದ ಸುಮಾರು 10 ಸಾವಿರ ಕೋಟಿ ರೂ. ವೆಚ್ಚದ ಬೆಂಗಳೂರು –ಮೈಸೂರು ಎಕ್ಸ್‌ಪ್ರೆಸ್‌ವೇನ ತಡೆ ಗೋಡೆ ಉದ್ಘಾಟನೆಯಾದ ಒಂದೂವರೆ ವರ್ಷಕ್ಕೆ ಶಿಥಿಲಗೊಂಡಿರುವ ಘಟನೆ ತಾಲೂಕಿನ ಹಳೇ ಬೂದನೂರು ಗ್ರಾಮದ ಬಳಿ ನಡೆದಿದೆ.

ಕಳಪೆ ಕಾಮಗಾರಿ ನಡೆದ ಪರಿಣಾಮ ತಡೆಗೋಡೆ ಶಿಥಿಲಗೊಂಡಿದೆ ಎಂಬ ಆರೋಪ ಕೇಳಿಬಂದಿದೆ. ಈ ಕುರಿತು ಮಾಹಿತಿ ನೀಡಿದ ಬೂದನೂರು ಗ್ರಾಮಸ್ಥ ಶಿವು ಅವರು, 2023ರ ಮಾರ್ಚ್ 12 ರಂದು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸುವ ಹಿನ್ನೆಲೆಯಲ್ಲಿ ತರಾತುರಿಯಲ್ಲಿ ಗುತ್ತಿಗೆದಾರ ಕಂಪನಿ 4 ಕಿ.ಮೀ ಉದ್ದದ ರಸ್ತೆಯನ್ನು ಕಳಪೆ ಕಾಮಗಾರಿ ನಡೆಸಿತ್ತು.

ಸ್ಥಳೀಯರು ಇದರ ಬಗ್ಗೆ ಆರೋಪ ಮಾಡಿದ್ದರು. ಆದರೂ ಕಂಪನಿ ಎಚ್ಚೆತ್ತುಕೊಳ್ಳದೆ ತರಾತುರಿಯಲ್ಲಿ ಕಾಮಗಾರಿ ಮುಗಿಸಿತ್ತು. ಸ್ಥಳೀಯರು ಅಂದೇ ರಸ್ತೆ ಅಂಡರ್ ಪಾಸ್ ಬಳಿ ತಡೆಗೋಡೆಗಳು ವಾಲಿರುವ ಬಗ್ಗೆ ದೂರು ನೀಡಿದ್ದರು. ನಂತರ ಮಾರ್ಚ್ 12ರಂದು


ಶಿಥಿಲಗೊಂಡಿರುವ ತಡೆಗೋಡೆಯನ್ನು ಕ್ರೇನ್ ಮೂಲಕ ದುರಸ್ತಿಪಡಿಸುತ್ತಿರುವುದು.

ಪ್ರಧಾನಿ ನರೇಂದ್ರ ಮೋದಿ ಅವರು ಉದ್ಘಾಟನೆ ನೆರವೇರಿಸಿದ್ದರು. ನಂತರ ಅಪಘಾತ ಹೆಚ್ಚಾದ ಹಿನ್ನೆಲೆಯಲ್ಲಿ ಸಂಚಾರ ಮತ್ತು ರಸ್ತೆ ಸುರಕ್ಷಾ ಆಯುಕ್ತ ಅಲೋಕ್ ಕುಮಾರ್ ಸಹ ವೀಕ್ಷಣೆ ಮಾಡಿದ್ದರು. ಆದರೂ ಯಾವುದೇ ಕ್ರಮ ಆಗಿಲ್ಲ ಎಂದು ಆರೋಪಿಸಿದ್ದಾರೆ.

ಕಬ್ಬಿಣದ ರಾಡು, ಕಾಂಕ್ರೀಟ್ ತುಂಬುವ ಕೆಲಸ: ಶಿಥಿಲಗೊಂಡಿರುವ ತಡೆಗೋಡೆ ದುರಸ್ತಿ ಕಾರ್ಯ ಆರಂಭವಾಗಿದ್ದು ಹೆದ್ದಾರಿ ಪ್ರಾಧಿಕಾರ ಕಬ್ಬಿಣದ ರಾಡು ಅಳವಡಿಸಲು ರಂಧ್ರಗಳನ್ನು ಮಾಡಿ ಜೊತೆಗೆ ಕಾಂಕ್ರೀಟ್ ತುಂಬುವ ಕಾಮಗಾರಿ ನಡೆಸುತ್ತಿದೆ. ಇದು ಸಹ ಅವೈಜ್ಞಾನಿಕ, ಕಳಪೆ ಕಾಮಗಾರಿ ಎಂಬ ದೂರು ಸ್ಥಳೀಯರಿಂದ ವ್ಯಕ್ತವಾಗಿದ್ದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕ್ರಮ ವಹಿಸುವಂತೆ ಆಗ್ರಹಿಸಿದ್ದಾರೆ.

ಮುಕ್ತ ವಿವಿಯ ವಿವಿಧ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮಂಡ್ಯ,ಅ.7– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2024–2025ನೇ ಶೈಕ್ಷಣಿಕ ಸಾಲಿನ ಜುಲೈ ಆವೃತ್ತಿಯ ಸ್ನಾತಕ /ಸ್ನಾತಕೋತ್ತರ ಕೋರ್ಸ್‌ಗಳಾದ ಬಿ.ಎ/ ಬಿಕಾಂ, ಬಿಸಿಎ/ಬಿಬಿಎ, ಬಿಎಸ್ಸಿ, ಬಿಎಸ್ ಡಬ್ಲ್ಯೂ, ಎಂಎ/ಎಂಕಾಂ, ಎಂಬಿಎ, ಎಂಎಸ್ಸಿ ಎಂಎಸ್‌ಡಬ್ಲ್ಯೂ, ಎಂಸಿಎ ಪ್ರಥಮ ವರ್ಷದ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ನವೆಂಬರ್ 15 ಕೊನೆಯ ದಿನವಾಗಿದ್ದು, ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಅಧಿಕೃತ ವೆಬ್ ಸೈಟ್ www.ksoumysore.ac.in ನಲ್ಲಿ ಪ್ರವೇಶಾತಿ ಶುಲ್ಕ, ವಿದ್ಯಾರ್ಹತೆ ಹಾಗೂ ವಿವರಣಾ ಪುಸ್ತಕ ಮತ್ತು ಆನ್ ಲೈನ್‌ನಲ್ಲಿ ಪ್ರವೇಶಾತಿ ಅರ್ಜಿ ತುಂಬಿದ ನಂತರ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂ. ಸಂ: 9741990284, 9916894579, 9902958732ನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯದ ಪ್ರಾದೇಶಿಕ ನಿರ್ದೇಶಕಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಕ್ಕಳಲ್ಲಿನ ಮೊಬೈಲ್ ಸನ್ನಿ ಸಮಾಜದಲ್ಲಿ ತಲೆ ತಗ್ಗಿಸುವಂತೆ ಮಾಡುತ್ತಿದೆ

ಎಡಿಜಿಪಿ ಕೆ.ವಿ.ಶರತಚಂದ್ರ ವಿಷಾಧ

ಕಿಕ್ಕೇರಿ, ಅ.7–ಭವಿಷ್ಯದ ಮಕ್ಕಳಿಗೆ ಮೊಬೈಲ್ ಸನ್ನಿಯಾಗಿ ಸಮಾಜದಲ್ಲಿ ತಲೆ ತಗ್ಗಿಸುವಂತೆ ಮಾಡುವ ಆಘಾತಕರ ಸಂಗತಿ ಹೆಚ್ಚುತ್ತಿವೆ ಅಪರ ಪೊಲೀಸ್ ಮಹಾನಿರ್ದೇಶಕ (ಎಡಿಜಿಪಿ) ಕೆ.ವಿ.ಶರತಚಂದ್ರ ವಿಷಾಧಿಸಿದರು.

ಪಟ್ಟಣದಲ್ಲಿ ಭಾನುವಾರ ನಡೆದ ಖಾಸಗಿ ಕಾರ್ಯಕ್ರಮದಲ್ಲಿ ಮಾತನಾಡುತ್ತ ಮಕ್ಕಳಲ್ಲಿ ಸಂಸ್ಕಾರ ಬಲುಮುಖ್ಯವಾಗಿದೆ. ಇಂದಿನ ಮಕ್ಕಳಿಗೆ ಮಕ್ಕಳಿಗೆ ಮೊಬೈಲ್ ಸರ್ವಸ್ವವಾಗಿದೆ. ಮೊಬೈಲ್‌ನಲ್ಲಿಯೇ ಕ್ರಿಕೆಟ್, ಕಬಡ್ಡಿಯಂತಹ ಕ್ರೀಡೆ ಆಡಿದರೆ ಮಾನಸಿಕ, ದೈಹಿಕ ಆರೋಗ್ಯ ಎಲ್ಲಿ ಸಿಗಲಿದೆ ಎಂದರು.

ಮಕ್ಕಳಲ್ಲಿ ಮಾನಸಿಕ ಖಿನ್ನತೆ, ಎಳೆಯರಲ್ಲಿಯೇ ದೈಹಿಕ, ಮಾನಸಿಕ ಅನಾರೋಗ್ಯ ಕಾಡುವಂತಾಗಿದೆ. ಪೋಷಕರು ಎಚ್ಚೆತ್ತುಕೊಳ್ಳಬೇಕಿದೆ. ಖುಷಿಗಾಗಿ ಆರಂಭವಾಗುವ ಮೊಬೈಲ್ ಬಳಕೆ ಚಾಟಿಂಗ್, ವ್ಯಾಟ್ಸಪ್, ಸಾಮಾಜಿಕ ಜಾಲತಾಣ ವೀಕ್ಷಣೆಯಿಂದ ಯುವಕರು, ವಿದ್ಯಾರ್ಥಿಗಳು ದಾರಿ


ಖಾಸಗಿ ಕಾರ್ಯಕ್ರಮದಲ್ಲಿ ಅಪರ ಪೊಲೀಸ್ ಮಹಾನಿರ್ದೇಶಕ(ಎಡಿಜಿಪಿ) ಕೆ.ವಿ.ಶರತಚಂದ್ರ

ತಪ್ಪುತ್ತಿರುವ ಪ್ರಕರಣ ಹೆಚ್ಚುತ್ತಿದೆ. ಪೋಷಕರ ಬಾಂಧವ್ಯ ಕುಸಿಯು ತ್ತಿವೆ. ಕೌಟುಂಬಿಕ ಪ್ರೀತಿ ವಾತಾವರಣ, ಉತ್ತಮ ಪುಸ್ತಕ ಓದುವಿಕೆಗೆ ತಿಳಿ ಹೇಳುವ ಕೆಲಸ ಮಾಡಿ ಎಂದು ತಿಳಿ ಹೇಳಿದರು.

ಕಿಕ್ಕೇರಿಯವರಾದ ಬೆಂಗಳೂರಿನ ಜಯ ದೇವ ಆಸ್ಪತ್ರೆಯ ಹೃದಯತಜ್ಞ ಡಾ.ಕೆ.ಎಚ್.ಶ್ರೀನಿವಾಸಶೆಟ್ಟಿ ಮಾತನಾಡಿ, ಜೀವನಶೈಲಿ, ಆಹಾರ ಪದ್ಧತಿಯಿಂದ ಯುವಕರಲ್ಲಿಯೇ ಹೃದ್ರೋಗ ಸಮಸ್ಯೆ ಕಾಡುತ್ತಿದೆ. ಗ್ರಾಮೀಣ ಪ್ರದೇಶದಲ್ಲಿನ ಅಂದಿನ ದೈನಂದಿನ ಚಟುವಟಿಕೆ ದೇಹಕ್ಕೆ ಕಸರತ್ತು ನೀಡುತ್ತಿತ್ತು. ಯಂತ್ರೀಕೃತ ಬದುಕು ಶಾರೀರಿಕ ವ್ಯಾಯಾಮಕ್ಕೆ ವಿರಾಮ ನೀಡಿ ಬಾರದ ರೋಗ ಬರುವಂತಾಗಿದೆ. ಉತ್ತಮ ಜೀವನಶೈಲಿ ಅಳವಡಿಸಿಕೊಳ್ಳಿ, ಚಿಂತೆ ಬಿಡಿ. ಋತುವಿಗೆ ತಕ್ಕ ಆಹಾರ ಹಿತಮಿತವಾದ್ದಲ್ಲಿ ಹೃದ್ರೋಗದಂತಹ ಹಲವು ರೋಗ ನಿಯಂತ್ರಿಸಬಹುದು ಎಂದು ಸಲಹೆ ನೀಡಿದರು.

ಬೆಂಗಳೂರಿನ ರಾಜ್ಯ ಗುಪ್ತವಾರ್ತೆ ಸಹಾಯಕ ನಿರ್ದೇಶಕ ಬಿ.ಬಿ. ಲಕ್ಷ್ಮೇಗೌಡ, ಕೆಪಿಸಿಸಿ ಸದಸ್ಯ ಸುರೇಶ್, ಬಿಜೆಪಿ ಮುಖಂಡ ಕೆ.ವಿ.ಮೋಹನ್, ಕೆ.ವಿ.ಅರುಣಕುಮಾರ್, ನಿವೃತ್ತ ಪ್ರಾಂಶುಪಾಲ ಚಂದ್ರಮೋಹನ್ ಇದ್ದರು.

ಮೂರನೇ ಪುಟದಿಂದ

ಸಂಪುಟದಲ್ಲಿ ಚರ್ಚೆ

ನಂತರ ಎಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಕಾಂತರಾಜು ಅಮು ವರದಿಯನ್ನು ಸಲ್ಲಿಸಲು ಸಿದ್ಧತೆ ನಡೆಸಿದ್ದರು. ಆದರೆ ಎಚ್.ಡಿ. ಕುಮಾರಸ್ವಾಮಿ ವರದಿ ಸ್ವೀಕರಿಸಲು ಒಪ್ಪಿರಲಿಲ್ಲ. ನಂತರ ಬಿಜೆಪಿ ಸರ್ಕಾರ ಬಂದರೂ, ವರದಿಯನ್ನು ಸ್ವೀಕರಿಸಲಿಲ್ಲ ಎಂದರು. ಕಾಂತರಾಜು ಅವರ ಅಧ್ಯಕ್ಷಾವಧಿ ಪೂರ್ಣಗೊಂಡ ನಂತರ ಜಯಪ್ರಕಾಶ್ ಹೆಗ್ಗಡೆಯವರು ಆಯೋಗದ ಅಧ್ಯಕ್ಷರಾದರು. ಅವರು ಕೋರಿದಂತೆ ವರದಿ ಸಲ್ಲಿಕೆಗೆ ಮೂರು ತಿಂಗಳ ಅವಕಾಶ ಕೊಡಲಾಗಿತ್ತು. ನಂತರ ಆ ವರದಿಯನ್ನು ಸ್ವೀಕರಿಸಲಾಗಿದೆ. ಸ್ವೀಕರಿಸಿದ ವರದಿಯನ್ನು ಜಾರಿಗೊಳಿಸಲು ಎಲ್ಲರಿಂದಲೂ ಒತ್ತಾಯ ಬಂದಿದೆ. ಈ ಹಿನ್ನಲೆಯಲ್ಲಿ ಇಂದು ಹಿಂದುಳಿದ ವರ್ಗಗಳ ಶಾಸಕರು ಸಭೆ ನಡೆಸಿ ವರದಿಯನ್ನು ಜಾರಿಗೊಳಿಸುವಂತೆ ಮನವಿ ಸಲ್ಲಿಸಿದ್ದಾರೆ.

ಇತ್ತೀಚೆಗಷ್ಟೇ ಮೈಸೂರಿನ ಒಂದು ಕಾರ್ಯಕ್ರಮದಲ್ಲಿ ಸಾಮಾಜಿಕ ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯನ್ನು ಸ್ವೀಕರಿಸಲಾಗಿದ್ದು, ಈ ವರದಿಯ ಬಗ್ಗೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿದ ನಂತರ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದೆ. ಅ. 18 ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ವರದಿಯನ್ನು ಬಹುತೇಕ ಮಂಡಿಸುವ ಸಾಧ್ಯತೆಯಿದೆ. ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿದ ನಂತರ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದಿದ್ದಾರೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಂದಿನ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ ಅವರು ಕಳೆದ ಫೆ. 29ರಂದು ಸಿಎಂ ಸಿದ್ದರಾಮಯ್ಯ ಅವರಿಗೆ ವರದಿ ಸಲ್ಲಿಸಿದ್ದರು.

ಸಮಾಜದ ಕೆಲವು ವರ್ಗಗಳು ಮತ್ತು ಆಡಳಿತಾರೂಢ ಕಾಂಗ್ರೆಸ್‌ನ ಆಕ್ಷೇಪಗಳ ನಡುವೆ ವರದಿಯನ್ನು ಸಲ್ಲಿಸಲಾಗಿತ್ತು. ಆದರೆ ರಾಜ್ಯದ ಎರಡು ಪ್ರಬಲ ಸಮುದಾಯಗಳಾದ ಒಕ್ಕಲಿಗರು ಮತ್ತು ಲಿಂಗಾಯತರು ಈ ಸಮೀಕ್ಷೆಯನ್ನು "ಅವೈಜ್ಞಾನಿಕ' ಎಂದು ಕರೆದಿದ್ದು, ಇದನ್ನು ತಿರಸ್ಕರಿಸಬೇಕು ಮತ್ತು ಹೊಸದಾಗಿ ಸಮೀಕ್ಷೆ ನಡೆಸಬೇಕು ಎಂದು ಒತ್ತಾಯಿಸಿದ್ದರು.

ತಪ್ಪುಗಳ ಮುಚ್ಚಿಕೊಳ್ಳಲು ಜಾತಿ ಗಣತಿ ಮುನ್ನೆಲೆಗೆ

ದೆಹಲಿಗೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರದ ವಿರುದ್ಧ ಗುರುತರ ಆರೋಪಗಳು ಕೇಳಿ ಬಂದಾಗಲೆಲ್ಲ ಜನರ ಗಮನ ಬೇರೆಡೆ ಹೊರಳಿಸಲು ತಂತ್ರಗಾರಿಕೆ ಮಾಡುತ್ತಿದ್ದಾರೆ, ಈಗ ಮುಡಾ ಹಗರಣದ ಮೂಲಕ ಜನರ ದಿಕ್ಕು ತಪ್ಪಿಸಲು ಈ ವಿಚಾರವನ್ನು ಮುಂದಕ್ಕೆ ತರಲಾಗಿದೆ ಎಂದು ಆರೋಪಿಸಿದರು.

ಕಾಂತರಾಜು ಆಯೋಗ ರಚನೆ ಮಾಡಿದ್ದು 10 ವರ್ಷಗಳ ಹಿಂದೆ, ಈಗ ಆ ವರದಿಗೆ 10 ವರ್ಷ ಆಗಿ ಹೋಗಿದೆ, 10 ವರ್ಷಗಳಲ್ಲಿ ಅನೇಕ ಬೆಳವಣಿಗೆಗಳು ಆಗಿವೆ, ಹಳೆಯ ಜಾತಿಗಣತಿ ವರದಿ ಇಷ್ಟು ದಿನ ಏಕೆ ಬಿಡುಗಡೆ ಮಾಡಿರಲಿಲ್ಲ ಎಂದು ಪ್ರಶ್ನಿಸಿದರು. ಕುಮಾರಸ್ವಾಮಿ ಜಾತಿಗಣತಿ ವರದಿಯನ್ನು ಬಿಡುಗಡೆ ಮಾಡಲು ಬಿಡಲಿಲ್ಲ ಎಂದು ನನ್ನ ಮೇಲೆ ಆರೋಪ ಮಾಡುತ್ತಲೇ ಇದ್ದಾರೆ. ಲೋಕಸಭೆ ಚುನಾವಣೆಗೆ ಮೊದಲೇ ಸಿದ್ದರಾಮಯ್ಯ ಅವರ ಕೈಗೆ ಜಾತಿಗಣತಿ ವರದಿ ಕೊಡಲಾಗಿದೆ, ಮೊದಲೇ ವರದಿ ಪಡೆದರೂ ಇಷ್ಟು ದಿನಗಳವರೆಗೂ ಅದರ ಬಗ್ಗೆ ಸದ್ದೇ ಇರಲಿಲ್ಲ ಏಕೆ ಎಂದು ತೀಕ್ಷ್ಣವಾಗಿ ಕೇಳಿದರು. ಈಗ ಮುಡಾ ಹಗರಣದ ಹಿನ್ನೆಲೆಯಲ್ಲಿ ಜನರ ದಾರಿ ತಪ್ಪಿಸಲು ಮತ್ತು ಜಾತಿಗಣತಿ ವರದಿ ಇಟ್ಟುಕೊಂಡು ಮುಡಾ ಅಕ್ರಮದಿಂದ ರಕ್ಷಣೆ ಪಡೆಯುವ ಕೆಲಸಕ್ಕೆ ಹೊರಟಿದ್ದಾರೆ. 10 ವರ್ಷಗಳ ಹಿಂದೆ ಮಾಡಿರುವ ಈ ಜಾತಿಗಣತಿ ವರದಿಯಿಂದ ಯಾವುದೇ ಸಮುದಾಯಕ್ಕೆ ಅನುಕೂಲ ಆಗುವುದಿಲ್ಲ. ಮುಡಾ ಹಗರಣ ಮರೆಮಾಚಲು ಜಾತಿಗಣತಿ ವಿಷಯ ಮುನ್ನೆಲೆಗೆ ತಂದಿದ್ದಾರೆ, ಇಷ್ಟು ದಿನ ಇಲ್ಲದೇ ಇರೋದು ಈಗ ಏಕೆ ಮುನ್ನಲೆಗೆ ತರಲು ಹೊರಟಿದ್ದಾರೆ. ಜಾತಿಗಣತಿ ವರದಿ ಜಾರಿ ಮಾಡದಂತೆ ಸಿದ್ದರಾಮಯ್ಯ ಅವರನ್ನು ಹಿಡಿದುಕೊಂಡವರು ಯಾರು. ಅವರು ವರದಿ ಸ್ವೀಕಾರ ಮಾಡಿ ಎಷ್ಟು ದಿನವಾಯಿತು, ಇನ್ನೂ ಏಕೆ ಇಟ್ಟುಕೊಂಡು ಕೂತಿದ್ದಾರೆ. ಇಷ್ಟು ದಿನ ಸದ್ದುಗದ್ದಲ ಇರಲಿಲ್ಲ, ಈಗ ಈ ವಿಷಯ ಇಟ್ಟುಕೊಂಡು ರಾಜಕೀಯ ಮಾಡುತ್ತಿದ್ದಾರೆ. ಇವರು ಮಾಡಿರುವ ತಪ್ಪುಗಳನ್ನು ಮುಚ್ಚಿಕೊಳ್ಳೋಕೆ ಜಾತಿ ವಿಷಯಗಳನ್ನು ಮುಂದೆ ಬಿಟ್ಟುಕೊಂಡು ಹೊರಟಿದ್ದಾರೆ ಎಂದು ಸರ್ಕಾರದ ವಿರುದ್ಧ ಕುಮಾರಸ್ವಾಮಿ ಕಿಡಿಕಾರಿದರು.

ಈಗ ಜಾತಿಗಣತಿ ವರದಿ ಇಟ್ಟುಕೊಂಡು ರಾಜಕೀಯ ಮಾಡುತ್ತೀರಿ. ಇದೇ ವಿಷಯ ಇಟ್ಟುಕೊಂಡು ಚುನಾವಣೆಗೆ ಹೋಗಿ ನೋಡೋಣ ಎಂದು ಕಾಂಗ್ರೆಸ್ ನಾಯಕರಿಗೆ ಸವಾಲು ಹಾಕಿದ ಕುಮಾರಸ್ವಾಮಿ ಅವರು, ಸರ್ಕಾರ ಹೋದರೆ ಹೋಗಲಿ ಎನ್ನುವ ಬದಲಿಗೆ ಮುಕ್ತವಾಗಿ ಘೋಷಣೆ ಮಾಡಿ ಚುನಾವಣೆಗೆ ಹೋಗಲಿ ಎಂದರು. ಸರ್ಕಾರ ಹೋದರೆ ಹೋಗಲಿ, ಜಾತಿಗಣತಿ ಜಾರಿ ಮಾಡಿ ಎಂಬ ಬಿ.ಕೆ.ಹರಿಪ್ರಸಾದ್ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಜಾತಿಗಣತಿ ವಿಷಯ ಇಟ್ಟುಕೊಂಡು ಸರ್ಕಾರ ವಿಸರ್ಜನೆ ಮಾಡಿ ಚುನಾವಣೆಗೆ ಹೋಗಿ ನೋಡೋಣ. ಹರಿಪ್ರಸಾದ್ ಅವರು ಈ ರೀತಿ ಹೇಳುವುದರಲ್ಲಿ ಏನಿದೆ, ವಿಧಾನಸಭೆ ವಿಸರ್ಜಿಸಿ ಚುನಾವಣೆಗೆ ಹೋಗಬಹುದಲ್ಲವೆ ಎಂದು ಸವಾಲು ಹಾಕಿದರು.

ಗುಜರಿಗೆ ಹಾಕಲು ಸರ್ಕಾರದ ಸೂಚನೆ

ವಿನ್ಯಾಸವುಳ್ಳ ಪಾರಂಪರಿಕ ಕ್ರೆಸ್ಟ್‌ಗೇಟ್‌ಗಳನ್ನು ಮಾರಾಟ ಮಾಡಬಾರದು, ಅವುಗಳನ್ನು ಮ್ಯೂಸಿಯಂನಲ್ಲಿ ಸಂರಕ್ಷಿಸಿಡಬೇಕು ಎಂದು ಒತ್ತಾಯಿಸಿದ್ದಾರೆ.

ಅಣೆಕಟ್ಟೆ ನಿರ್ಮಾಣದ ವೇಳೆ ಅಳವಡಿಸಿದ ಈ ಗೇಟ್‌ಗಳ ಬಗ್ಗೆ ಪ್ರವಾಸಿಗರು ಹಾಗೂ ಕೆಆರ್‌ಎಸ್‌ಗೆ ಭೇಟಿ ನೀಡುವ ಮುಂದಿನ ಪೀಳಿಗೆಗೆ ಮನವರಿಕೆ ಮಾಡಿಕೊಡುವ ಸಲುವಾಗಿ ಕ್ರೆಸ್ಟ್‌ಗೇಟ್‌ಗಳನ್ನು ಸಂರಕ್ಷಿಸಿ ಎಂದು ರೈತರು ಸಲಹೆ ನೀಡಿದ್ದಾರೆ. ಈ ಕುರಿತು 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಕಾವೇರಿ ನೀರಾವರಿ ನಿಗಮ ನಿಯಮಿತದ ಅಧಿಕಾರಿಗಳು, ಕೆಆರ್‌ಎಸ್ ಅಣೆಕಟ್ಟೆಯ ಹಳೇ ಕ್ರೆಸ್ಟ್‌ಗೇಟ್‌ಗಳ ಅತ್ಯಂತ ಕಡಿಮೆ ಬೆಲೆಗೆ ಮಾರಾಟ ಮಾಡಲಾಗುತ್ತಿದೆ ಎಂಬ ಆರೋಪವನ್ನು ಅಲ್ಲಗಳೆದಿದ್ದಾರೆ.

ಅಣೆಕಟ್ಟೆಯಿಂದ ತೆಗೆದ ಹಳೇ ಗೇಟ್‌ಗಳನ್ನು ಸ್ಕ್ರ್ಯಾಪ್‌ಯಾರ್ಡ್‌ನಲ್ಲಿ ಇರಿಸಿದ್ದೇವೆ. ಸರ್ಕಾರ ಕಬ್ಬಿಣದ ನಿರುಪಯುಕ್ತ ವಸ್ತುಗಳನ್ನು ಗುಜರಿಗೆ ಮಾರಾಟ ಮಾಡಿ ಎಂದು ಸೂಚಿಸಿದ್ದು, ಅದರಲ್ಲಿ ಕ್ರೆಸ್ಟ್‌ಗೇಟ್ ಸೇರಿವೆಯೇ, ಅವುಗಳ ಮಾರಾಟ ಮಾಡಬೇಕೆ ಇಲ್ಲ ಸಂರಕ್ಷಿಸಬೇಕೆ, ಕೆಲವನ್ನು ಇರಿಸಿಕೊಂಡು ಉಳಿದವನ್ನು ವಿಲೇವಾರಿ ಮಾಡಬೇಕೇ ಎಂಬುದನ್ನು ಸ್ಪಷ್ಟವಾಗಿ ತಿಳಿಸಿಲ್ಲವಾದ್ದರಿಂದ ನಾವು ಸರ್ಕಾರಕ್ಕೆ ಪುನಃ ಪತ್ರ ಬರೆದು, ಅದರ ಸಲಹೆ–ಸೂಚನೆಯಂತೆ ಕ್ರಮ ವಹಿಸುತ್ತೇವೆ ಎಂದು ತಿಳಿಸಿದ್ದಾರೆ.

ಪ್ರತೀ ಕ್ರೆಸ್ಟ್‌ಗೇಟ್ ಸರಾಸರಿ 4 ಟನ್ ತೂಗಲಿದ್ದು, ಕೆಜಿಗೆ 8.50 ರೂ.ನಂತೆ ಎಲ್ಲಾ 160 ಗೇಟ್‌ಗಳನ್ನು ಮಾರಾಟ ಮಾಡಿದಲ್ಲಿ 5.44 ಕೋಟಿ ರೂ. ಆದಾಯ ಬರುತ್ತದೆ. ಜಲಾಶಯದ 106 ಅಡಿ ಮಟ್ಟದ 48, 103 ಅಡಿಯ 48, 114 ಅಡಿಯ 48, 80 ಅಡಿಯ 16, 60 ಅಡಿ ಮಟ್ಟದ 8 ಗೇಟ್‌ಗಳನ್ನು ಡ್ಯಾಂನಿಂದ ತೆರವುಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಬ್ಬಿಣದ ಎಲ್ಲಾ ಗೇಟ್‌ಗಳನ್ನು ಸಂರಕ್ಷಿಸಬೇಕೆಂದರೆ, ವಿಶಾಲವಾದ ಜಾಗಬೇಕು. ಜೊತೆಗೆ ಕಟ್ಟಡವೂ ಬೇಕಾಗುತ್ತದೆ. ಗೇಟ್‌ಗಳಿಗೆ ತುಕ್ಕು ಹಿಡಿಯದಂತೆ ಅವುಗಳಿಗೆ ಬಣ್ಣ ಬಳಿದು ನಿರ್ವಹಣೆ ಮಾಡಬೇಕು. ಮ್ಯೂಸಿಯಂ ನಿರ್ವಹಣೆಗೆ ಸಾಕಷ್ಟು ಹಣದ ಅಗತ್ಯವಿದೆ ಎಂಬುದನ್ನು ಸರ್ಕಾರಕ್ಕೆ ತಿಳಿಸುತ್ತೇವೆ ಎಂದು ಅವರು ತಿಳಿಸಿದ್ದಾರೆ.

ಯುವ ಸಮೂಹ ಫಿದಾ!

ಜಾನಪದ ನೃತ್ಯ ಕಲಾಪ್ರಕಾರಗಳ ಪ್ರದರ್ಶನ ಯುವ ದಸರಾ ವೇದಿಕೆಗೆ ಸಾಂಸ್ಕೃತಿಕ ಮೆರಗು ನೀಡಿದರೆ, ಮೈಸೂರು ಜಿಲ್ಲೆಯ ನೃತ್ಯ ಸಂಯೋಜಕರ ನೃತ್ಯದ ಝಲಕ್ ವರ್ಣರಂಜಿತ ಬೆಳಕಿನ ಭವ್ಯ ವೇದಿಕೆಯ ವೈಭವ ಹೆಚ್ಚಿಸಿತು.

ಧ್ವನಿ ಭಾನುಶಾಲಿ ಗಾನ ಮಾಧುರ್ಯ: ನಂತರ ವೇದಿಕೆಗೆ ಆಗಮಿಸಿದ ಖ್ಯಾತ ಬಾಲಿವುಡ್ ಗಾಯಕಿ ಧ್ವನಿ ಭಾನುಶಾಲಿ, ಸರಣಿ ಹಿಂದಿ ಹಾಡುಗಳನ್ನು ಹಾಡಿ, ಕುಣಿದು ಯುವ ಮನಸುಗಳ ಹೃನ್ಮನ ಗೆದ್ದರು. 'ಮೇರಾ ದಿಲ್', 'ದಮ್ ಮಾರೋ ದಮ್', 'ರುಕ್ಕು ರುಕ್ಕಮ್ಮ' 'ಊ ಅಂತಾವಾ ಮಾವ.. ಊ ಊ ಅಂತಾವ' ಸೇರಿದಂತೆ ಹತ್ತಾರು ರೊಮ್ಯಾಂಟಿಕ್ ಹಿಂದಿ ಹಾಡುಗಳನ್ನು ಹಾಡಿ ನೆರೆದಿದ್ದವರಿಗೆ ಹಿಂದಿ ಸಂಗೀತದ ರಸದೌತಣ ನೀಡಿದರು.

ರವಿ ಬಸ್ರೂರು ತೂಫಾನ್: ಎರಡನೇ ದಿನ ಬಹು ನಿರೀಕ್ಷಿತ ಎನ್ನಲಾದ ಸ್ಯಾಂಡಲ್‌ವುಡ್‌ನ ಖ್ಯಾತ ಸಂಗೀತ ಸಂಯೋಜಕ ರವಿ ಬಸ್ರೂರ್ ಸಂಗೀತ ಸಂಯೋಜನೆಯಲ್ಲಿ ಮಾರ್ಧನಿಸಿದ ಸಿಡಿಲಬ್ಬರ ಸಂಗೀತದ ತರಂಗಗಳು ಯುವ ಸಮೂಹವನ್ನು ತೇಲಿಸಿದವು. ರವಿ ಬಸ್ರೂರ್ ಮ್ಯೂಸಿಕಲ್ ತಂಡದ ಗಾಯಕಿ ವಿಜಯಲಕ್ಷ್ಮಿ, 'ನಮಾಮಿ ನಮಾಮಿ ಈಶ್ವರ ಪಾದ ಪೂಜಿತಂ' ಹಾಡಿನ ಮೂಲಕ ಅಬ್ಬರದ ಸಂಗೀತಕ್ಕೆ ಪೀಠಿಕೆ ಇಟ್ಟರೆ, ಗಾಯಕ ಸಂತೋಷ್ ವೆಂಕಿಯ 'ದ್ವಾಪರದಲ್ಲಿ ಶ್ರೀ ಕೃಷ್ಣೆ' ಹಾಡು ಯುವ ಮನಸನ್ನು ಮುಟ್ಟಿತು.

ಖ್ಯಾತ ಗಾಯಕಿ ದಿವ್ಯ ರಾಮಚಂದ್ರ, 'ನಾನು ಕೋಕೊ ಕೋಳಿಕೆ ರಂಗ್' ಹಾಡು ಹಾಗೂ ರೋಜ್ ಚಿತ್ರದ ನಾಯಕಿ ಸಾಧ್ವೀಕ, 'ಶೇಕ್ ಹಿಟ್ ಪುಷ್ಪವತಿ' ಸೇರಿದಂತೆ ಹಲವು ಹಾಡುಗಳಿಗೆ ಹೆಜ್ಜೆ ಹಾಕುವ ಮೂಲಕ ಯುವ ಸಮೂಹ ಕುಣಿದು ಕುಪ್ಪಳಿಸುವಂತೆ ಮಾಡಿದರು.

ಮೈಸೂರು ಜನತೆ ದಸರಾ ಶುಭಾಶಯ ಹೇಳುತ್ತಲೇ ವೇದಿಕೆಗೆ ಆಗಮಿಸಿದ ಸ್ಯಾಂಡಲ್‌ವುಡ್‌ನ ಖ್ಯಾತ ಸಂಗೀತ ಸಂಯೋಜಕ ರವಿ ಬಸ್ರೂರ್, 'ಜಿದ್ದಿ ಜಿದ್ದಿ ಹೆ ತೂಫಾನ್' ಸಿಡಿಲಬ್ಬರದ ಸಂಗೀತ ಸಂಯೋಜನೆ ಮೂಲಕ ಅಬ್ಬರಿಸಿದರು.

ಉತ್ಸಾಹಕ್ಕೆ ತಣ್ಣೀರು?

ಯುವ ದಸರಾ ಕೇಂದ್ರ ಬಿಂದುವಾದ ಯುವ ಸಮೂಹವನ್ನು ವೇದಿಕೆಯಿಂದ ಬಹುದೂರ ನೂಕಿದಂತಿದೆ. ಆದರೂ ಯುವ ಸಮೂಹ ಕಿಕ್ಕಿರಿದು ಸೇರುತ್ತಿದೆ. ಆದರೆ ವೇದಿಕೆ ಮುಂಭಾಗ ಸದ್ದು–ಗದ್ದಲವಿಲ್ಲದ ಮೌನ ಆವರಿಸಿದೆ. ಮೊದಲ ಬಾರಿಗೆ ಟಿಕೆಟ್ ವ್ಯವಸ್ಥೆ ಮಾಡಿ, ಹಣದ ಹಿಂದೆ ಬಿದ್ದಿರುವ ಜಿಲ್ಲಾಡಳಿತ ಯುವ ದಸರಾ ವೇದಿಕೆಯಿಂದ ಯುವ ಸಮೂಹವನ್ನು ದೂರವಿರಿಸುವ ಮೂಲಕ ಅವರ ಉತ್ಸಾಹಕ್ಕೆ ತಣ್ಣೀರೆರಚಲಾಗಿದೆ ಎಂಬ ಬೇಸರ ಕಂಡು ಬರುತ್ತಿದೆ. ಮುಂದೆ ಖಾಲಿ, ಹಿಂದೆ ಭರ್ತಿ ಎಂಬಂತೆ ಟಿಕೆಟ್ ಖರೀದಿಸಿದವರಿಗೆ ಮೀಸಲಿರುವ ಖುರ್ಚಿಗಳು ಖಾಲಿ ಬಿದ್ದಿದ್ದರೆ, ಯುವ ದಸರಾ ವೇದಿಕೆಯ ಬಹುಭಾಗವೇ ಆದ ಯುವ ಸಮೂಹ ನಿಲ್ಲಲು ಜಾಗವಿಲ್ಲದೆ ಪರಿತಪಿಸುವಂತಾಗಿದೆ.

ದಸರಾ ಕುಸ್ತಿ ಪಂದ್ಯಾವಳಿ

ಪೈಲ್ವಾನರ ರಣರೋಚಕ ಸೆಣಸಾಟ

ಮೈಸೂರು, ಅ.7(ಎಸ್‌ಬಿಡಿ)– ದಸರಾ ನಾಡ ಕುಸ್ತಿ ಪಂದ್ಯಾವಳಿಯ ಐದನೇ ದಿನವಾದ ಸೋಮವಾರ ಪೈಲ್ವಾನರ ರೋಚಕ ಸೆಣಸಾಟ, ನೆರೆದಿದ್ದವರ ಮೈನವಿರೇಳಿಸಿತು.

ನಗರದ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಆಯೋಜಿಸಿರುವ ಪಂದ್ಯಾವಳಿಯಲ್ಲಿ ಇಂದು ದೊಡ್ಡ ಕುಸ್ತಿ ಸೇರಿದಂತೆ ಸುಮಾರು 36 ಕುಸ್ತಿಗಳು ನಡೆದವು. ಬೆಳಗಾವಿ, ದಾವಣಗೆರೆ, ಕನಕಪುರ, ಬೆಂಗಳೂರು ಸೇರಿದಂತೆ ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಪೈಲ್ವಾನರು ಮಟ್ಟಿಗಿಳಿದು ವಿಭಿನ್ನ ಪಟ್ಟು ಪ್ರದರ್ಶಿಸಿದರು. ಅಖಾಡದ ಸುತ್ತ ನೆರೆದಿದ್ದ ಕುಸ್ತಿ ಪ್ರೇಮಿಗಳು ಶಿಳ್ಳೆ–ಕೇಕೆ, ಚಪ್ಪಾಳೆಯೊಂದಿಗೆ ಹುರಿಯಾಳುಗಳ ಹುರಿದುಂಬಿಸಿದರು.

ದೊಡ್ಡ ಕುಸ್ತಿ ಸಮಬಲ: ದಾವಣಗೆರೆ ಕ್ರೀಡಾ ನಿಲಯದ ಡಾ.ವಿನೋದ್ ಕುಮಾರ್ ಶಿಷ್ಯ ಪೈ.ರಾಘವೇಂದ್ರ ಮತ್ತು ಬೆಳಗಾವಿಯ ಪೈ.ಮುಬಾರಕ್ ಅಲಿ ಸೆಣಸಾಟ ರಣ–ರೋಚಕವಾಗಿತ್ತು. ಒಮ್ಮೆ ಮುಬಾರಕ್, ಮತ್ತೊಮ್ಮೆ ರಾಘವೇಂದ್ರ ಮೇಲುಗೈ ಸಾಧಿಸಿದರು. ಪೈಲ್ವಾನರ ಪಟ್ಟು–ಪ್ರತಿಪಟ್ಟು ನೆರೆದಿದ್ದವರ ಎದೆಬಡಿತ ಹೆಚ್ಚಿಸಿದವು. ಮಟ್ಟಿಯಲ್ಲಿ ಮದಗಜಗಳಂತೆ ಕಾದಾಡಿದ ಪೈಲ್ವಾನರು ಒಂದು ಗಂಟೆಯ ಕುಸ್ತಿಯಲ್ಲಿ ಸಮಬಲ ಸಾಧಿಸಿದ್ದರಿಂದ ಪಂದ್ಯ ಡ್ರಾ ಆಯಿತು. ಪಾಲಹಳ್ಳಿ ಪೈ.ರವಿಕುಮಾರ್ ಮತ್ತು ಕ್ಯಾತನಹಳ್ಳಿ ಪೈ.ಬಸವರಾಜು ನಡುವಿನ ಮತ್ತೊಂದು ದೊಡ್ಡ ಕುಸ್ತಿಯೂ ಸಮಬಲದೊಂದಿಗೆ


ಮಟ್ಟಿಯಲ್ಲಿ ಜಗಮಲ್ಲರಂತೆ ಸೆಣಸಾಡಿದ ಪೈ.ರಾಘವೇಂದ್ರ ಮತ್ತು ಪೈ.ಮುಬಾರಕ್ ಅಲಿ.

ಮುಕ್ತಾಯವಾಯಿತು. ಕನಕಪುರದ ಪೈ.ದರ್ಶನ್ ಮತ್ತು ಹೊಸಳ್ಳಿ ಪೈ. ಮನೋಜ್ ಸೆಣಸಾಟವೂ ಡ್ರಾ ಆಯಿತು.

ನಿಮಿಷಾರ್ಧದಲ್ಲೇ ಚಿತ್: ಕುಂಬಾರ ಕೊಪ್ಪಲು ಪೈ.ಸಾಗರ್ ಎದುರಾಳಿ ಕನಕಪುರ ಪೈ.ಕಿರಣ್‌ಗೌಡ ಅವರನ್ನು ಕೇವಲ 40 ಸೆಕೆಂಡ್‌ನಲ್ಲಿ ಚಿತ್ ಮಾಡಿದರೆ, ಪೈ.ಪ್ರಜ್ವಲ್ ಎದುರಾಳಿ ಪೈ.ಅಬ್ದುಲ್ ರೆಹಮಾನ್ ಅವರನ್ನು 50 ಸೆಕೆಂಡ್‌ಗಳಲ್ಲಿ ಮಣಿಸಿ, ಗಮನ ಸೆಳೆದರು. ಪೈ.ಅಬೂಬಕರ್ 1 ನಿಮಿಷದಲ್ಲಿ ಪೈ.ಮೊಹಮ್ಮದ್ ಹುಸೇನ್ ವಿರುದ್ಧ ಗೆದ್ದು ಬೀಗಿದರು. ಪೈ.ಎಂ.ಎಂ.ವೆಂಕಟೇಶ್ ವಿರುದ್ಧ ಪೈ.ಸೈಯದ್ ಮೊಹಮ್ಮದ್ ಸಾಕೀಬ್ 2 ನಿಮಿಷಲ್ಲಿ, ಪೈ.ಮಮೋಹನ್ ಕುಮಾರ್ ವಿರುದ್ಧ ಪೈ.ದೀಪಕ್ ನಿಂಗಪ್ಪ 3 ನಿಮಿಷ, ಪೈ.ವಸಂತ್ ವಿರುದ್ಧ ಪೈ.ಪ್ರೀತಂ 3.50 ನಿಮಿಷದಲ್ಲಿ ಗೆಲುವು ಸಾಧಿಸಿದರು.

ಪೈ.ಪಿ.ರಾಘವ ವಿರುದ್ಧ ಪೈ.ಫಾಜಿಲ್ ಪಾಷ, ಪೈ.ಎಂ.ವಿನಯ್ ವಿರುದ್ಧ ಪೈ. ಯಶವಂತ್, ಪೈ.ಅಭಿ ವಿರುದ್ಧ ಪೈ.ಜಿ. ಭುವನ್, ಪೈ.ಬಿ.ಎಸ್.ಲಿಖಿತ ವಿರುದ್ಧ ಪೈ.ಸಂಜಯ್ ನಾಯಕ್, ಪೈ.ಚೇತನ್ ನಾಯಕ ವಿರುದ್ಧ ಪೈ.ಕೆ.ಭರತ್, ಪೈ.ಧನುಷ್ ವಿರುದ್ಧ ಪೈ.ಗಗನ್, ಪೈ.ಪಿ.ಋತಿಕ್ ವಿರುದ್ಧ ಪೈ.ಎಸ್.ಮೋಹನ್‌ಕುಮಾರ್ ವಿಜಯಿಯಾದರು. ಪೈ.ವಿಷ್ಣುಗೋಪಾಲ್ ಮತ್ತು ಪೈ.ತೇಜಸ್ ಗೌಡ, ಪೈ.ಶಿವರಾಜು ಮತ್ತು ಪೈ.ಮಧುಸೂದನ್, ಪೈ.ಪ್ರೀತಂ ಮತ್ತು ಪೈ.ಪವನ್, ಪೈ.ಪ್ರೀತಂ ಮತ್ತು ಪೈ.ಪಿ.ಶಶಾಂಕ್ ಸಮಬಲ ಸಾಧಿಸಿದರು.


ನಾರಿಯರ ಕುಸ್ತಿ: ಮಹಿಳಾ ಕುಸ್ತಿಯಲ್ಲಿ ಬೆಂಗಳೂರಿನ ಪೈ.ಸ್ಫೂರ್ತಿ ತನ್ನ ಎದುರಾಳಿ ಮಹಾಲಕ್ಷ್ಮೀ ಲೇಔಟ್‌ನ ಪೈ.ಶಾಂಭವಿ ಅವರನ್ನು 3 ನಿಮಿಷದಲ್ಲಿ ಮಣಿಸಿದರು. ಸ್ಫೂರ್ತಿ ಚಿತ್ ಮಾಡಿದ ಶೈಲಿ ರೋಚಕವಾಗಿತ್ತು. ಪೈ.ಐಶ್ವರ್ಯ ಮತ್ತು ಪೈ.ಚೈತನ್ಯ ನಡುವಿನ ಪಂದ್ಯವು ನಿಗದಿತ ಸಮಯಕ್ಕೆ ಕುಸ್ತಿಪಟುಗಳು ಅಖಾಡಕ್ಕೆ ಬಾರದ ಕಾರಣ ರದ್ದಾಯಿತು.

ತ್ರಿಮತಸ್ಥ ಬ್ರಾಹ್ಮಣರು ಸಂಘಟನಾತ್ಮಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷ ಅಶೋಕ ಹಾರ್ನಳ್ಳಿ ಕರೆ

ಮೈಸೂರು,ಅ.7(ಆರ್‌ಕೆ)–ತ್ರಿಮಸ್ಥ ಬ್ರಾಹ್ಮಣರು ಒಂದಾಗಿ ಸಂಘಟನಾತ್ಮಕ ಚಟುವಟಿಕೆಗಳಲ್ಲಿ ಸಕ್ರಿಯರಾಗುವಂತೆ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷ ಅಶೋಕ ಹಾರ್ನಳ್ಳಿ ಕರೆ ನೀಡಿದ್ದಾರೆ.

ಬೆಂಗಳೂರಲ್ಲಿ 2025ರ ಜನವರಿ 18, 19ರಂದು ನಡೆಸಲುದ್ದೇಶಿಸಿರುವ 11ನೇ ರಾಜ್ಯ ಮಟ್ಟದ ಬೃಹತ್ ಸಮಾವೇಶದ ಹಿನ್ನೆಲೆಯಲ್ಲಿ ಇಂದು ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ಆಯೋಜಿಸಿದ್ದ ಪೂರ್ವಭಾವಿ ಸಭೆ ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ಸಮಾಜದ ರಕ್ಷಣೆ ಮತ್ತು ಸಂಘಟನೆಗಾಗಿ ತ್ರಿಮತಸ್ಥ ವಿಪ್ರರು ಒಗ್ಗಟ್ಟು ಪ್ರದರ್ಶಿಸಬೇಕಿದೆ ಎಂದರು.


ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ಸೋಮವಾರ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯಾಧ್ಯಕ್ಷ ಅಶೋಕ ಹಾರ್ನಳ್ಳಿ ಮಾತನಾಡಿದರು.


ಬೆಂಗಳೂರಲ್ಲಿ ನಡೆಯಲಿರುವ ರಾಜ್ಯ ಮಟ್ಟದ ವಿಪ್ರ ಸಮಾವೇಶಕ್ಕೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಲಕ್ಷಾಂತರ ವಿಪ್ರರು ಸೇರಲಿದ್ದು, ವಿವಿಧ ಗೋಷ್ಠಿ, ಚರ್ಚೆಗಳನ್ನು ಆಯೋಜಿಸಲಾಗಿದೆ. ಕೈಗೊಂಡ ನಿರ್ಣಯಗಳು ಸರ್ಕಾರಕ್ಕೆ ತಲುಪುವಂತೆ ಮಾಡುವುದು ಸಮಾವೇಶದ ಉದ್ದೇಶ ವಾಗಿದೆ. ಮೈಸೂರು ಭಾಗದಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿಪ್ರರು ಆಗಮಿಸುವಂತೆಯೂ ತಿಳಿಸಿದರು. ಶಾಸಕ ಟಿ.ಎಸ್.ಶ್ರೀವತ್ಸ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಧಾರ್ಮಿಕ ಮುಖಂಡ ಭಾನುಪ್ರಕಾಶ ಶರ್ಮ, ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ.ಆರ್.ಸತ್ಯನಾರಾಯಣ, ಗ್ರಾಮಾಂತರ ಅಧ್ಯಕ್ಷ ಗೋಪಾಲರಾವ್, ಹೋಟೆಲ್ ಮಾಲೀಕರ ಸಂಘದ ರಾಜ್ಯ ಉಪಾಧ್ಯಕ್ಷ ರವಿಶಾಸ್ತ್ರಿ, ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಮುಖಂಡರಾದ ಮೈ.ವಿ.ರವಿಶಂಕರ್, ಪುಷ್ಪಾ ಅಯ್ಯಂಗಾರ್, ಎಂ.ಡಿ.ಪಾರ್ಥಸಾರಥಿ ಸೇರಿದಂತೆ ಹಲವರು ಸಭೆಯಲ್ಲಿ ಭಾಗವಹಿಸಿದ್ದರು.

ಮೈಸೂರು ಮಿತ್ರ

ಸೋಮವಾರವೂ ಬಾನಲ್ಲಿ ಅಪಾರ ಜನರ ಮೋಡಿ ಮಾಡಿದ ಡ್ರೋನ್ ಚಿತ್ತಾರ









ಯಾದವಗಿರಿಯಲ್ಲಿ ರಸ್ತೆ ಬದಿ ನಿಂತು ಡ್ರೋನ್ ಪ್ರದರ್ಶನ ವೀಕ್ಷಿಸಿದ ಜನ

ಮೈಸೂರು, ಅ.7(ಎಸ್‌ಬಿಡಿ)– ಮೈಸೂರು ದಸರಾ ಪ್ರಯುಕ್ತ ಸೋಮವಾರ ಕೂಡ ಅತ್ಯಾಕರ್ಷಕ ಡ್ರೋನ್ ಪ್ರದರ್ಶನವನ್ನು ಸಾವಿರಾರು ಮಂದಿ ಕಣ್ತುಂಬಿಕೊಂಡರು.

ಬನ್ನಿಮಂಟಪ ಪಂಜಿನ ಕವಾಯತು ಮೈದಾನದ ಆಸನಗಳೆಲ್ಲಾ ಭರ್ತಿಯಾಗಿದ್ದವು. ಹೊರಭಾಗದಲ್ಲೂ ಸಾವಿರಾರು ಜನ ನೆರೆದಿದ್ದರು. ನಿಗದಿತ ಅವಧಿಗೂ 15 ನಿಮಿಷ ಮುನ್ನವೇ ಪ್ರದರ್ಶನ ಆರಂಭಿಸಲಾಯಿತು. ಧರೆಯಿಂದ ಆಗಸದತ್ತ ಚುಕ್ಕಿತಾರೆಗಳಂತೆ ಡ್ರೋನ್‌ಗಳು ಮೇಲೇರುತ್ತಿದ್ದಂತೆ ನೆರೆದಿದ್ದವರ ಹರ್ಷೋದ್ಗಾರವೂ ಮುಗಿಲು ಮುಟ್ಟಿತ್ತು. ಮಿನುಗುತ್ತಿದ್ದ 1500 ಡ್ರೋನ್‌ಗಳಿಂದ ಬಾನಂಗಳದಲ್ಲಿ ಸೃಷ್ಟಿಯಾದ ಆಕರ್ಷಕ ವಿನ್ಯಾಸಗಳನ್ನು ಕಣ್ತುಂಬಿಕೊಂಡರು.

ಎರಡನೇ ದಿನವೂ ರಾಷ್ಟ್ರಧ್ವಜ, ಚಂದ್ರಯಾನ, ವಿಶ್ವ ಭೂಪಟ, ಯೋಧ, ಕರ್ನಾಟಕ ಭೂಪಟ, ಅಂಬಾರಿ ಹೊತ್ತ ಆನೆ, ಸುವರ್ಣ ಕರ್ನಾಟಕ ಸಂಭ್ರಮ, ಅರಳಿಮರ, ತಿಮಿಂಗಿಲ, ಚಾಮುಂಡೇಶ್ವರಿ ದೇವಿ ಸೇರಿದಂತೆ 15ಕ್ಕೂ ಹೆಚ್ಚು ವಿನ್ಯಾಸಗಳು ಪಡಿಮೂಡಿದವು. ವಿನ್ಯಾಸಕ್ಕೆ ಹೊಂದುವ ಹಿನ್ನೆಲೆ ಸಂಗೀತ ಸಮ್ಮಿಳಿತಗೊಂಡಿದ್ದು ಪ್ರೇಕ್ಷಕರಿಗೆ ಹೊಸ ಅನುಭವ ನೀಡಿತು.

ವಿಜಯ ಪ್ರಕಾಶ್ ಗಾಯನ: ಡ್ರೋನ್ ಪ್ರದರ್ಶನದ ಅಂಗವಾಗಿ ನಡೆದ ಸಂಗೀತ ರಸಸಂಜೆ ಕಾರ್ಯಕ್ರಮದಲ್ಲಿ ಜನಪ್ರಿಯ ಹಿನ್ನೆಲೆ ಗಾಯಕ ವಿಜಯಪ್ರಕಾಶ್ ತಮ್ಮ ವಿಶಿಷ್ಟ ಗಾಯನದ ಮೂಲಕ ನೆರೆದಿದ್ದವರ ಮನಸೂರೆಗೊಂಡರು. ತಾವೇ ಹಾಡಿರುವ ಹಿಟ್ ಗೀತೆ 'ಖಾಲಿ ಕ್ವಾಟ್ರು ಬಾಟ್ಲಿ ಹಂಗೆ ಲೈಫು...' 'ಕುಲದಲ್ಲಿ ಕೀಳಾವುದೋ...', 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು...' ಸೇರಿದಂತೆ ಹಲವು ಹಾಡುಗಳನ್ನು ಪ್ರಸ್ತುತಪಡಿಸಿ, ಮನರಂಜಿಸಿದರು. ದಿವಂಗತ ಪುನೀತ್ ರಾಜಕುಮಾರ್ ನಟನೆಯ 'ಗೊಂಬೆ ಹೇಳುತೈತೆ, ಮತ್ತೆ ಹೇಳುತೈತೆ...' ಹಾಡಿದಾಗ ನೆರೆದಿದ್ದವರೆಲ್ಲಾ ಮೊಬೈಲ್ ಟಾರ್ಚ್‌ಲೈಟ್ ಹಿಡಿದು ತಲೆದೂಗಿದರು.


ಕೆ.ಆರ್.ನಗರದ ಶಾಸಕ ಡಿ.ರವಿಶಂಕರ್, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ತಾಂತ್ರಿಕ ವಿಭಾಗದ ನಿರ್ದೇಶಕ ಕೆ.ಎಂ. ಮುನಿಗೋಪಾಲ್ ರಾಜು ಸೇರಿದಂತೆ ಹಲವು ಅಧಿಕಾರಿಗಳು ಡ್ರೋನ್ ಶೋ ವೀಕ್ಷಿಸಿ, ಸಂಭ್ರಮಿಸಿದರು.

ಎರಡೂ ದಿನ ಯಶಸ್ವಿ: ಭಾನುವಾರ ಹಾಗೂ ಸೋಮವಾರ ಡ್ರೋನ್ ಶೋ ವೀಕ್ಷಣೆಗೆ ಮುಕ್ತ ಅವಕಾಶ ಕಲ್ಪಿಸಲಾಗಿತ್ತು. ಎರಡೂ ದಿನವೂ ಭಾರಿ ಜನಸ್ತೋಮದ ನಡುವೆ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ(ಸೆಸ್ಕ್)ದ ವತಿಯಿಂದ ಆಯೋಜಿಸಿದ್ದ ಅತೀದೊಡ್ಡ ಡ್ರೋನ್ ಪ್ರದರ್ಶನವನ್ನು ನೆರೆದಿದ್ದವರು ಬಣ್ಣಿಸಿದರು. ಪಂಜಿನ ಕವಾಯತು ತಾಲೀಮು(ಅ.11) ಹಾಗೂ ಕವಾಯತು ಪ್ರದರ್ಶನ(ಅ.12)ದ ದಿನವೂ ಡ್ರೋನ್ ಪ್ರದರ್ಶನವಿರಲಿದೆ. ಆದರೆ ಪಾಸ್ ಅಥವಾ ಟಿಕೆಟ್ ಇದ್ದವರು ವೀಕ್ಷಣೆ ಮಾಡಬಹುದಾಗಿದೆ.

ಯಾದವಗಿರಿಯಿಂದಲೂ ವೀಕ್ಷಣೆ!

ಯಾದವಗಿರಿ ಬಡಾವಣೆ, ಕೈಗಾರಿಕಾ ಬಡಾವಣೆ, ಬೃಂದಾವನ ಬಡಾವಣೆ ಸಂಪರ್ಕಿಸುವ ರಸ್ತೆ(ರೈಲು ಹಳಿ ಪಕ್ಕ)ಯುದ್ದಕ್ಕೂ ನಿಂತು ಸಾವಿರಾರು ಜನ ಡ್ರೋನ್ ಪ್ರದರ್ಶನವನ್ನು ದೂರದಿಂದಲೇ ಕಣ್ತುಂಬಿಕೊಂಡರು. ಹಲವರು ತಮ್ಮ ಮನೆ ಟೆರೇಸ್‌ನಲ್ಲಿ ನಿಂತು ಮೊಬೈಲ್‌ನಲ್ಲಿ ಸೆರೆ ಹಿಡಿದರು. ಬನ್ನಿಮಂಟಪ, ಹನುಮಂತನಗರ ನಿವಾಸಿಗಳೂ ಟೆರೇಸ್ ಏರಿ ಡ್ರೋನ್ ಕರಾಮತ್ತನ್ನು ನೋಡಿ ಖುಷಿಪಟ್ಟರು. ಯಾದವಗಿರಿ ರೈಲ್ವೆ ಹಳಿ ಪಕ್ಕದ ರಸ್ತೆಯುದ್ದಕ್ಕೂ ಜನ ಸಾಲುಗಟ್ಟಿ ಡ್ರೋನ್ ಪ್ರದರ್ಶನ ವೀಕ್ಷಿಸಿದ ಪರಿಣಾಮ ಭಾರಿ ವಾಹನ ದಟ್ಟಣೆ ನಿರ್ಮಾಣವಾಗಿತ್ತು. ಪ್ರದರ್ಶನ ಮುಗಿದ ಮೇಲೆ ಮುಂದೆ ಸಾಗಲು ಹರಸಾಹಸಪಡುವಂತಾಯಿತು.

ಕಲಾಮಂದಿರ ವೇದಿಕೆಯಲ್ಲಿ ನೃತ್ಯರೂಪಕ, ಸೋಬಾನೆ ಪದ, ಗಾರುಡಿ ಗೊಂಬೆ ಪ್ರದರ್ಶನ ಸೊಬಗು



ಕಲಾಮಂದಿರ ಸಾಂಸ್ಕೃತಿಕ ವೇದಿಕೆಯಲ್ಲಿ ಮಥುರಾ ಕಲಾವಿದರು ಸೋಮವಾರ ಅಮೋಘ ನೃತ್ಯರೂಪಕ ಪ್ರಸ್ತುತಪಡಿಸಿದರು.

ಮೈಸೂರು, ಅ.7(ಎಸ್‌ಬಿಡಿ)– ಮೈಸೂರು ದಸರಾ ಸಾಂಸ್ಕೃತಿಕ ಉತ್ಸವದ ಕಲಾಮಂದಿರ ವೇದಿಕೆಯಲ್ಲಿ ಸೋಮವಾರ ವೈವಿಧ್ಯಮಯ ಕಾರ್ಯಕ್ರಮಗಳು ನಡೆದವು. ಉತ್ತರಪ್ರದೇಶದ ಮಥುರಾದಿಂದ ಆಗಮಿಸಿದ್ದ ದೀಪಕ್ ಶರ್ಮಾ ಹಾಗೂ ತಂಡದ ಕಲಾವಿದರು ವಿಶೇಷ ನೃತ್ಯರೂಪಕದ ಮೂಲಕ ಶ್ರೀಕೃಷ್ಣನ ಲೀಲೆಯನ್ನು ಕಣ್ಣಿಗೆ ಕಟ್ಟಿದರು. ದೀಪಕ್ ಶರ್ಮಾ ಗಾಯನ ಹಾಗೂ ಪಾರಂಪರಿಕ ವಾದ್ಯ ಹಿಮ್ಮೇಳದೊಂದಿಗೆ ಅಮೋಘ ನೃತ್ಯ ಸಮ್ಮಿಳಿತಗೊಂಡು ದ್ವಾಪರ ಲೋಕವೇ ಸೃಷ್ಟಿಯಾದಂತೆ ಭಾಸವಾಯಿತು. ಪ್ರೇಕ್ಷಕರು ತಮ್ಮ ಮೊಬೈಲ್‌ಗಳಲ್ಲಿ ನಯನಮನೋಹರ ನೃತ್ಯರೂಪಕವನ್ನು ಸೆರೆಹಿಡಿದು ಸಂತಸ ಪಟ್ಟರು.

ಸೋಬಾನೆ ಸೊಬಗು: ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಹಲವು ಜಾನಪದ ಕಲಾವಿದರು ಸೋಬಾನೆ ಪದಗಳನ್ನು ಪ್ರಸ್ತುತಪಡಿಸಿದರು. 'ಓ ನನ್ನ ಗಿಣಿಯೇ ಯಾಲಕ್ಕಿ ಗೊನೆಯೇ...', 'ಕಲ್ಯಾಣವೋ ಗೌರಿ ಕಲ್ಯಾಣವೋ...', 'ಸೋ ಬನ್ನಿರೇ, ಸೋಬಾನೆ ಬನ್ನಿರೇ...' ಹೀಗೆ ಹತ್ತಾರು ಸುಂದರ ಸೋಬಾನೆ ಪದಗಳನ್ನು ಉಣಬಡಿಸಿದರು.



ಸೋಬಾನೆ ಪದ ಹಾಡಿದ ಕಲಾವಿದರನ್ನು ಕಾಣಬಹುದು.

ಸಮಯ ಮೊಟಕು: ಒಂದು ಸೋಬಾನೆ ಪದ ಹಾಡಲು ಕನಿಷ್ಠ 10–15 ನಿಮಿಷವಾದರೂ ಬೇಕು. ಆದರೆ ಸಮಯಾಭಾವ ಎಂದು ಹೇಳಿ ಒಂದೆರಡು ನಿಮಿಷ ಮಾತ್ರ ಸಮಯ ನೀಡಲಾಯಿತು. ಒಂದು ಪದವನ್ನಾದರೂ ಪೂರ್ಣಗೊಳಿಸಲು ಅವಕಾಶ ನೀಡಲಿಲ್ಲ. ಕೇವಲ ಫೋಟೋ ಹಾಗೂ ವಿಡಿಯೋ ದಾಖಲೆಗಾಗಿ ಹಾಡಿಸಿದಂತಿತ್ತು. ಮಧ್ಯದಲ್ಲೇ ಸನ್ನೆ ಮಾಡಿ, ಹಾಡು ನಿಲ್ಲಿಸಲಾಯಿತು. ಇದರಿಂದ ಕಲಾಸಕ್ತರಿಗೆ ಬೇಸರವಾಗುವ ಜೊತೆಗೆ ಕಲಾವಿದರಿಗೂ ಇರಿಸುಮುರುಸಾಯಿತು.

ಬೆಂಗಳೂರಿನ ಧನುಷ್ ಮತ್ತು ತಂಡದವರ 'ಗಾರುಡಿ ಗೊಂಬೆ' ಪ್ರದರ್ಶನ, ರಾಮನಗರದ ಶ್ರೀ ದೇವಿ ಕುಮಾರಮ್ಮ ತಂಡದ ಕಲಾವಿದರ ಚಂಡೆ ವಾದನ, ಬೆಂಗಳೂರಿನ ಆರ್.ಅನುಷಾ ತಂಡದವರ ಸಮೂಹ ನೃತ್ಯ, ಬಾಗಲಕೋಟೆ ಕಲಾವಿದರ ಜಾನಪದ ಗೀತೆಗಳ ಗಾಯನ ಹಾಗೂ ಕವಿತಾ ಕಾಮತ್ ತಂಡದ ಕನ್ನಡದ ಗಜಲ್ ಸೇರಿದಂತೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ನೂರಾರು ಪ್ರೇಕ್ಷಕರು ಆಸ್ವಾದಿಸಿದರು.

ಭಾರತದ ಭದ್ರತೆಗೆ ಅಪಾಯವಾಗುವ ಯಾವ ಕೆಲಸವನ್ನೂ ಮಾಡುವುದಿಲ್ಲ: ಮಾಲ್ಡೀವ್ಸ್ ಅಧ್ಯಕ್ಷ ಸ್ಪಷ್ಟನೆ



ನವದೆಹಲಿ: ಮಾಲ್ಡೀವ್ಸ್‌ನ ಅಧ್ಯಕ್ಷ ಮೊಹಮದ್ ಮುಯಿಝು ನಾಲ್ಕು ದಿನಗಳ ಕಾಲ ಭಾರತ ಪ್ರವಾಸದಲ್ಲಿದ್ದಾರೆ.

ಈ ವೇಳೆ ಮಾತನಾಡಿರುವ ಮುಯಿಝು, ತಮ್ಮ ದೇಶ ಭಾರತದ ಭದ್ರತೆಗೆ ಅಪಾಯವಾಗುವಂತಹ ಯಾವುದೇ ಕೆಲಸಗಳನ್ನೂ ಮಾಡುವುದಿಲ್ಲ ಎಂದು ಭರವಸೆ ನೀಡಿದ್ದಾರೆ.

ಭಾರತ, ಮಾಲ್ಡೀವ್ಸ್‌ಗೆ ಮೌಲ್ಯಯುತ ಮಿತ್ರ ಹಾಗೂ ಪಾಲುದಾರ ರಾಷ್ಟ್ರವಾಗಿದೆ. ನಮ್ಮ ಮೈತ್ರಿ, ಬಾಂಧವ್ಯಗಳು ಪರಸ್ಪರ ಗೌರವ ಹಾಗೂ ಹಿತಾಸಕ್ತಿಯ ಆಧಾರದಲ್ಲಿ ನಿರ್ಮಾಣಗೊಂಡಿವೆ. ನಾವು ವಿವಿಧ ಕ್ಷೇತ್ರಗಳಲ್ಲಿ ಇತರ ದೇಶಗಳೊಂದಿಗೆ ನಮ್ಮ ಸಹಕಾರವನ್ನು ವರ್ಧಿಸುತ್ತಿದ್ದರೂ, ನಮ್ಮ ಕ್ರಮಗಳು ನಮ್ಮ ಪ್ರದೇಶದ ಭದ್ರತೆ ಮತ್ತು ಸ್ಥಿರತೆಗೆ ರಾಜಿ ಮಾಡಿಕೊಳ್ಳುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ನಾವು ಬದ್ಧರಾಗಿದ್ದೇವೆ ಎಂದು ಅವರು ಹೇಳಿದ್ದಾರೆ.

ಚೀನಾ ಪರ ಒಲವು ಹೊಂದಿರುವ ಮುಯಿಝು ನವೆಂಬರ್‌ನಲ್ಲಿ ಕಚೇರಿಯ ಅಧಿಕಾರ ವಹಿಸಿಕೊಂಡ ನಂತರ ಭಾರತ ಮತ್ತು ಮಾಲ್ಡೀವ್ಸ್ ನಡುವಿನ ಸಂಬಂಧಗಳು ತೀವ್ರ ಒತ್ತಡಕ್ಕೆ ಒಳಗಾಗಿತ್ತು.

ಕಳೆದ ವರ್ಷ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ 'ಇಂಡಿಯಾ ಔಟ್' ಅಭಿಯಾನದಲ್ಲಿ ಮುಯಿಝು ಗೆದ್ದರು ಮತ್ತು ಈ ವರ್ಷದ ಮೇ ವೇಳೆಗೆ ದ್ವೀಪ ಸಮೂಹ ರಾಷ್ಟ್ರದಲ್ಲಿ ನಿಯೋಜಿಸಲಾದ ತನ್ನ ಮಿಲಿಟರಿ ಸಿಬ್ಬಂದಿಯನ್ನು ಹಿಂತೆಗೆದುಕೊಳ್ಳುವಂತೆ ಭಾರತವನ್ನು ಕೇಳಿಕೊಂಡಿದ್ದರು. ಭಾರತೀಯ ಪಡೆಗಳನ್ನು ಹಿಂತೆಗೆದುಕೊಳ್ಳುವ ಬಗ್ಗೆ ಅವರ ನಿರ್ಧಾರದ ಬಗ್ಗೆ ಕೇಳಿದಾಗ, ಮುಯಿಝು ಅವರು ದೇಶೀಯ ಆದ್ಯತೆಗಳೆಂದು ಪರಿಗಣಿಸಿದ್ದನ್ನು ತಿಳಿಸುತ್ತಿರುವುದಾಗಿ ಹೇಳಿದರು.

ದೇಶ - ವಿದೇಶ

ಊಟಕ್ಕೆ ವಿಷ ಬೆರೆಸಿ ಮನೆಯ 13 ಜನರನ್ನು ಕೊಂದ ಯುವತಿ



ಸಿಂಧ್ ಪ್ರಾಂತ್ಯ: ತಾನು ಮೆಚ್ಚಿದ ಹುಡುಗನೊಂದಿಗೆ ಮದುವೆ ಮಾಡಿಕೊಡಲು ಕುಟುಂಬಸ್ಥರು ಒಪ್ಪದ ಹಿನ್ನೆಲೆಯಲ್ಲಿ ಯುವತಿಯೊಬ್ಬಳು ಊಟಕ್ಕೆ ವಿಷ ಬೆರೆಸಿ 13 ಮಂದಿಯನ್ನು ಹತ್ಯೆ ಮಾಡಿದ ಘಟನೆ ಪಾಕಿಸ್ತಾನದ ಸಿಂದ್ ಪ್ರಾಂತ್ಯದಲ್ಲಿ ನಡೆದಿದೆ. ಖೈರಪುರ ಸಮೀಪದ ಹೈಬತ್ ಖಾನ್ ಬ್ರೋಹಿ ಗ್ರಾಮದಲ್ಲಿ ಇತ್ತೀಚೆಗೆ ಒಂದೇ ಕುಟುಂಬದ 13 ಮಂದಿ ಸಾವಿಗೀಡಾಗಿದ್ದರು. ತನಿಖೆ ಕೈಗೊಂಡ ಪೊಲೀಸರು ಕೊನೆಗೂ ಪ್ರಕರಣ ಭೇದಿಸುವಲ್ಲಿ ಯಶಸ್ವಿಯಾಗಿದ್ದು, ಯುವತಿಯನ್ನು ಬಂಧಿಸಿದ್ದಾರೆ. ತಾನು ಇಷ್ಟ ಪಟ್ಟಿದ ಹುಡುಗನನ್ನು ಮದುವೆಯಾಗಲು ಮನೆಯವರು ಒಪ್ಪದ ಕಾರಣ ಕೋಪಗೊಂಡ ಯುವತಿ ಶಾಯಿಸ್ತಾ, ತನ್ನ ಪ್ರಿಯಕರನೊಂದಿಗೆ ಸೇರಿ ಸಂಚು ರೂಪಿಸಿದ್ದು, ಆಕೆಯ ಪೋಷಕರು ಸೇರಿದಂತೆ ಕುಟುಂಬ ಸದಸ್ಯರಿಗೆ ವಿಷವುಣಿಸಿ ಸಾಯಿಸಿರುವುದು ವಿಚಾರಣೆ ವೇಳೆ ತಿಳಿದುಬಂದಿದೆ. ಊಟ ಸೇವಿಸಿದ ನಂತರ ಅಸ್ವಸ್ಥರಾಗಿದ್ದ ಎಲ್ಲಾ 13 ಸದಸ್ಯರನ್ನು ಆಸ್ಪತ್ರೆಗೆ ಸಾಗಿಸಲಾಗಿತ್ತು. ಅಲ್ಲಿ ಅವರೆಲ್ಲರೂ ಮೃತಪಟ್ಟಿದ್ದರು.

ಮೈಕ್ರೋ ಆರ್‌ಎನ್‌ಎ ಅನ್ವೇಷಣೆಗೆ ವೈದ್ಯಕೀಯ ವಿಭಾಗದ ನೊಬೆಲ್ ಪ್ರಶಸ್ತಿ

ನವದೆಹಲಿ: ವೈದ್ಯಕೀಯ ವಿಭಾಗದ 2024 ನೇ ಸಾಲಿನ ನೊಬೆಲ್ ಪ್ರಶಸ್ತಿಯನ್ನು ಮೈಕ್ರೋ ಆರ್‌ಎನ್‌ಎ ಅನ್ವೇಷಣೆಗೆ ಘೋಷಿಸಲಾಗಿದೆ. ವಿಕ್ಟರ್ ಅಂಬ್ರೋಸ್ ಮತ್ತು ಗ್ಯಾರಿ ರುವ್ಕುನ್ ಮೈಕ್ರೋ ಆರ್‌ಎನ್‌ಎ ಹಾಗೂ ಪೋಸ್ಟ್-ಟ್ರಾನ್ಸ್‌ಕ್ರಿಪ್ಷನಲ್ ಜೀನ್ ನಿಯಂತ್ರಣದಲ್ಲಿ ಅದರ ಪಾತ್ರ ಅನ್ವೇಷಣೆ ಮಾಡಿದ್ದಕ್ಕಾಗಿ ನೊಬೆಲ್ ಪ್ರಶಸ್ತಿಯನ್ನು ಘೋಷಿಸಲಾಗಿದೆ.

2024 ರ ಫಿಸಿಯಾಲಜಿ ಅಥವಾ ಮೆಡಿಸಿನ್ ವಿಭಾಗದ ನೊಬೆಲ್ ಪ್ರಶಸ್ತಿ ಜೀನ್ ಚಟುವಟಿಕೆಯನ್ನು ನಿಯಂತ್ರಿಸಲು ಜೀವಕೋಶಗಳಲ್ಲಿ ಬಳಸಲಾಗುವ ಪ್ರಮುಖ ನಿಯಂತ್ರಕ ಕಾರ್ಯವಿಧಾನದ ಆವಿಷ್ಕಾರದ ಮೇಲೆ ಕೇಂದ್ರೀಕೃತಗೊಂಡಿದೆ ಆನುವಂಶಿಕ ಮಾಹಿತಿಯು DNA ಯಿಂದ ಸಂದೇಶವಾಹಕ RNA (mRNA) ಗೆ ಟ್ರಾನ್ಸ್ಕ್ರಿಪ್ಷನ್ (ಪ್ರತಿಲೇಖನ) ಎಂಬ ಪ್ರಕ್ರಿಯೆಯ ಮೂಲಕ ಹರಿಯುತ್ತದೆ ಮತ್ತು ನಂತರ ಪ್ರೋಟೀನ್ ಉತ್ಪಾದನೆಗಾಗಿ ಸೆಲ್ಯುಲಾರ್ ಸಾಧನಗಳಿಗೆ ಹರಿಯುತ್ತದೆ. ಅಲ್ಲಿ, ಡಿಎನ್‌ಎಯಲ್ಲಿ ಸಂಗ್ರಹವಾಗಿರುವ ಆನುವಂಶಿಕ ಸೂಚನೆಗಳ ಪ್ರಕಾರ ಪ್ರೋಟೀನ್‌ಗಳು ತಯಾರಾಗಲಿವೆ.

20 ನೇ ಶತಮಾನದ ಮಧ್ಯಭಾಗದಿಂದ, ಹಲವಾರು ಮೂಲಭೂತ ವೈಜ್ಞಾನಿಕ ಸಂಶೋಧನೆಗಳು ಈ ಪ್ರಕ್ರಿಯೆಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂಬುದನ್ನು ವಿವರಿಸಿವೆ 1993 ರಲ್ಲಿ, ಈ ವರ್ಷದ ನೊಬೆಲ್ ಪ್ರಶಸ್ತಿ ವಿಜೇತರು ಹೊಸ ಮಟ್ಟದ ಜೀನ್ ನಿಯಂತ್ರಣವನ್ನು ವಿವರಿಸುವ ಅನಿರೀಕ್ಷಿತ ಸಂಶೋಧನೆಗಳನ್ನು ಪ್ರಕಟಿಸಿದರು.

ಕರಾಚಿ ವಿಮಾನ ನಿಲ್ದಾಣದ ಹೊರಗೆ ಭಾರಿ ಸ್ಫೋಟ



ಕರಾಚಿ: ಪಾಕಿಸ್ತಾನದ ಕರಾಚಿ ವಿಮಾನ ನಿಲ್ದಾಣದ ಹೊರಗೆ ಭಾನುವಾರ ಸಂಭವಿಸಿದ ಭಾರಿ ಸ್ಫೋಟದಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ ಮತ್ತು ಕನಿಷ್ಠ 8 ಮಂದಿ ಗಾಯಗೊಂಡಿದ್ದಾರೆ. ಪಾಕಿಸ್ತಾನದ ಅತಿದೊಡ್ಡ ವಿಮಾನ ನಿಲ್ದಾಣದ ಹೊರಗೆ ಟ್ಯಾಂಕರ್ ಸ್ಫೋಟಗೊಂಡಿದೆ ಎಂದು ಪೊಲೀಸರು ಮತ್ತು ಪ್ರಾಂತೀಯ ಸರ್ಕಾರ ಹೇಳಿದೆ. ಆದರೆ ಇದು ವಿದೇಶಿಯರನ್ನು ಗುರಿಯಾಗಿಸಿಕೊಂಡು ನಡೆದ ದಾಳಿ ಎಂದು ಪ್ರಾಂತೀಯ ಗೃಹ ಸಚಿವ ಜಿಯಾ ಉಲ್ ಹಸನ್ ಸ್ಥಳೀಯ ಟಿವಿ ವಾಹಿನಿ ಜಿಯೋಗೆ ತಿಳಿಸಿದ್ದಾರೆ. ಇದು ಚೀನಾದ ಪ್ರಜೆಗಳ ಮೇಲೆ ನಡೆದ ದಾಳಿಯಾಗಿದ್ದು, ಅವರಲ್ಲಿ ಒಬ್ಬರು ಗಾಯಗೊಂಡಿದ್ದಾರೆ ಎಂದು ಗೃಹ ಸಚಿವಾಲಯದ ಅಧಿಕಾರಿಯೊಬ್ಬರು ಅಸೋಸಿಯೇಟೆಡ್ ಪ್ರೆಸ್‌ಗೆ ತಿಳಿಸಿದ್ದಾರೆ.

ಸಾವಿರಾರು ಚೀನೀ ಕಾರ್ಮಿಕರು ಪಾಕಿಸ್ತಾನದಲ್ಲಿದ್ದಾರೆ, ಅವರಲ್ಲಿ ಹೆಚ್ಚಿನವರು ಬೀಜಿಂಗ್‌ನ ಬಹುಶತಕೋಟಿ ಡಾಲರ್ ವೆಚ್ಚದ ಬೆಲ್ಟ್ ಮತ್ತು ರೋಡ್ ಯೋಜನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಇದು ದಕ್ಷಿಣ ಮತ್ತು ಮಧ್ಯ ಏಷ್ಯಾವನ್ನು ಚೀನಾದ ರಾಜಧಾನಿಯೊಂದಿಗೆ ಸಂಪರ್ಕಿಸುತ್ತದೆ ಎಂದು ತಿಳಿಸಿದರು.

ಎಎಪಿ ಸಂಸದ ಸಂಜೀವ್ ಅರೋರಾ ಮನೆ ಮೇಲೆ ಇಡಿ ದಾಳಿ



ಗುರುಗ್ರಾಮ್: ಎಎಪಿ ರಾಜ್ಯಸಭಾ ಸದಸ್ಯ ಸಂಜೀವ್ ಅರೋರಾ ಮತ್ತಿತರರ ವಿರುದ್ಧದ ಭೂ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದಿಂದ ಸೋಮವಾರ ಜಲಂಧರ್, ಲೂಧಿಯಾನ, ಗುರುಗ್ರಾಮ್ ಮತ್ತು ದೆಹಲಿಯ ಅನೇಕ ಸ್ಥಳಗಳಲ್ಲಿ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಲೂಧಿಯಾನ (ಪಂಜಾಬ್) ಮತ್ತು ಗುರುಗ್ರಾಮ್‌ದಲ್ಲಿರುವ (ಹರಿಯಾಣ) 61 ವರ್ಷದ ಅರೋರಾ ಅವರ ಮನೆ ಸೇರಿದಂತೆ ಸುಮಾರು 16–17 ಕಡೆಗಳಲ್ಲಿ ಶೋಧಿಸಲಾಗುತ್ತಿದೆ. ಜಲಂಧರ್‌ನಲ್ಲಿರುವ ರಿಯಲ್ ಎಸ್ಟೇಟ್ ಉದ್ಯಮಿ ಹೇಮಂತ್ ಸೂದ್ ಮತ್ತು ಮತ್ತೊಬ್ಬ ವ್ಯಕ್ತಿ ಚಂದ್ರಶೇಖರ್ ಅಗರವಾಲ್‌ಗೆ ಸಂಬಂಧಿಸಿದ ಮನೆಗಳಲ್ಲಿಯೂ ಶೋಧ ಕಾರ್ಯ ನಡೆಸಲಾಗುತ್ತಿದೆ ಎನ್ನಲಾಗಿದೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಸಂಜೀವ್ ಅರೋರಾ, ಶೋಧ ಕಾರ್ಯಾಚರಣೆಗೆ ನಿಖರ ಕಾರಣ ತಿಳಿದುಬಂದಿಲ್ಲ. ನಾನು ಕಾನೂನು ಪಾಲಿಸುವ ನಾಗರಿಕನಾಗಿದ್ದೇನೆ. ಏಜೆನ್ಸಿಗಳೊಂದಿಗೆ ಸಂಪೂರ್ಣವಾಗಿ ಸಹಕರಿಸುತ್ತೇನೆ ಮತ್ತು ಅವರ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ಉತ್ತರ ಪ್ರದೇಶದಲ್ಲಿ ರೈಲು ಹಳಿಗಳ ಮೇಲೆ ಮಣ್ಣಿನ ರಾಶಿ ಪತ್ತೆ



ರಾಯ್ ಬರೇಲಿ: ರೈಲುಗಳನ್ನು ಹಳಿ ತಪ್ಪಿಸುವ ಹಾಗೂ ರೈಲು ಸೇವೆಯಲ್ಲಿ ವ್ಯತ್ಯಯ ಉಂಟು ಮಾಡಲು ಯತ್ನಿಸುತ್ತಿರುವ ಪ್ರಕರಣಗಳು ಉತ್ತರ ಪ್ರದೇಶದಲ್ಲಿ ಹೆಚ್ಚಾಗುತ್ತಿದೆ. ಕಳೆದ ಬುಧವಾರ ಎರಡನೇ ಬಾರಿಗೆ ರೈಲ್ವೆಗೆ ಸೇರಿದ ಅಗ್ನಿಶಾಮಕ ಸಿಲಿಂಡರ್ ರೈಲು ಹಳಿ ಮೇಲೆ ಪತ್ತೆಯಾಗಿತ್ತು. ಇದೀಗ ರೈಲು ಹಳಿಗಳ ಮೇಲೆ ಮಣ್ಣಿನ ರಾಶಿ ಪತ್ತೆಯಾಗಿದೆ.

ಭಾನುವಾರ ರಾಯ್ ಬರೇಲಿಯ ರಘುರಾಜ್ ಸಿಂಗ್ ನಿಲ್ದಾಣದ ಬಳಿ ರೈಲು ಹಳಿಗಳ ಮೇಲೆ ಮಣ್ಣಿನ ರಾಶಿ ಬಿದ್ದಿರುವುದನ್ನು ನೋಡಿದ ನಂತರ ಲೋಕೋ ಪೈಲಟ್ ಪ್ಯಾಸೆಂಜರ್ ರೈಲನ್ನು ಸ್ವಲ್ಪ ಸಮಯದವರೆಗೆ ಸ್ಥಗಿತಗೊಳಿಸಿದ್ದರು. ಹಳಿಯಿಂದ ಮಣ್ಣನ್ನು ತೆಗೆಯಲಾಗಿದ್ದು, ಮಾರ್ಗದಲ್ಲಿ ರೈಲು ಸಂಚಾರವನ್ನು ಪುನರಾರಂಭಿಸಲಾಗಿದೆ ಎಂದು ಎಸ್‌ಎಚ್‌ಒ ದೇವೇಂದ್ರ ಭಡೋರಿಯಾ ತಿಳಿಸಿದ್ದಾರೆ. ರೈಲ್ವೆ ಹಳಿಯಲ್ಲಿ ಸಣ್ಣ ಪ್ರಮಾಣದಲ್ಲಿ ಮಣ್ಣನ್ನು ಗುಡ್ಡೆ ಹಾಕಲಾಗಿತ್ತು. ಇದರಿಂದಾಗಿ ರಾಯ್ ಬರೇಲಿಯಿಂದ ತೆರಳುತ್ತಿದ್ದ ಶಟಲ್ ರೈಲನ್ನು ನಿಲ್ಲಿಸಲಾಯಿತು ಎಂದು ಅವರು ಮಾಹಿತಿ ನೀಡಿದರು.

ಯಾವುದೇ ಗೊಂದಲ ಬೇಡ ಕಾಫಿ ಬೆಳೆಯಿರಿ

ಕಾಫಿ ದಸರಾ ವಿಚಾರ ಸಂಕಿರಣದಲ್ಲಿ ಬೆಳೆಗಾರರಿಗೆ ಪ್ರಗತಿಪರ ಕೃಷಿಕ ಧರ್ಮರಾಜ ಸಲಹೆ

ಮಡಿಕೇರಿ, ಅ.7–ದೀರ್ಘಕಾಲಿಕ ಕಾಫಿ ಕೃಷಿ ಬಗ್ಗೆ ಬೆಳೆಗಾರರಲ್ಲಿ ಯಾವುದೇ ಗೊಂದಲ ಬೇಡ. ಈ ಬೆಳೆಯನ್ನು ನಂಬಿ ಮುಂದುವರೆಯಿರಿ ಎಂದು ಸಕಲೇಶಪುರದ ಪ್ರಗತಿಪರ ಕೃಷಿಕ ಧರ್ಮರಾಜ ಸಲಹೆ ನೀಡಿದರು.

ನಗರದ ಗಾಂಧಿ ಮೈದಾನದ ಕಲಾ ಸಂಭ್ರಮ ವೇದಿಕೆಯಲ್ಲಿ ಮಡಿಕೇರಿ ದಸರಾ ಸಮಿತಿಯಿಂದ ಆಯೋಜಿಸಿರುವ ಕಾಫಿ ದಸರಾ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಪ್ರಮುಖ ಬೆಳೆಯಾಗಿ ಕಾಫಿ ಕೃಷಿ ನಡೆಸುವುದರೊಂದಿಗೆ ಅಗತ್ಯವಿರುವಷ್ಟು ಇತರೆ ಮಿಶ್ರ ಬೆಳೆಯನ್ನು ಬೆಳೆಯಿರಿ. ಆದರೆ, ಕಾಫಿಗೆ ಪರ್ಯಾಯವಾಗಿ ಬಟರ್ ಫ್ರೂಟ್ ಇನ್ನಿತರ ಬೆಳೆಗಳನ್ನು ದೀರ್ಘ ಕಾಲಿಕವಾಗಿ ದೊಡ್ಡ ಪ್ರಮಾಣದಲ್ಲಿ ಬೆಳೆಯುವುದು ಸುಲಭ ಸಾಧ್ಯವಲ್ಲ. ಯಾವುದೇ ವೈಪರೀತ್ಯ ನಡುವೆಯೂ ಕಾಫಿ ಕೃಷಿ ಬೆಳೆಗಾರರನ್ನು ಕೈ ಬಿಟ್ಟಿಲ್ಲ ಎಂದು ತಿಳಿಸಿದರು.

ಪೋಷಕಾಂಶಗಳ ನಿಗಾ ಇರಲಿ: ಪ್ರಸ್ತುತ ಕಾಫಿ ಬೆಳೆಗಾರರು ತಾವು ಯಾವ ರೀತಿ ಕೃಷಿ ನಡೆಸಬೇಕು. ರಾಸಾಯನಿಕ ಗೊಬ್ಬರ ಬಳಸಿ ಕೃಷಿ ಮಾಡಬೇಕೆ, ಸಾವಯವ ಕೃಷಿ ಕಾಫಿಗೆ ಹೊಂದಿಕೆಯಾಗುತ್ತದೆಯೇ ಮೊದಲಾದ ಗೊಂದಲಗಳಲ್ಲಿ ಇದ್ದಾರೆ. ಆಯಾ ವಿಧಾನಗಳಲ್ಲಿ ಸಾಧನೆ ಮಾಡಿರುವವರು ಸಾಕಷ್ಟು ಮಂದಿ ಇದ್ದಾರೆ. ಆದರೆ, ಬೆಳೆಗಾರ ತನ್ನ ತೋಟದ ಮಣ್ಣಿನ ಪರೀಕ್ಷೆ ಮೂಲಕ ಅಗತ್ಯ ರಸಗೊಬ್ಬರ, ಸೂಕ್ಷ್ಮ ಪೋಷಕಾಂಶಗಳನ್ನು ಒದಗಿಸಿ ಮಣ್ಣಿನ ಆರೋಗ್ಯ ಕಾಯ್ದುಕೊಂಡು ಕಾಫಿ ಉತ್ಪಾದನೆ ಹೆಚ್ಚಿಸಲು ಸಾಧ್ಯ ಎಂದು ಸ್ಪಷ್ಟಪಡಿಸಿದರು.

ಕಾಫಿ ತೋಟಗಳನ್ನು ಉತ್ತಮವಾಗಿ ನಿರ್ವಹಿಸಲು ಮಣ್ಣಿನ ಸಾರ ಪಿಹೆಚ್ 6.5 ರಿಂದ 7ರ ಒಳಗೆ ಇರಬೇಕು. ಈ ಪಿಹೆಚ್ 5ಕ್ಕಿಂತ ಕೆಳಕ್ಕಿಳಿದರೆ, ಇಲ್ಲವೆ ನಿಗದಿತ ಮಾನದಂಡಕ್ಕಿಂತ ಹೆಚ್ಚಿದ್ದ ಸಂದರ್ಭ ನೀವು ಯಾವುದೇ ರಸಗೊಬ್ಬರ ನೀಡಿದರು ಅದು ಪ್ರಯೋಜನಕಾರಿಯಾಗಲಾರದು. ಮಣ್ಣಿನ ಪರೀಕ್ಷೆಯ ಮಹತ್ವ ತಿಳಿಯಬೇಕು ಎಂದು ಹೇಳಿದರು.

ಕಳೆ ನಾಶಕ ಬಳಸದಿರಿ: ಕಾಫಿ ತೋಟಗಳಲ್ಲಿ ಕಳೆ ಹೆಚ್ಚಿದೆ ಎಂದರೆ ಅಲ್ಲಿನ ಮಣ್ಣು ಆರೋಗ್ಯ ಪೂರ್ಣವಾಗಿದೆ ಎಂದು ಅರ್ಥ. ಇಂತಹ ಕಳೆ ತೆಗೆದು ಮತ್ತೆ ಭೂಮಿಗೆ ಸೇರಿಸಬೇಕೇ ಹೊರತು, ಕಳೆನಾಶಕ ಮೂಲಕ ಅದನ್ನು ಕೊಲ್ಲುವ ಕೆಲಸ ಬೇಡ. ಕಳೆ ನಾಶಕದಿಂದ ಮಣ್ಣಿನಲ್ಲಿರುವ ಸೂಕ್ಷ್ಮಾಣು ಜೀವಿಗಳು ಸಂಪೂರ್ಣವಾಗಿ ನಾಶವಾಗುವ ಅಪಾಯವಿದೆ ಎಂದು ಎಚ್ಚರಿಸಿದರು.

ಕಾಫಿ ಪರಿಮಳ ಮಾಯ!: ಕಾಫಿ ಕೃಷಿಯಲ್ಲಿ ಅತಿಯಾದ ರಸಗೊಬ್ಬರ ಬಳಕೆಯಿಂದ ಕಾಫಿ ಗುಣಮಟ್ಟ ಹಾಳಾಗಿದೆ ಎಂದು ಸುಂಟಿಕೊಪ್ಪ ವಿಭಾಗದ ಸಾವಯವ ಕಾಫಿ ಕೃಷಿಕ ಖಲಿಸ್ತಾ ಡಿಸಿಲ್ವಾ ಬೇಸರ ವ್ಯಕ್ತಪಡಿಸಿದರು.

ಮೊದಲು ಕಾಫಿ ಅಂಗಡಿಗಳಿಂದ ಕಾಫಿ ಪರಿಮಳ ಸುತ್ತಮುತ್ತಲೆಲ್ಲ ಪಸರಿಸುತಿತ್ತು. ಆದರೆ, ಇಂದು ಅಂಗಡಿ ಬಳಿ ಹೋಗಿ ಮೂಸಿ ನೋಡುವ ಸ್ಥಿತಿ ಬಂದಿದೆ. ಪ್ರಸ್ತುತ ನಾನು ಕಾಫಿ ಕೃಷಿಯಲ್ಲಿ ರಸಗೊಬ್ಬರವನ್ನು ಸಂಪೂರ್ಣವಾಗಿ ಬಳಸುತ್ತಿಲ್ಲ. ಮಣ್ಣಿನ ಆರೋಗ್ಯ ಕಾಯ್ದುಕೊಳ್ಳುವ ಪ್ರಯತ್ನಗಳನ್ನಷ್ಟೇ ನಡೆಸುವ ಮೂಲಕ ಉತ್ತಮ ಫಸಲು ಪಡೆಯುತ್ತಿರುವುದಾಗಿ ತಿಳಿಸಿದರು.

ಜೇನಿನಿಂದ ಕಾಫಿ ಫಸಲು ಹೆಚ್ಚಳ: ಕಾಫಿ ತೋಟಗಳಲ್ಲಿ ಜೇನು ಕೃಷಿ ನಡೆಸಿದಲ್ಲಿ, ಶೇ.21ರಿಂದ ಶೇ.31ರಷ್ಟು ಫಸಲು ಹೆಚ್ಚಿರುವುದು ವೈಜ್ಞಾನಿಕವಾಗಿ ದೃಢಪಟ್ಟಿದೆ ಎಂದು ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ಡಾ.ಕೆಂಚರೆಡ್ಡಿ ತಿಳಿಸಿದರು.

ಜೇನು ಹುಳುಗಳು ಪರಾಗ ಸ್ಪರ್ಶಕ್ಕೆ ಸಾಕಷ್ಟು ಸಹಕಾರ ನೀಡುವುದೇ ಇದಕ್ಕೆ ಕಾರಣ. ಕಾಫಿ ಫಸಲನ್ನು ಹೆಚ್ಚು ಮಾಡುವುದರೊಂದಿಗೆ ಜೇನು ಉತ್ಪಾದನೆಯೂ ಆರ್ಥಿಕವಾಗಿ ಬೆಳೆಗಾರನಿಗೆ ಪ್ರಯೋಜನಕಾರಿಯಾಗಿದೆ ಎಂದರು.

ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್ ಅಧ್ಯಕ್ಷ ಕೆ.ರಾಜೀವ್ ವಿಚಾರ ಸಂಕಿರಣ ಉದ್ಘಾಟಿಸಿದರು. ಮೀನುಗಾರಿಕೆ ಇಲಾಖಾ ಸಹಾಯಕ ನಿರ್ದೇಶಕ ಮಿಲನಾ ಭರತ್, ಸಿಪಿಎ ಅಧ್ಯಕ್ಷ ನಂದಾ ಬೆಳ್ಯಪ್ಪ, ಕಾಫಿ ಬೆಳೆಗಾರ ಕೆ.ಕೆ.ವಿಶ್ವನಾಥ್, ಮಹಿಳಾ ಕಾಫಿ ಜಾಗೃತಿ ಸಂಘದ ಅಧ್ಯಕ್ಷೆ ಜ್ಯೋತಿಕಾ ಬೋಪಣ್ಣ, ವಿಜ್ಞಾನಿ ಡಾ.ಶಿವಪ್ರಸಾದ್, ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ಕೀಟ ಶಾಸ್ತ್ರಜ್ಞ ಡಾ.ಕೆಂಚಾರೆಡ್ಡಿ, ವಿನೋದ್ ಮೂಡಗದ್ದೆ, ಕಾಫಿ ದಸರಾ ಸಂಘಟಕ ಎಚ್.ಟಿ.ಅನಿಲ್ ಉಪಸ್ಥಿತರಿದ್ದರು.

ಇದೇ ವೇಳೆ ಕಾಫಿ ಕೃಷಿ ಸಾಧಕ ನಡಿಕೇರಿಯಂಡ ಬೋಸ್ ಮಂದಣ್ಣ, ಕರಡದ ಬಿದಿರು ಕೃಷಿ ಸಾಧಕ ನಿಖಿಲ್ ರಾಮಮೂರ್ತಿ, ಕೊಡಗು ಕಾಫಿ ಮಹಿಳಾ ಜಾಗೃತಿ ಸಂಘದ ಮಹಿಳಾ ಸಂಘಟನೆ ಪ್ರಶಸ್ತಿ ಪುರಸ್ಕೃತೆ ವಿ.ಎ.ತಾಹಿರ್, ಜೇನುಕೃಷಿ ಸಾಧಕರಾದ ಶಿರಕಜೆ ಮಾದಪ್ಪ, ಮರಗೋಡು ಗ್ರಾಮದ ಕಟ್ಟೆಮನೆ ಪ್ರೇಮಗಣೇಶ್, ಕರಿಮೆಣಸು ಕೃಷಿ ಸಾಧಕ ಎ.ಪಿ.ಸುಬ್ಬಯ್ಯ, ಭತ್ತ ಕೃಷಿಕ ದೊಡ್ಡಳ್ಳಿ ಗ್ರಾಮದ ಬಸವಣ್ಣಯ್ಯ, ಹುಲುಸೆ ಗ್ರಾಮದ ಎಚ್.ಪಿ.ಪ್ರಸನ್ನ ಅವರನ್ನು ಸನ್ಮಾನಿಸಲಾಯಿತು.



ಮಡಿಕೇರಿ ಗಾಂಧಿ ಮೈದಾನದಲ್ಲಿ ನಡೆದ ಕಾಫಿ ದಸರಾ ವಿಚಾರ ಸಂಕಿರಣದಲ್ಲಿ ಕೃಷಿ ಸಾಧಕರನ್ನು ಸನ್ಮಾನಿಸಲಾಯಿತು.

ಕಾಫಿ ಅಭಿವೃದ್ಧಿಗೆ ಪ್ರೋತ್ಸಾಹ ಅಗತ್ಯ

ಕೊಡಗಿನಲ್ಲಿ ಕಾಫಿ ಬೆಳೆಯನ್ನು ಹೆಚ್ಚಾಗಿ ಉತ್ಪಾದಿಸುತ್ತಿದ್ದು, ಆ ನಿಟ್ಟಿನಲ್ಲಿ ಕಾಫಿ ಬೆಳೆಗಾರರನ್ನು ಪ್ರೋತ್ಸಾಹಿಸುವುದು ಅತ್ಯಗತ್ಯವಾಗಿದೆ ಎಂದು ಶಾಸಕ ಡಾ.ಮಂತರ್‌ಗೌಡ ತಿಳಿಸಿದರು.

ಕಾಫಿ ದಸರಾ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಕೊಡಗಿನ ಬೆಳೆಗಾರರು ಕಾಫಿ ಬೆಳೆಯನ್ನು ಮತ್ತಷ್ಟು ಔನತ್ಯಕ್ಕೆ ಕೊಂಡೊಯ್ಯುವಲ್ಲಿ ಶ್ರಮಿಸಬೇಕಿದೆ. ಕೊಡಗು ಕಾಫಿಗೆ ದೇಶ–ವಿದೇಶಗಳಲ್ಲೂ ಮಾರುಕಟ್ಟೆ ಸೌಲಭ್ಯ ಒದಗುವಂತಾಗಬೇಕು. ಆ ನಿಟ್ಟಿನಲ್ಲಿ ಕಾಫಿ ಬೆಳೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಬೇಕು ಎಂದರು.

ಜಿಲ್ಲಾಧಿಕಾರಿ ವೆಂಕಟ್‌ರಾಜಾ ಮಾತನಾಡಿ, ಕೊಡಗಿನ ಕಾಫಿ ಬೆಳೆ ಪ್ರಗತಿ ಹಾಗೂ ಸಾಧಕರ ಬಗ್ಗೆ ದಾಖಲೀಕರಣವಾಗಬೇಕು. ಆ ನಿಟ್ಟಿನಲ್ಲಿ ಜಿಲ್ಲಾಡಳಿತ ಕಾಫಿ ಟೇಬಲ್ ಹೊರತರಲು ಪ್ರಯತ್ನಿಸಲಿದೆ ಎಂದು ತಿಳಿಸಿದರು.

ಮರು ವಿಂಗಡಣೆ ವೇಳೆ ಕೊಡಗಿಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರ ನೀಡಲಿ

ಮಡಿಕೇರಿ, ಅ.7–ಲೋಕಸಭಾ ಕ್ಷೇತ್ರಗಳ ಮರು ವಿಂಗಡಣೆ ಸಂದರ್ಭ ಕೊಡಗಿಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರ ನೀಡಬೇಕು ಎಂದು ವಿರಾಜಪೇಟೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಒತ್ತಾಯಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊಡಗಿಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರ ಬೇಕೆಂದು ಜಿಲ್ಲೆಯ ಜನರ ಬಹುಕಾಲದ ಬೇಡಿಕೆ ಹಾಗೂ ಆಗ್ರಹವಾಗಿದೆ. ಜಿಲ್ಲೆಯ ಜನಸಂಖ್ಯೆ ಭೌಗೋಳಿಕ ವಲಯ, ಕಾನೂನು ಅವಕಾಶಗಳ ಕುರಿತು ರಾಜ್ಯ ಸರ್ಕಾರಕ್ಕೂ ಅಗತ್ಯ ಸಲಹೆಗಳನ್ನು ಈಗಾಗಲೇ ನೀಡಲಾಗಿದೆ ಎಂದು ಎ.ಎಸ್.ಪೊನ್ನಣ್ಣ ಹೇಳಿದರು.



ಎ.ಎಸ್.ಪೊನ್ನಣ್ಣ ಸುದ್ದಿಗಾರರೊಂದಿಗೆ ಮಾತನಾಡುತ್ತಿರುವುದು.

ಲೋಕಸಭಾ ಕ್ಷೇತ್ರ ಮರು ವಿಂಗಡಣೆ ಸಮಿತಿ ರಚನೆಯಾದ ಬಳಿಕ ರಾಜ್ಯ ಸರ್ಕಾರ ಕೊಡಗಿಗೆ ಪ್ರತ್ಯೇಕ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಈ ಸಲಹೆಗಳನ್ನು ಸಮಿತಿಗೆ ಸಲ್ಲಿಸಲಿದೆ ಎಂದು ಮಾಹಿತಿ ನೀಡಿದರು.

ದಸರಾದಲ್ಲಿ ದೈವ ಆರಾಧಕರಿಗೆ ಅಪಮಾನ



ಸುದ್ದಿಗೋಷ್ಠಿಯಲ್ಲಿ ದೈವ ನರ್ತಕರ ಸಂಘದ ಸ್ಥಾಪಕಾಧ್ಯಕ್ಷ ಪಿ.ಎಂ.ರವಿ ಮಾತನಾಡಿದರು.

ಮಡಿಕೇರಿ, ಅ.7–ಮಡಿಕೇರಿ ಮತ್ತು ಗೋಣಿಕೊಪ್ಪ ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ದೈವ ನರ್ತನವನ್ನು ಮನರಂಜನೆಗಾಗಿ ಬಳಸಿಕೊಂಡು ಅಪಮಾನಿಸಲಾಗಿದೆ ಎಂದು ದೈವ ನರ್ತಕರ ಸಂಘ ಅಸಮಾಧಾನ ವ್ಯಕ್ತಪಡಿಸಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಸ್ಥಾಪಕಾಧ್ಯಕ್ಷ ಪಿ.ಎಂ.ರವಿ ಮಾತನಾಡಿ, ದೈವ ನರ್ತನ ಎನ್ನುವುದು ತುಳುನಾಡು ಹಾಗೂ ಕರಾವಳಿ ಭಾಗದ ದೈವಶಕ್ತಿಯ ಆರಾಧನೆ, ಸಂಸ್ಕೃತಿ ಮತ್ತು ಸಂಪ್ರದಾಯವಾಗಿದೆ. ಇದನ್ನು ಸಾಂಸ್ಕೃತಿಕ ಕಾರ್ಯಕ್ರಮ ವೇದಿಕೆಯಲ್ಲಿ ಮನರಂಜನೆಗಾಗಿ ಬಳಸಿಕೊಂಡು ದೈವ ಆರಾಧಕರು ಹಾಗೂ ದೈವ ನರ್ತಕರಿಗೆ ಮಾನಸಿಕವಾಗಿ ನೋವುಂಟು ಮಾಡುವುದು ಖಂಡನೀಯ ಎಂದರು.

ಸಂಪ್ರದಾಯಕ್ಕೆ ಅಪಚಾರ: ಮಡಿಕೇರಿ ಮತ್ತು ಗೋಣಿಕೊಪ್ಪ ದಸರಾದಲ್ಲಿ ನೃತ್ಯ ತಂಡಗಳು ದೈವ ನರ್ತನವನ್ನು ತಮಗಿಷ್ಟ ಬಂದಂತೆ ಬಳಸಿಕೊಂಡು ಸಂಪ್ರದಾಯಕ್ಕೆ ಅಪಚಾರವೆಸಗಿವೆ. ಈ ಬಗ್ಗೆ ದಕ್ಷಿಣಕನ್ನಡ ಜಿಲ್ಲೆಯಲ್ಲೂ ಖಂಡನೆ ವ್ಯಕ್ತವಾಗಿದೆ. ಕೊಡಗಿನಲ್ಲಿ ನಮ್ಮ ಸಂಘ ಮನರಂಜನೆಗಾಗಿ ದೈವ ವೇಷ ತೊಟ್ಟು ನರ್ತನ ಮಾಡುವುದನ್ನು ಅನೇಕ ಬಾರಿ ವಿರೋಧಿಸುತ್ತಲೇ ಬಂದಿದೆ. ಶಾಲಾ–ಕಾಲೇಜುಗಳಿಗೆ ಮನವಿ ಮಾಡಿಕೊಳ್ಳಲಾಗಿದೆ. ಹಿಂದೆ ಸರ್ಕಾರ ಕೂಡ ಆದೇಶ ಹೊರಡಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಂಪ್ರದಾಯಕ್ಕೆ ವಿರುದ್ಧವಾಗಿ ದೈವ ನರ್ತನ ಮಾಡದಂತೆ ಸೂಚನೆ ನೀಡಿದೆ. ಆದರೂ ದಸರಾ ಕಾರ್ಯಕ್ರಮದಲ್ಲಿ ದೈವ ನರ್ತನ ಪುನರಾವರ್ತನೆಯಾಗಿರುವುದು ದೈವ ಆರಾಧಕರು ಹಾಗೂ ದೈವ ನರ್ತಕರ ಭಾವನೆಗೆ ವಿರುದ್ಧವಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸುತ್ತೋಲೆ ಹೊರಡಿಸಲು ಮನವಿ: ಈ ಕುರಿತು ಸಂಘದ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿ ಜಿಲ್ಲೆಯಲ್ಲಿ ಎಲ್ಲೂ ದೈವ ಆರಾಧನೆ ಮತ್ತು ದೈವ ನರ್ತನವನ್ನು ಮನರಂಜನೆಗಾಗಿ ಬಳಸದಂತೆ ಅಧಿಕೃತ ಸುತ್ತೋಲೆ ಹೊರಡಿಸಲು ಕೋರಲಾಗಿದೆ ಎಂದರು.

ವೀರನಾಡು ರಕ್ಷಣಾ ವೇದಿಕೆ ಅಧ್ಯಕ್ಷ ಹರೀಶ್ ಜಿ.ಆಚಾರ್ಯ ಮಾತನಾಡಿ, ನಮ್ಮ ಸಂಘಟನೆ ಮೂಲಕ ರಾಜ್ಯವ್ಯಾಪಿ ಆಯಾ ಜಿಲ್ಲಾಧಿಕಾರಿಗೆ ಪತ್ರ ಬರೆದು ತುಳುನಾಡಿನ ದೈವ ಆರಾಧನೆ ಮತ್ತು ದೈವ ನರ್ತನಕ್ಕೆ ಅಪಮಾನವಾಗುವುದನ್ನು ತಡೆಯುವಂತೆ ಮನವಿ ಮಾಡಿಕೊಳ್ಳಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ದೈವ ನರ್ತಕರ ಸಂಘದ ಜಿಲ್ಲಾಧ್ಯಕ್ಷ ಸದಾಶಿವ ರೈ, ಪ್ರಧಾನ ಕಾರ್ಯದರ್ಶಿ ಉಮೇಶ್, ಸಂಘಟನಾ ಕಾರ್ಯದರ್ಶಿ ರಮೇಶ್ ಹೆಬ್ಬೆಟ್ಟಗೇರಿ, ಖಜಾಂಚಿ ಬಿ.ಎ.ಜನಾರ್ಧನ ಉಪಸ್ಥಿತರಿದ್ದರು.

ಕೆ.ಎಸ್.ಕಾರ್ಯಪ್ಪ ನಿಧನ



ಸುಂಟಿಕೊಪ್ಪ, ಅ.7–ಸುಂಟಿಕೊಪ್ಪ ಸರ್ಕಾರಿ ಪ್ರೌಢ ಶಾಲೆ ಹಾಗೂ ಸೋಮವಾರ ಪೇಟೆ ತಾಲೂಕಿನ ನಿವೃತ್ತ ದೈಹಿಕ ಶಿಕ್ಷಣ ಪರಿವೀಕ್ಷಕ ಕೆ.ಎಸ್.ಕಾರ್ಯಪ್ಪ(76) ಸೋಮವಾರ ಮುಂಜಾನೆ ಮೈಸೂರಿನಲ್ಲಿ ನಿಧನದರು.

ಮೃತರು ಪತ್ನಿ ಹಾಗೂ ಪುತ್ರನನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ (ಅ.8) ವಿರಾಜಪೇಟೆ ತಾಲೂಕಿನ ಹಾತೂರಿನಲ್ಲಿ ಅಂತ್ಯಕ್ರಿಯೆ ನಡೆಯಲಿದೆ. ಸುಂಟಿಕೊಪ್ಪ ಸರ್ಕಾರಿ ಶಾಲೆ ಹಳೇ ವಿದ್ಯಾರ್ಥಿಗಳು ಸಂತಾಪ ಸೂಚಿಸಿದ್ದಾರೆ.

ಇತರೆ ಕಾರಣಕ್ಕೆ ದೇವರಕಾಡು ಬಳಕೆ ಬೇಡ

ವಿರಾಜಪೇಟೆ: ಕೊಡಗಿನಲ್ಲಿ ಹಿಂದಿನಿಂದಲ್ಲೂ ಹಿರಿಯರು ಪೂಜಿಸಿ, ರಕ್ಷಿಸಿಕೊಂಡು ಬಂದಂತ ದೇವರ ಕಾಡನ್ನು ಇತರೆ ಯಾವುದೇ ಕಾರಣಕ್ಕೆ ಬಳಸಬಾರದು ಎಂದು ಸಭೆಯಲ್ಲಿ ಒತ್ತಾಯಿಸಲಾಯಿತು.

ಅಮ್ಮತ್ತಿನಾಡುವಿನಲ್ಲಿ ನಡೆದ ರೈತ ಸಂಘದ ಮಹಾಸಭೆಯಲ್ಲಿ ಸಂಘದ ಗೌರವಾಧ್ಯಕ್ಷ ಕಾವಾಡಿಚಂಡ ಯು.ಗಣಪತಿ ಮಾತನಾಡಿ, ದೇವರ ಕಾಡಿನಲ್ಲಿ ಪ್ರಾಣಿ–ಪಕ್ಷಿಗಳಿಗೆ ಕೆರೆ ನೀರು ಆಶ್ರಯವಿದೆ. ಸ್ಥಳೀಯರನ್ನು ಹೊರತುಪಡಿಸಿ, ಹೊರಗಿನರಿಗೆ ದೇವರ ಕಾಡಿಗೆ ಪ್ರವೇಶಕ್ಕೆ ಅವಕಾಶವಿಲ್ಲ. ಇತ್ತೀಚೆಗೆ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗುತ್ತಿದ್ದು, ಗ್ರಾಮಸ್ಥರು ಭಯಭೀತರಾಗಿದ್ದಾರೆ. ಸರ್ಕಾರ ಮತ್ತು ಅರಣ್ಯ ಅಧಿಕಾರಿಗಳು ಕಾಡುಪ್ರಾಣಿ ಹಾವಳಿ ತಡೆಗಟ್ಟಬೇಕು ಎಂದು ಆಗ್ರಹಿಸಿದರು.



ಅಮ್ಮತ್ತಿನಾಡುವಿನಲ್ಲಿ ನಡೆದ ರೈತ ಸಂಘದ ಸಭೆಯಲ್ಲಿ ಸಂಘದ ಗೌರವಾಧ್ಯಕ್ಷ ಕಾವಾಡಿಚಂಡ ಯು.ಗಣಪತಿ ಮಾತನಾಡಿದರು.

ಅಮ್ಮತ್ತಿ ಮುಖ್ಯ ರಸ್ತೆಯಲ್ಲಿ ವಾಹನಗಳು ಅತಿವೇಗವಾಗಿ ಓಡಾಡುವುದರಿಂದ ಸಾರ್ವಜನಿಕರು ಭಯಪಡುವಂತಾಗಿದೆ. ಆದ್ದರಿಂದ ಅಮ್ಮತ್ತಿ ಸರ್ಕಲ್ ಬಳಿಯ ವಿರಾಜಪೇಟೆ, ಒಂಟಿಯಂಗಡಿ, ಸಿದ್ದಾಪುರ, ಪಾಲಿಬೆಟ್ಟ ರಸ್ತೆ ಸೇರಿದಂತೆ ನಾಲ್ಕು ರಸ್ತೆಗೆ ಹಂಪ್ಸ್ ಅಳವಡಿಸಿದರೆ ವಾಹನಗಳ ವೇಗ ಕಡಿಮೆ ಮಾಡಲು ಸಾಧ್ಯ ಎಂದರು.

ಸಭೆಯಲ್ಲಿ ತಾಲೂಕು ಕಚೇರಿ, ಕಂದಾಯ ಹಾಗೂ ಇತರೆ ಇಲಾಖೆ ಕಚೇರಿಗಳಲ್ಲಿ ರೈತರ ಕೆಲಸಗಳನ್ನು ಶೀಘ್ರವಾಗಿ ಮಾಡುವಂತೆ ಮನವಿ ಸಲ್ಲಿಸಲು ತೀರ್ಮಾನಿಸಲಾಯಿತು. ಅಮ್ಮತ್ತಿನಾಡು ರೈತ ಸಂಘದ ಕಾರ್ಯದರ್ಶಿ ಮನೆಯಪಂಡ ಜಿ.ಪೊನ್ನಪ್ಪ, ಜಂಟಿ ಕಾರ್ಯದರ್ಶಿ ಪಳೆಯತಂಡ ಪಿ.ಪಿ.ಹರಿ, ಎನ್.ಡಿ.ವಿವೇಕ್, ಕೆ.ಅಪ್ಪಯ್ಯ ಮತ್ತಿತರರು ಉಪಸ್ಥಿತರಿದ್ದರು.

ಚಾಮರಾಜನಗರ ದಸರಾ ಮಹೋತ್ಸವಕ್ಕೆ ವಿಧ್ಯುಕ್ತ ಚಾಲನೆ

• ಚಾಮರಾಜೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ • ನಂದಿಧ್ವಜಕ್ಕೆ ಪುಷ್ಪಾರ್ಚನೆ

ಚಾಮರಾಜನಗರ, ಅ.7–ಜಿಲ್ಲಾ ಕೇಂದ್ರದಲ್ಲಿ ಮೂರು ದಿನ ಹಮ್ಮಿಕೊಂಡಿರುವ ಚಾಮರಾಜನಗರ ದಸರಾ ಮಹೋತ್ಸವಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೋಮವಾರ ವಿಧ್ಯುಕ್ತ ಚಾಲನೆ ನೀಡಿದರು.

ಮೊದಲಿಗೆ ನಗರದ ಶ್ರೀ ಚಾಮರಾಜೇಶ್ವರ ದೇವಾಲಯದಲ್ಲಿ ಸಚಿವ ವೆಂಕಟೇಶ್, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಎ.ಆರ್.ಕೃಷ್ಣಮೂರ್ತಿ, ಎಂ.ಆರ್.ಮಂಜುನಾಥ್ ಸೇರಿದಂತೆ ಇತರೆ ಗಣ್ಯರು ವಿಶೇಷ ಪೂಜೆ ನೆರವೇರಿಸಿ ದಸರಾ ಮಹೋತ್ಸವಕ್ಕೆ ಚಾಲನೆ ನೀಡಿದರು. ಚಾಮರಾಜೇಶ್ವರ, ಚಾಮುಂಡೇಶ್ವರಿ, ಕೆಂಪನಂಜಾಂಬ ಅಮ್ಮನವರಿಗೆ ಪೂಜೆ ಸಲ್ಲಿಸಲಾಯಿತು. ಬಳಿಕ ನಂದಿಧ್ವಜ ಕಂಬಕ್ಕೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ಮಾಡಲಾಯಿತು.

ಬಳಿಕ ಚಾಮರಾಜೇಶ್ವರ ದೇವಾಲಯ ಮುಂಭಾಗ ಆಯೋಜಿಸಿದ್ದ ಸ್ಥಳದಲ್ಲೇ ಚಿತ್ರ ಬಿಡಿಸುವ ಸ್ಪರ್ಧೆ ಹಾಗೂ ಚಿತ್ರಕಲಾ ಪ್ರದರ್ಶನಕ್ಕೆ ಸಚಿವರು, ಶಾಸಕರು ಹಾಗೂ ಇತರೆ ಗಣ್ಯರು ಚಿತ್ರಕ್ಕೆ ಬಣ್ಣ ಹಚ್ಚುವ ಮೂಲಕ ಚಾಲನೆ ನೀಡಿದರು. ಅಲ್ಲದೆ, ದೇವಾಲಯ ಉದ್ಯಾನದ ಕನ್ನಡತಾಯಿ ಭುವನೇಶ್ವರಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ನಂತರ ದೇವಾಲಯ ಮುಂಭಾಗದ ದಸರಾ ಮಹೋತ್ಸವದ ಮುಖ್ಯ ವೇದಿಕೆಯಲ್ಲಿ ಸಚಿವ ಕೆ.ವೆಂಕಟೇಶ್ ಡೊಳ್ಳು ಬಾರಿಸಿ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಇದೇ ವೇಳೆ ಮಾತನಾಡಿದ ಸಚಿವ ಕೆ.ವೆಂಕಟೇಶ್, ಮೈಸೂರು ದಸರಾವನ್ನು ಕಳೆದ 400 ವರ್ಷಗಳಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಮೈಸೂರಿನಿಂದ ಚಾಮರಾಜನಗರ ಪ್ರತ್ಯೇಕ ಜಿಲ್ಲೆಯಾಗಿ ವಿಭಜನೆಯಾದ ನಂತರ ಇಲ್ಲಿಯೂ ದಸರಾ ಮುಂದುವರೆಸುವ ನಿಟ್ಟಿನಲ್ಲಿ ಮೈಸೂರಿನ ಮಾದರಿಯಲ್ಲಿಯೇ ದಸರಾ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ ಎಂದರು.

ಈ ಬಾರಿ ರಾಜ್ಯದೆಲ್ಲೆಡೆ ಸಾಕಷ್ಟು ಮಳೆಯಾಗಿದ್ದು, ಜಿಲ್ಲೆಯಲ್ಲೂ ಮಳೆ–ಬೆಳೆ ಚೆನ್ನಾಗಿ ಆಗಿರುವುದರಿಂದ ಅದ್ದೂರಿ ಚಾಮರಾಜನಗರ ದಸರಾ ಆಚರಿಸುವಂತೆ ಮುಖ್ಯಮಂತ್ರಿ ತಿಳಿಸಿದ್ದಾರೆ. ಈ ಬಾರಿ ಯುವ ದಸರಾ, ಮಹಿಳಾ ದಸರಾ, ರೈತ ದಸರಾ, ಪಾರಂಪರಿಕ ನಡಿಗೆ, ಮ್ಯಾರಥಾನ್ ಸೇರಿದಂತೆ ಹಲವಾರು ವಿಭಿನ್ನ ಕಾರ್ಯಕ್ರಮಗಳನ್ನು ಜಿಲ್ಲಾಡಳಿತ ರೂಪಿಸಿದೆ. ಜಿಲ್ಲೆಯಲ್ಲಿ ಸಾಕಷ್ಟು ಕಲಾವಿದರಿದ್ದಾರೆ. ದಸರಾ ಕಾರ್ಯಕ್ರಮಗಳಲ್ಲಿ ಕಲಾವಿದರನ್ನು ಪ್ರೋತ್ಸಾಹಿಸುವ ಸಲುವಾಗಿ ಅವರೆಲ್ಲರಿಗೂ ಸಮಾನ ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.




ಚಾಮರಾಜೇಶ್ವರ ದೇವಾಲಯದಲ್ಲಿ ಚಾಮರಾಜನಗರ ದಸರಾ ಮಹೋತ್ಸವಕ್ಕೆ ಚಾಲನೆ.

ಸಂಸದ ಸುನೀಲ್ ಬೋಸ್, ಶಾಸಕ ಎಚ್.ಎಂ.ಗಣೇಶ್ ಪ್ರಸಾದ್, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕಾವೇರಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಪಿ.ಮರಿಸ್ವಾಮಿ, ರಾಜ್ಯ ಉಗ್ರಾಣ ನಿಗಮ ಅಧ್ಯಕ್ಷ ಎಸ್.ಜಯಣ್ಣ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಗ್ಯಾರಂಟಿ ಯೋಜನ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಉಪಾಧ್ಯಕ್ಷೆ ಮಮತಾ, ಸದಸ್ಯರಾದ ಕುಮುದಾ ಕೇಶವಮೂರ್ತಿ, ಅಬ್ರಾರ್ ಅಹಮದ್, ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಜಿಪಂ ಸಿಇಓ ಮೋನಾ ರೋತ್, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಉಪವಿಭಾಗಾಧಿಕಾರಿ ಮಹೇಶ್, ಇತರರು ಉಪಸ್ಥಿತರಿದ್ದರು.



ವಿಶೇಷ ಪೂಜೆಯೊಂದಿಗೆ ಚಾಮರಾಜೇಶ್ವರ ಖಾಸಗಿ ದರ್ಬಾರ್




ಖಾಸಗಿ ದರ್ಬಾರ್‌ನಲ್ಲಿ ಕೆಂಪನಂಜಾಂಬ ಸಮೇತ ಚಾಮರಾಜೇಶ್ವರಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಚಾಮರಾಜನಗರ, ಅ.7– ದಸರಾ ಮಹೋತ್ಸವದ ಅಂಗವಾಗಿ ಸೋಮವಾರ ನಗರದ ಜನನ ಮಂಟಪದಲ್ಲಿ ಖಾಸಗಿ ದರ್ಬಾರ್‌ನಲ್ಲಿ ಕೆಂಪನಂಜಾಂಬ ಸಮೇತ ಶ್ರೀ ಚಾಮರಾಜೇಶ್ವರಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

40 ವರ್ಷಗಳ ನಂತರ ಕೆಂಪನಂಜಾಂಬ ಸಮೇತ ಚಾಮರಾಜೇಶ್ವರ ಹೆಸರಿನಲ್ಲಿ ಖಾಸಗಿ ದರ್ಬಾರ್ ನಡೆಯಿತು. ಸ್ವಾಮಿಗೆ ಬಹುಪರಾಕ್ ಹೇಳುವ ಮೂಲಕ ವಿಶೇಷ ಪೂಜೆ ಸಲ್ಲಿಸಲಾಯಿತು. ಜಿಲ್ಲಾ ಸಶಸ್ತ್ರ ಪಡೆ ಸಬ್‌ಇನ್ಸ್‌ಪೆಕ್ಟರ್ ಬಿ.ಎಂ.ಪರಶಿವಮೂರ್ತಿ ನೇತೃತ್ವದಲ್ಲಿ ಪೊಲೀಸರು ಗೌರವ ವಂದನೆ ಸಲ್ಲಿಸಿದರು. ಬಹಳಷ್ಟು ವರ್ಷಗಳ ಬಳಿಕ ನಡೆದ ವಿಶೇಷ ಖಾಸಗಿ ದರ್ಬಾರ್ ಅನ್ನು ಸಾಕಷ್ಟು ಜನ ಹೊರಗೆ ನಿಂತು ವೀಕ್ಷಿಸಿ ಭಕ್ತಿ ಮೆರೆದರು.

ಇದೇ ವೇಳೆ ಖಾಸಗಿ ದರ್ಬಾರ್‌ನಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಶಿಲ್ಪನಾಗ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ನಗರಸಭೆ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷೆ ಮಮತ ಬಾಲಸುಬ್ರಹ್ಮಣ್ಯಂ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ಜಿಪಂ ಸಿಇಓ ಮೋನಾರೋತ್, ಎಸ್ಪಿ ಡಾ.ಬಿ.ಟಿ.ಕವಿತಾ, ಎಡಿಸಿ ಗೀತಾ ಹುಡೇದ, ನಗರಸಭೆ ಪೌರಾಯುಕ್ತ ರಾಮ್‌ದಾಸ್, ದೇವಸ್ಥಾನ ಮುಖ್ಯ ಅರ್ಚಕ ರಾಮಕೃಷ್ಣ ಭಾರಧ್ವಜ್ ವಿವಿಧ ಸಂಘಟನೆ ಮುಖಂಡರು ಸ್ವಾಮಿಗೆ ನಮಿಸಿದರು.

ಕಣ್ಮನ ಸೆಳೆದ ಫಲಪುಷ್ಪ ಪ್ರದರ್ಶನ





ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಗಮನ ಸೆಳೆದ ಹಣ್ಣುಗಳ ವಿವಿಧ ಕಲಾಕೃತಿಗಳು.

ಚಾಮರಾಜನಗರ: ಚಾಮುಂಡೇಶ್ವರಿ ದೇವಿ ವಿಗ್ರಹದೊಂದಿಗೆ ನಗರದಲ್ಲಿ ಜಿಲ್ಲಾಡಳಿತ ಭವನದಿಂದ ಚಾಮರಾಜೇಶ್ವರ ದೇವಾಲಯದವರೆಗೆ ಆಯೋಜಿಸಿದ್ದ ದಸರಾ ಮೆರವಣಿಗೆಯಲ್ಲಿ ಜಿಲ್ಲೆಯ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಹಾಗೂ ವಿವಿಧ ಇಲಾಖೆಗಳ ಸ್ತಬ್ಧಚಿತ್ರಗಳು ಜನಮನ ಸೂರೆಗೊಂಡವು. ಅಲ್ಲದೆ, ಜಿಲ್ಲಾಡಳಿತ ಭವನ ಆವರಣದಲ್ಲಿ ಫಲಪುಷ್ಪ ಪ್ರದರ್ಶನ ಕಣ್ಮನ ಸೆಳೆಯುತ್ತಿದೆ.

ಡೊಳ್ಳು ಕುಣಿತ, ಗೊರವರ ಕುಣಿತ, ವೀರಗಾಸೆ, ಕಂಸಾಳೆ ನೃತ್ಯ, ನಾದಸ್ವರ, ನಂದಿಕಂಬ, ಬ್ಯಾಂಡ್‌ಸೆಟ್ ವಾದನ, ಕೀಲುಕುದುರೆ, ಗಾರುಡಿಗ ಗೊಂಬೆ, ಮಾರಮ್ಮನ ಕುಣಿತ, ಸುಗ್ಗಿ ಕುಣಿತ, ತಮಟೆ ವಾದನ ದೊಣ್ಣೆ ವರಸೆ, ಹುಲಿ ವೇಷಧಾರಿಗಳು ಸೇರಿದಂತೆ ವಿವಿಧ ಸಾಂಸ್ಕೃತಿಕ ಕಲಾತಂಡಗಳು ದಸರಾ ಮೆರೆವಣಿಗೆಗೆ ವಿಶೇಷ ಮೆರಗು ತಂದವು.

ವಿವಿಧ ಇಲಾಖೆಗಳ ಆಕರ್ಷಕ ಸ್ತಬ್ಧಚಿತ್ರಗಳು ದಸರಾ ಮೆರವಣಿಗೆ ಇಮ್ಮಡಿಗೊಳಿಸಿದ್ದು ವಿಶೇಷವಾಗಿತ್ತು. ಮೆರವಣಿಗೆ ಕೇಂದ್ರ ಬಿಂದುವಾಗಿದ್ದ ನಾಡ ಅಧಿದೇವತೆ ಚಾಮುಂಡೇಶ್ವರಿ ದೇವಿ ವಿಗ್ರಹಕ್ಕೆ ಸಚಿವ ಕೆ.ವೆಂಕಟೇಶ್, ಇತರೆ ಗಣ್ಯರು ಪುಷ್ಪಾರ್ಚನೆ ನೆರವೇರಿಸಿದರು.

ಇದೇ ವೇಳೆ ಸಚಿವರು, ಶಾಸಕರು, ಗಣ್ಯರು ಜಿಲ್ಲಾಡಳಿತ ಭವನ ಮುಂಭಾಗದ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಬಳಿಕ ಮೂರು ದಿನಗಳ ಫಲಪುಷ್ಪ ಪ್ರದರ್ಶನಕ್ಕೆ ಚಾಲನೆ ನೀಡಲಾಯಿತು. ಫಲಪುಷ್ಪ ಪ್ರದರ್ಶನದಲ್ಲಿ ವಿವಿಧ ಕಲಾಕೃತಿಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಗ್ರಾಮೀಣ ದಸರಾ ಕ್ರೀಡಾಕೂಟಕ್ಕೆ ಸಚಿವರು ಕ್ರಿಕೆಟ್ ಆಡುವ ಮೂಲಕ ಚಾಲನೆ ನೀಡಿದರು.

ಯುವ ದಸರಾಗೆ ವರ್ಣರಂಜಿತ ಚಾಲನೆ



ಯುವ ದಸರಾಗೆ ನಟ ನಾಗ್‌ಭೂಷಣ್ ಚಾಲನೆ ನೀಡಿದರು.

ಚಾಮರಾಜನಗರ, ಅ.7– ಚೆಲುವ ಚಾಮರಾಜನಗರ ದಸರಾ ಮಹೋತ್ಸವದ ಯುವ ದಸರಾಗೆ ನಟ ನಾಗ್‌ಭೂಷಣ್ ಚಾಲನೆ ನೀಡಿದರು.

ನಗರದ ಚಾಮರಾಜೇಶ್ವರ ದೇವಾಲಯ ಮುಂಭಾಗದ ವರ್ಣರಂಜಿತ ವೇದಿಕೆಯಲ್ಲಿ ಯುವ ದಸರಾಗೆ ಚಾಲನೆ ನೀಡಿ ಮಾತನಾಡಿದ ನಟ ನಾಗ್‌ಭೂಷಣ್, ಕೊಳ್ಳೇಗಾಲ ತಾಲೂಕಿನ ಟಗರಪುರದ ನಾನು ನಗರವನ್ನು ಚೆನ್ನಾಗಿ ಬಲ್ಲೆ. ಇಲ್ಲಿನ ನವೋದಯ ವಿದ್ಯಾಲಯದಲ್ಲಿ ಓದಿದ್ದೇನೆ. ನನಗೆ ನಮ್ಮ ಜಿಲ್ಲೆಯ ಬಗ್ಗೆ ಹೆಮ್ಮೆ ಇದೆ. ಹೆಚ್ಚು ಹುಲಿಗಳಿರುವ ನಾಡು ನಮ್ಮದು. ಹಿಂದುಳಿದ ಜಿಲ್ಲೆ ಎಂಬ ಹಣೆಪಟ್ಟಿಯನ್ನು ಹೋಗಲಾಡಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದರು.

ಚಾಮರಾಜನಗರ ಜಿಲ್ಲಾ ರಾಯಭಾರಿಯಾಗಿದ್ದ ಅಪ್ಪು ಅವರಿಗೆ ನಗರ ಎಂದರೆ ತುಂಬಾ ಪ್ರೀತಿ, ಅಕ್ಕರೆ. ಇಲ್ಲಿನ ಹುಡುಗರನ್ನು ನಗರದ ಭಾಷೆ ಸೊಗಡಿನಲ್ಲೇ ಮಾತನಾಡಿಸುತ್ತಿದ್ದರು ಎಂದರು.



ನಟ ನಾಗ್‌ಭೂಷಣ್ ಗಾಯನ.

ಗಾನ ಮಾಧುರ್ಯಕ್ಕೆ ಮನಸೋತ ಸಭಿಕರು

- ಬಾಲಿವುಡ್ ಗಾಯಕರಾದ ಹಂಸಿಕಾ ಅಯ್ಯರ್, ವಿಪಿನ್ ಅನೇಜರ ಸಂಗೀತದ ಹೊನಲು
- ಅರಮನೆ ವೇದಿಕೆಯ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಸಂಭ್ರಮಿಸಿದ ಜನ





ಅರಮನೆ ವೇದಿಕೆಯಲ್ಲಿ ಪ್ರೇಕ್ಷಕರ ಮನಸೂರೆಗೊಂಡ 'ದಕ್ಷಯಜ್ಞ' ಯಕ್ಷಗಾನ ಪ್ರಸಂಗ

ಮೈಸೂರು,ಅ.7(ಪಿಎಂ)– ಬಾಲಿವುಡ್ ಗಾಯಕರಾದ ಹಂಸಿಕಾ ಅಯ್ಯರ್, ವಿಪಿನ್ ಅನೇಜ ಅವರ ಗಾನ ಮಾಧುರ್ಯ ಸೇರಿದಂತೆ ಜಾನಪದ ನೃತ್ಯ, ಭರತನಾಟ್ಯ, ಭಾವಗೀತೆ, ಯಕ್ಷಗಾನ ಹಾಗೂ ವಾದ್ಯ ಸಂಗೀತಕ್ಕೆ ಸಭಿಕರು ಸಂಭ್ರಮಿಸಿದರು.

ದಸರಾ ಮಹೋತ್ಸವ ಪ್ರಯುಕ್ತ ಸಾಂಸ್ಕೃತಿಕ ಉಪಸಮಿತಿ ವತಿಯಿಂದ ಅರಮನೆ ವೇದಿಕೆಯಲ್ಲಿ ಹಮ್ಮಿಕೊಂಡಿರುವ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ಐದನೇ ದಿನವಾದ ಸೋಮವಾರ ಸಂಜೆ ಇಂತಹ ಗಾನ–ನೃತ್ಯ ಸೇರಿದಂತೆ ವಿವಿಧ ಕಲಾ ಪ್ರದರ್ಶನದ ಸೊಬಗು ಸಭಿಕರ ಮನಮುದಗೊಳಿಸಿ, ಸಂಭ್ರಮಿಸುವಂತೆ ಮಾಡಿತು.

ಕನ್ನಡ ಸಿನಿಮಾ ಹಾಡುಗಳಿಗೂ ಧ್ವನಿ ನೀಡಿರುವ ಖ್ಯಾತ ಗಾಯಕಿ ಹಂಸಿಕಾ ಅಯ್ಯರ್ ಮತ್ತು ಪ್ರಸಿದ್ಧ ಗಾಯಕ ವಿಪಿನ್ ಅನೇಜಾ ಜೊತೆಯಾಗಿ ಸಾದರಪಡಿಸಿದ ಸಂಗೀತ ಕಾರ್ಯಕ್ರಮ ಶೋತೃಗಳನ್ನು ಸಂಗೀತದ ಅಲೆಯಲ್ಲಿ ತೇಲಿಸಿತು.

ಆರಂಭದಲ್ಲಿ 'ವಕ್ರತುಂಡ ಮಹಾಕಾಯ ಸೂರ್ಯಕೋಟಿ ಸಮಪ್ರಭ...', 'ಸೀಯಾ ರಾಮ ಸೀಯಾ ರಾಮ ಜಯಿ ಜಯಿ ರಾಮ್...' ಭಕ್ತಿಗೀತೆಗಳನ್ನು ಇಬ್ಬರು ಗಾಯಕರು ಪ್ರಸ್ತುತಪಡಿಸಿ ಸಭಿಕರಲ್ಲಿ ಭಕ್ತಿಭಾವ ಉಂಟು ಮಾಡಿದರು. 'ಮಾದೇವ ಮಾದೇವ.. ಸೋಜುಗಾದ ಸೂಜುಮಲ್ಲಿಗೆ..' ಗೀತೆಯನ್ನು ಹಂಸಿಕಾ ಅಯ್ಯರ್ ಹಾಡಿ ಭಕ್ತಿಯ ಕಾರಂಜಿ ಹೊಮ್ಮಿಸಿದರು. ಅಲ್ಲದೆ, ಮಲೆಯಾಳಂ ಭಾಷೆಯ ಚಾರ್ಲಿ ಸಿನಿಮಾದ ಹಾಡು ಸೇರಿದಂತೆ ವಿವಿಧ ಗೀತೆಗಳನ್ನು ಸಾದರಪಡಿಸಿದ ಇವರು, ಸಭಿಕರ ಎದೆಗೆ ಲಗ್ಗೆಯಿಟ್ಟರು. ವಿಪಿನ್ ಅನೇಜಾ ಸಹ ತಮ್ಮ ಗಾಯನದ ಮೂಲಕ ಸಂಗೀತಾಸಕ್ತರಲ್ಲಿ ಮೋಡಿ ಮಾಡಿದರು.

ಅಲ್ಲದೆ, ಇದೇ ವೇದಿಕೆಯಲ್ಲಿ ನಡೆದ 'ದಕ್ಷಯಜ್ಞ' ಯಕ್ಷಗಾನ ಪ್ರಸಂಗ ಸಭಿಕರ ಮನಸೂರೆಗೊಂಡಿತು. ಈಶ್ವರನು ದಕ್ಷನನ್ನು ವೀರಭದ್ರನ ಮೂಲಕ ಸಂಹರಿಸುವ ಪ್ರಸಂಗ ಹೊಂದಿರುವ ಪೌರಾಣಿಕ ಕಥೆಯನ್ನು ಉತ್ತರ ಕನ್ನಡ ಜಿಲ್ಲೆಯ ಕೆರೆಮನೆ ಶ್ರೀ ಇಡಗುಂಜಿ ಗಣಪತಿ ಯಕ್ಷಗಾನ ಮಂಡಳಿಯು ರಸಭರಿತವಾಗಿ ಅನಾವರಣಗೊಳಿಸಿ ಪ್ರೇಕ್ಷಕರನ್ನು ರಂಜಿಸಿತು.

ಅಂತೆಯೇ ಹೆಚ್.ರಾಜೇಶ್ ಮತ್ತು ತಂಡವು ಭಾವಗೀತೆಗಳನ್ನು ಪ್ರಸ್ತುತಪಡಿಸಿ ಸಭಿಕರನ್ನು ಭಾವಲೋಕದಲ್ಲಿ ತೇಲಿಸಿತು. ಆರಂಭದಲ್ಲಿ ತಾಯಿ ಚಾಮುಂಡೇಶ್ವರಿ ಮತ್ತು ಗಣೇಶನ ಆರಾಧಿಸುವ ಗೀತೆಗಳನ್ನು ಹಾಡಿ ಸಭಿಕರಲ್ಲಿ ಭಕ್ತಿಭಾವ ಮೂಡಿಸಿತು. ನಂತರ ವಿವಿಧ ಭಾವಗೀತೆಗಳನ್ನು ಹಾಡಿ ಶೋತೃಗಳನ್ನು ಭಾವಗಳೆಂಬ ಬಾನಂಗಳದಲ್ಲಿ ಹಾರಾಡಿಸಿತು.

ಇದಕ್ಕೂ ಮುನ್ನ ಕರ್ನಾಟಕ ಕಲಾಶ್ರೀ ಡಾ.ಕೆ.ಕುಮಾರ್ ಮತ್ತು ಅವರ ತಂಡದ ಸದಸ್ಯರು ನಡೆಸಿಕೊಟ್ಟ ಭರತನಾಟ್ಯ ಪ್ರದರ್ಶನ ಪ್ರೇಕ್ಷಕರ ಮನಮೋಹಗೊಳಿಸಿತು. ಅದೇ ರೀತಿ ಎಂ.ಮಹದೇವ ಮತ್ತು ಅವರ ತಂಡದವರು ಬೀಸು ಕಂಸಾಳೆ ಮೂಲಕ ಪ್ರೇಕ್ಷಕರಲ್ಲಿ ರೋಮಾಂಚನ ಉಂಟು ಮಾಡಿದರು.



ಖ್ಯಾತ ಗಾಯಕರಾದ ಹಂಸಿಕಾ ಅಯ್ಯರ್, ವಿಪಿನ್ ಅನೇಜಾ ಗಾಯನ ಮೋಡಿ.

ಯಕ್ಷಗಾನ ಪ್ರದರ್ಶನದ ವೇಳೆ ಉಪಸ್ಥಿತರಿದ್ದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಯಕ್ಷಗಾನ ಕಲಾವಿದರಿಗೆ ಅಭಿನಂದನಾ ಪತ್ರ ಮತ್ತು ಸ್ಮರಣಿಕೆ ನೀಡಿದರು. ಇದೇ ವೇಳೆ ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಸಹ ಇದ್ದರು. ಸಾಂಸ್ಕೃತಿಕ ಉಪಸಮಿತಿ ಅಧ್ಯಕ್ಷ ಅಹಿಂದ ಜವರಪ್ಪ ಹಾಗೂ ಸದರಿ ಸಮಿತಿ ಸದಸ್ಯರು ಹಾಜರಿದ್ದರು ಕಾರ್ಯಕ್ರಮ ನೀಡಿದ ಕಲಾತಂಡಗಳಿಗೆ ಸ್ಮರಣಿಕೆ ನೀಡಿದರು. ಪಲ್ಲವಿ ಮತ್ತು ಅನುಷಾ ಕಾರ್ಯಕ್ರಮ ನಿರೂಪಿಸಿದರು.

ನಂದಿನಿ ತುಪ್ಪಕ್ಕೆ ಭಾರೀ ಡಿಮ್ಯಾಂಡ್

ಹೆಚ್ಚುವರಿ 250 ಟನ್ ತುಪ್ಪಕ್ಕೆ ತಿರುಪತಿ ದೇಗುಲ ಬೇಡಿಕೆ



ಬೆಂಗಳೂರು, ಅ.7– ತಿರುಪತಿ ಲಡ್ಡು ಲಡಾಯಿ ಬಳಿಕ ರಾಜ್ಯದ ಹೆಮ್ಮೆಯ ನಂದಿನಿ ಬ್ರ್ಯಾಂಡ್ ತುಪ್ಪಕ್ಕೆ ದೇಶದೆಲ್ಲೆಡೆ ಭಾರೀ ಬೇಡಿಕೆ ಸೃಷ್ಟಿಯಾಗಿದ್ದು, ತಿರುಪತಿ ತಿರುಮಲ ದೇವಸ್ಥಾನ (ಟಿಟಿಡಿ) ಆಡಳಿತ ಮಂಡಳಿಯು ಹೆಚ್ಚುವರಿ ತುಪ್ಪ ಪೂರೈಸುವಂತೆ ಕೆಎಂಎಫ್‌ಗೆ ಕೋರಿಕೆ ಸಲ್ಲಿಸಿದೆ.

ತಿರುಪತಿ ಲಡ್ಡು ತಯಾರಿಕೆಗೆ ಸುಮಾರು 20 ವರ್ಷಗಳಿಂದ ನಂದಿನಿ ತುಪ್ಪವನ್ನೇ ಬಳಸಲಾಗುತ್ತಿತ್ತು. ಆದರೆ, 2022–23ನೇ ಸಾಲಿನಲ್ಲಿ ದರದ ವಿಚಾರದಲ್ಲಿ ನಂದಿನಿ ತುಪ್ಪದ ಪೂರೈಕೆ ಸ್ಥಗಿತವಾಗಿತ್ತು. ನಂದಿನಿ ತುಪ್ಪದ ದರ ಹೆಚ್ಚಿದ್ದ ಕಾರಣಕ್ಕೆ ಕೆಎಂಎಫ್‌ನಿಂದ ಟಿಟಿಡಿ ತುಪ್ಪ ಖರೀದಿ ನಿಲ್ಲಿಸಿತ್ತು.

ತಿರುಪತಿ ಲಡ್ಡು ತಯಾರಿಕೆಯಲ್ಲಿ ಪ್ರಾಣಿಗಳ ಕೊಬ್ಬು ಬಳಸಿರುವ ಆರೋಪ ಇತ್ತೀಚೆಗೆ ಕೇಳಿಬಂದಿತ್ತು. ಈ ಸಂಗತಿಯು ದೇಶದಲ್ಲಿ ಭಾರಿ ಸಂಚಲನ ಸೃಷ್ಟಿಸಿತ್ತು. ಹಿಂದೂಗಳ ಧಾರ್ಮಿಕ ಭಾವನೆಗೆ ಧಕ್ಕೆಯಾಗಿದೆ ಎಂದು ಭಕ್ತರು ಆಕ್ರೋಶ ಹೊರಹಾಕಿದ್ದರು. ಈ ವಿವಾದದ ಬೆನ್ನಲ್ಲೇ ಲಡ್ಡು ತಯಾರಿಕೆಗೆ 2024–25ನೇ ಸಾಲಿನಲ್ಲಿ 350 ಟನ್ ನಂದಿನಿ ತುಪ್ಪ ಸರಬರಾಜು ಮಾಡುವಂತೆ ಕೆಎಂಎಫ್‌ಗೆ ಟಿಟಿಡಿ ಟೆಂಡರ್ ಮೂಲಕ ಬೇಡಿಕೆ ಇಟ್ಟಿತ್ತು.

ಟಿಟಿಡಿ ಕೋರಿಕೆಗೆ ಸಮ್ಮತಿಸಿದ್ದ ಕೆಎಂಎಫ್, ಕೆ.ಜಿ.ಗೆ 470 ರೂ. ದರದಂತೆ ಸೆಪ್ಟೆಂಬರ್ 20 ರಿಂದ ತುಪ್ಪ ಪೂರೈಸಲು ಒಪ್ಪಿಕೊಂಡಿತ್ತು. ಟೆಂಡರ್ ಷರತ್ತಿನ ಪ್ರಕಾರ ಮೂರು ತಿಂಗಳಲ್ಲಿ 350 ಮೆಟ್ರಿಕ್ ಟನ್ ನಂದಿನಿ ತುಪ್ಪ ಸರಬರಾಜು ಮಾಡಬೇಕಿದೆ. ಆದರೆ, ಒಂದೇ ತಿಂಗಳಲ್ಲಿ 250 ಟನ್ ತುಪ್ಪ ಪೂರೈಕೆ ಮಾಡಲಾಗಿದೆ ಈ ಮೂಲಕ ತಿರುಪತಿ ತಿಮ್ಮಪ್ಪನ ದೇವಸ್ಥಾನದ ಲಡ್ಡಿನಲ್ಲಿ ಮತ್ತೆ ನಂದಿನಿ ತುಪ್ಪದ ಘಮಲು ಮೂಡಿದೆ.

ತಿರುಪತಿ ತಿಮ್ಮಪ್ಪನ ದೇವಸ್ಥಾನದಲ್ಲಿ ಪ್ರಸಾದವಾಗಿ ನೀಡುವ ಲಡ್ಡುವಿನ ರುಚಿ ಮೊದಲಿನಂತೆ ಇಲ್ಲ ಎನ್ನುವ ಅಭಿಪ್ರಾಯ ಭಕ್ತರಿಂದ ಕೇಳಿಬಂದಿತ್ತು. ನಂದಿನಿ ತುಪ್ಪ ಬಳಸುವ ಸಂದರ್ಭದಲ್ಲಿ ಲಡ್ಡು ಪರಿಮಳ ಅದ್ಭುತವಾಗಿತ್ತು, ರುಚಿಯೂ ಅಮೋಘವಾಗಿತ್ತು. ಆದರೆ, ಕರ್ನಾಟಕದ ನಂದಿನಿ ತುಪ್ಪ ಬಳಸುವುದನ್ನು ನಿಲ್ಲಿಸಿದ ನಂತರದಲ್ಲಿ ಮೊದಲಿನ ಪರಿಮಳ ಹಾಗೂ ಸ್ವಾದ ಇರಲಿಲ್ಲ ಎಂದು ಭಕ್ತರು ಬೇಸರ ವ್ಯಕ್ತಪಡಿಸಿದ್ದರು. ಲಡ್ಡು ಗುಣಮಟ್ಟ ಕುಸಿಯುವುದಕ್ಕೆ ನಂದಿನಿ ತುಪ್ಪ ಬಳಸದೆ ಅನ್ಯ ತುಪ್ಪವನ್ನು ಬಳಸಿದ್ದೂ ಒಂದು ಕಾರಣ ಎಂಬ ಅಭಿಪ್ರಾಯ ವ್ಯಕ್ತವಾಗಿತ್ತು.

ರಾಜ್ಯದಲ್ಲಿರುವ ಮುಜರಾಯಿ ಇಲಾಖೆ ವ್ಯಾಪ್ತಿಯ ದೇವಾಲಯಗಳಲ್ಲಿ ಪ್ರಸಾದ ತಯಾರಿಕೆಗೆ ಕಡ್ಡಾಯವಾಗಿ ನಂದಿನಿ ತುಪ್ಪ ಬಳಸುವಂತೆ ರಾಜ್ಯ ಸರ್ಕಾರ ಈಗಾಗಲೇ ಆದೇಶ ಹೊರಡಿಸಿದೆ. ಧರ್ಮಸ್ಥಳ, ಕುಕ್ಕೆ ಸುಬ್ರಮಣ್ಯ, ಕೊಲ್ಲೂರು ಮೂಕಾಂಬಿಕೆ, ಕಟೀಲು ದುರ್ಗಾ ಪರಮೇಶ್ವರಿ ದೇವಸ್ಥಾನ ಸೇರಿದಂತೆ ರಾಜ್ಯದ ಪ್ರಸಿದ್ಧ ದೇವಸ್ಥಾನಗಳಲ್ಲಿ ಈಗಾಗಲೇ ಪ್ರಸಾದಕ್ಕೆ ನಂದಿನಿ ತುಪ್ಪವನ್ನೇ ಬಳಸಲಾಗುತ್ತಿದೆ ಅಲ್ಲದೆ, ರಿಟೇಲ್ ಮಾರುಕಟ್ಟೆಯಲ್ಲಿ 2,500 ಟನ್ ತುಪ್ಪ ಮಾರಾಟವಾಗುತ್ತಿದೆ.

ಈ ನಡುವೆ ಟಿಟಿಡಿ ಆಡಳಿತ ಮಂಡಳಿಯು ಇದೀಗ ಮತ್ತೆ ಹೆಚ್ಚುವರಿಯಾಗಿ 250 ಟನ್ ನಂದಿನಿ ತುಪ್ಪಕ್ಕೆ ಕಳೆದ ವಾರ ಕೋರಿಕೆ ಸಲ್ಲಿಸಿದೆ. 350 ಟನ್ ತುಪ್ಪದ ಟೆಂಡರ್ ಕರಾರಿನಂತೆಯೇ ಅದೇ ಬೆಲೆಯಲ್ಲೇ ಕೆಎಂಎಫ್ 250 ಟನ್ ತುಪ್ಪ ಪೂರೈಸಲಿದೆ ಒಕ್ಕೂಟದಲ್ಲಿ ಸುಮಾರು 7,500 ಟನ್ ತುಪ್ಪದ ದಾಸ್ತಾನು ಇದ್ದು, ಟಿಟಿಡಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ತುಪ್ಪಕ್ಕೆ ಬೇಡಿಕೆ ಸಲ್ಲಿಸಿದರೂ ಪೂರೈಸಲು ಸಿದ್ಧರಿದ್ದೇವೆ ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಜಗದೀಶ್ ತಿಳಿಸಿದ್ದಾರೆ.

ಲಡ್ಡು ತಯಾರಿಕೆಗೆ ಗುಣಮಟ್ಟದ ತುಪ್ಪ ಬಳಕೆ ವಿಚಾರದಲ್ಲಿ ರಾಜಿ ಪ್ರಶ್ನೆಯೇ ಇಲ್ಲ. ಅಗತ್ಯವಿದ್ದರೆ ಹೆಚ್ಚುವರಿಯಾಗಿ ನಂದಿನಿ ತುಪ್ಪ ಖರೀದಿಸಲಾಗುತ್ತದೆ. ಈ ನಿಟ್ಟಿನಲ್ಲಿ ಹೊಸದಾಗಿ ಟೆಂಡರ್ ಕರೆಯಲಾಗುತ್ತದೆ ಎಂದು ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಜೆ.ಶ್ಯಾಮಲಾರಾವ್ ಹೇಳಿದ್ದಾರೆ.

ಹಿರಿಯರ ದಸರಾ ಸಂಭ್ರಮ: ಆಟೋಟ ಸ್ಪರ್ಧೆಯಲ್ಲಿ ಉತ್ಸಾಹ



ಹಿರಿಯ ನಾಗರಿಕರಿಗೆ ಆಯೋಜಿಸಿದ್ದ ವಿವಿಧ ರೀತಿಯ ಆಟೋಟ ಸ್ಪರ್ಧೆಯಲ್ಲಿ ವೃದ್ಧರೊಬ್ಬರು ಗುಂಡು ಎಸೆದರು.

ಮೈಸೂರು, ಅ.7(ಬಿಎಲ್‌ಯು) ದಸರಾ ಪ್ರಯುಕ್ತ ಮಹಿಳಾ ಮತ್ತು ಮಕ್ಕಳ ದಸರಾ ಉಪ ಸಮಿತಿ ಹಿರಿಯ ನಾಗರಿಕರಿಗೆ ಆಯೋಜಿಸಿದ್ದ ವಿವಿಧ ರೀತಿಯ ಆಟೋಟ ಸ್ಪರ್ಧೆಯಲ್ಲಿ ವೃದ್ಧರು ಉತ್ಸಾಹದಿಂದ ಭಾಗವಹಿಸಿದ್ದರು.

ನಗರದ ಜೆ.ಕೆ.ಮೈದಾನದಲ್ಲಿ ನಡೆದ ವಿವಿಧ ಸ್ಪರ್ಧೆಯಲ್ಲಿ 80 ಕ್ಕೂ ಹೆಚ್ಚು ಹಿರಿಯ ನಾಗರಿಕರು ಭಾಗವಹಿಸಿ, ಕ್ರೀಡಾ ಉತ್ಸಾಹ ಪ್ರದರ್ಶಿಸಿದರು. ಪುರುಷರ ವಿಭಾಗದಲ್ಲಿ 50 ಹಾಗೂ ಮಹಿಳೆಯರ ವಿಭಾಗದಲ್ಲಿ 30 ಮಂದಿ ಭಾಗವಹಿಸಿದ್ದರು. 60ರಿಂದ 70 ವರ್ಷ, 70ರಿಂದ 80 ವರ್ಷ ಹಾಗೂ 80 ವರ್ಷ ಮೇಲ್ಪಟ್ಟ ವಯೋಮಾನದವರಿಗೆ 3 ಹಂತದ ಸ್ಪರ್ಧೆ ಆಯೋಜಿಸಲಾಗಿತ್ತು.

ವೇಗದ ನಡಿಗೆ, ಗುಂಡು ಎಸೆತ, ಮ್ಯೂಸಿಕಲ್ ಚೇರ್, ಬಾಲ್ ಇನ್ ದ ಬಕೆಟ್ ಸೇರಿದಂತೆ ಇತರೆ ಸ್ಪರ್ಧೆಗಳನ್ನು ನಡೆಸಲಾಯಿತು. ಇದೇ ವೇಳೆ ಏಕಪಾತ್ರಾಭಿನಯ, ಗಾಯನ ಸ್ಪರ್ಧೆ ಕೂಡ ಆಯೋಜಿಸಲಾಗಿತ್ತು. ಹಿರಿಯ ನಾಗರಿಕರು ಯುವ ಪೀಳಿಗೆಯನ್ನು ನಾಚಿಸುವಂತೆ ಎಲ್ಲಾ ಸ್ಪರ್ಧೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು.

ಸ್ಪರ್ಧೆಯ ನಂತರ ಬಹುಮಾನ ವಿತರಣೆ ಮಾಡಲಾಯಿತು. ನಂತರ ಎಲ್ಲರಿಗೂ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

ದಸರಾ ಸಿಎಂ ಕಪ್ ಕ್ರೀಡಾಕೂಟದಲ್ಲಿ ಬೆಂಗಳೂರು ನಗರ ಚಾಂಪಿಯನ್



ದಸರಾ ಸಿಎಂ ಕಪ್ ಕ್ರೀಡಾಕೂಟದಲ್ಲಿ ಚಾಂಪಿಯನ್ ಆದ ಬೆಂಗಳೂರು ವಿಭಾಗ ತಂಡಕ್ಕೆ ಟ್ರೋಫಿ ನೀಡಿ ಅಭಿನಂದಿಸಲಾಯಿತು.

ಮೈಸೂರು, ಅ.7(ಎಂಕೆ)– ರಾಜ್ಯ ಮಟ್ಟದ ಮೈಸೂರು ದಸರಾ ಸಿಎಂ ಕಪ್ ಕ್ರೀಡಾಕೂಟದಲ್ಲಿ ಬೆಂಗಳೂರು ವಿಭಾಗ ಚಾಂಪಿಯನ್ ಆಗಿ ಹೊರಹೊಮ್ಮಿತು.

ಮೈಸೂರಿನ ಚಾಮುಂಡಿವಿಹಾರ ಕ್ರೀಡಾಂಗಣ ಸೇರಿದಂತೆ ವಿವಿಧ ಕ್ರೀಡಾಂಗಣದಲ್ಲಿ 4 ದಿನಗಳ ಕಾಲ ನಡೆದ ರಾಜ್ಯಮಟ್ಟದ ಮೈಸೂರು ದಸರಾ ಸಿಎಂ ಕಪ್ ಕ್ರೀಡಾಕೂಟದಲ್ಲಿ 201 ಪಾಯಿಂಟ್ ಪಡೆಯುವ ಮೂಲಕ ಬೆಂಗಳೂರು ನಗರ ವಿಭಾಗ ಸರ್ವೋತ್ತಮ ಪ್ರಶಸ್ತಿ ತನ್ನದಾಗಿಸಿಕೊಂಡಿತು.

194 ಪಾಯಿಂಟ್ ಪಡೆದ ಮೈಸೂರು ವಿಭಾಗ ದ್ವಿತೀಯ ಸ್ಥಾನ ಪಡೆದರೆ, 131 ಪಾಯಿಂಟ್ ಮೂಲಕ ಬೆಳಗಾವಿ ವಿಭಾಗ ತೃತೀಯ ಸ್ಥಾನ ಪಡೆಯಿತು. ಬೆಂಗಳೂರು ಗ್ರಾಮಾಂತರ 123 ಪಾಯಿಂಟ್ ಹಾಗೂ ಕಲಬುರ್ಗಿ ವಿಭಾಗ 45 ಪಾಯಿಂಟ್ ಪಡೆಯುವ ಮೂಲಕ ನಾಲ್ಕು ಮತ್ತು ಐದನೇ ಸ್ಥಾನ ಪಡೆದವು.

ಪುರುಷರ ವೈಯಕ್ತಿಕ ವಿಭಾಗದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ ಬೆಳಗಾವಿ ವಿಭಾಗದ ಅಥ್ಲೀಟ್ ಜಾಫರ್ಖಾನ್ ಎಂ.ಸರ್ವರ್(ಉದ್ದ ಜಿಗಿತ–7.5 ಮೀಟರ್) 1035 ಪಾಯಿಂಟ್ ಪಡೆದು ಸರ್ವೋತ್ತಮ ಪ್ರಶಸ್ತಿ ಪಡೆದರೆ, ಮಹಿಳಾ ವಿಭಾಗದಲ್ಲಿ ಬೆಳಗಾವಿ ಅಥ್ಲೀಟ್ ಮೇಘಾ ಮುನವಳ್ಳಿಮಠ(400 ಮೀಟರ್ ಓಟ–55.57 ಸೆಕೆಂಡ್) 992 ಪಾಯಿಂಟ್ ಗಳಿಸುವ ಮೂಲಕ ಸರ್ವೋತ್ತಮ ಪ್ರಶಸ್ತಿಗೆ ಭಾಜನರಾದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಆರ್.ಚೇತನ್, ಸಹಾಯ ನಿರ್ದೇಶಕ ಭಾಸ್ಕರ ನಾಯ್ಕ, ಕ್ರೀಡಾ ಸಮಿತಿ ಅಧ್ಯಕ್ಷ ಸೋಮಶೇಖರ್, ದಸರಾ ಕ್ರೀಡಾಕೂಟ ಉಪಸಮಿತಿ ಪದಾಧಿಕಾರಿಗಳಾದ ಎಸ್.ಆರ್.ರವಿಕುಮಾರ್, ಎನ್.ಆರ್.ನಾಗೇಶ್, ರಾಘವೇಂದ್ರ ಮತ್ತಿತರರು ಉಪಸ್ಥಿತರಿದ್ದರು.

ಇಂದು ಜಮ್ಮು–ಕಾಶ್ಮೀರ, ಹರಿಯಾಣ ಚುನಾವಣಾ ಫಲಿತಾಂಶ

ನವದೆಹಲಿ: ಜಮ್ಮು ಕಾಶ್ಮೀರ, ಹರಿಯಾಣದಲ್ಲಿ ನಾಳೆ (ಅಕ್ಟೋಬರ್ 8) ಚುನಾವಣಾ ಫಲಿತಾಂಶ ಪ್ರಕಟವಾಗಲಿದೆ. ಜಮ್ಮು ಕಾಶ್ಮೀರದಲ್ಲಿ ಸೆಪ್ಟೆಂಬರ್ 18, ಸೆಪ್ಟೆಂಬರ್ 25 ಮತ್ತು ಅಕ್ಟೋಬರ್ 1ರಂದು ಮೂರು ಹಂತಗಳಲ್ಲಿ ವಿಧಾನಸಭಾ ಚುನಾವಣೆ ನಡೆದಿದ್ದು, ಮೊದಲ ಹಂತದಲ್ಲಿ 24 ಸ್ಥಾನಗಳಿಗೆ, ಎರಡನೇ ಹಂತದಲ್ಲಿ 26 ಮತ್ತು ಮೂರನೇ ಹಂತದಲ್ಲಿ 40 ಸ್ಥಾನಗಳಿಗೆ ಮತದಾನ ನಡೆದಿದೆ.

ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆ ಫಲಿತಾಂಶಗಳನ್ನು ಮತದಾರರು ಆನ್‌ಲೈನ್‌ನಲ್ಲಿ ಪರಿಶೀಲಿಸಬಹುದು. ECIಯ ಅಧಿಕೃತ ವೆಬ್‌ಸೈಟ್ results.eci.gov.in ವೆಬ್‌ಸೈಟ್‌ಗೆ ಭೇಟಿ ನೀಡಿ ವೀಕ್ಷಿಸಬಹುದು.

ಹರಿಯಾಣ: ಹರಿಯಾಣದ ಎಲ್ಲಾ 90 ಅಸೆಂಬ್ಲಿ ಸ್ಥಾನಗಳಿಗೆ ಅಕ್ಟೋಬರ್ 5 ರಂದು ಮತದಾನ ನಡೆಯಿತು. ಹರಿಯಾಣದಲ್ಲಿ ಭಾರತೀಯ ಜನತಾ ಪಕ್ಷ (ಬಿಜೆಪಿ), ಕಾಂಗ್ರೆಸ್, ಜನನಾಯಕ್ ಜನತಾ ಪಕ್ಷ (ಜೆಜೆಪಿ), ಮತ್ತು ಇಂಡಿಯನ್ ನ್ಯಾಷನಲ್ ಲೋಕದಳ (ಐಎನ್‌ಎಲ್‌ಡಿ) ಪ್ರಮುಖ ಪಕ್ಷಗಳಾಗಿ ಸ್ಪರ್ಧಿಸಿವೆ.

ಹರಿಯಾಣ ವಿಧಾನಸಭೆ ಚುನಾವಣೆ ಫಲಿತಾಂಶಗಳನ್ನು ಮತದಾರರು ಆನ್‌ಲೈನ್‌ನಲ್ಲಿ ಪರಿಶೀಲಿಸಬಹುದು. ECIಯ ಅಧಿಕೃತ ವೆಬ್‌ಸೈಟ್ results.eci.gov.in ವೆಬ್‌ಸೈಟ್‌ಗೆ ಭೇಟಿ ನೀಡಿ ವೀಕ್ಷಿಸಬಹುದು.

ಬಯಲು ನಾಡಲ್ಲಿ ಜಾನಪದ ಸೊಗಡಿಲ್ಲ

ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಬೇಸರ

ಮೈಸೂರು, ಅ.7(ಎಸ್‌ಪಿಎನ್)– ಸ್ವಾತಂತ್ರ್ಯ ನಂತರ ಬಯಲು ಸೀಮೆ ಭಾಗದ ಜನರು ನಾನಾ ಕಾರಣಗಳಿಂದಾಗಿ ಜಾನಪದ ಕಲಿಕೆಗೆ ಹೆಚ್ಚಿನ ಆಸಕ್ತಿ ತೋರಲಿಲ್ಲ ಎಂದು ಹಿರಿಯ ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಬೇಸರ ವ್ಯಕ್ತಪಡಿಸಿದರು.

ಮೈಸೂರು ವನರಂಗದಲ್ಲಿ ರಂಗಾಯಣದ ವತಿಯಿಂದ ಏರ್ಪಡಿಸಿದ್ದ ನವರಾತ್ರಿ ಜನಪದ ರಂಗ ಉತ್ಸವದಲ್ಲಿ ಕುಂದಾಪುರದ ಅಶ್ವಿನಿ ಕೊಂಡದಕುಳಿ ಮತ್ತು ತಂಡವರಿಂದ 'ನರಕಾಸುರ ವಧೆ' ಯಕ್ಷಗಾನ ಹಾಗೂ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಉತ್ತರ ಕರ್ನಾಟಕ, ಕರಾವಳಿ ಕರ್ನಾಟಕದ ಭಾಗದಲ್ಲಿ ವೈವಿಧ್ಯಮಯ ಜಾನಪದ ಕಲೆಗಳನ್ನು ಕಾಣಬಹುದು ಎಂದರು.

ನಾನು ಮೊದಲು ಬೆಂಗಳೂರು ವಿವಿಯಲ್ಲಿ ಕೆಲಸ ಮಾಡುತ್ತಿದ್ದೆ. ನಂತರ ಮೈಸೂರು ವಿವಿಗೆ ವರ್ಗಾವಣೆಗೊಂಡ ನಂತರ 1985ರಿಂದಲೂ ಮೈಸೂರಿನ ಸಾಂಸ್ಕೃತಿಕ ಲೋಕದ ಬೆಳವಣಿಗೆ ಕುರಿತು ಹತ್ತಿರದಿಂದ ಬಲ್ಲವನಾಗಿದ್ದೇನೆ. ಅಲ್ಲದೆ, ರಾಜ್ಯದ ಬೇರೆ ಬೇರೆ ಜಿಲ್ಲೆಗಳಲ್ಲಿ ಸಂಚರಿಸಿ ವಿವಿಧ ಕಲಾ ಪ್ರಕಾರಗಳ ಕುರಿತು ಅಧ್ಯಯನ ನಡೆಸಿದ್ದೇನೆ ಎಂದರು.



ಹಿರಿಯ ಯಕ್ಷಗಾನ ಕಲಾವಿದ ರಾಮಚಂದ್ರ ಗಣೇಶ ಹೆಗಡೆ ಅವರ ಪರವಾಗಿ ಮಗಳಾದ ಅಶ್ವಿನಿ ಕೊಂಡದಕುಳಿ ಸನ್ಮಾನ ಸ್ವೀಕರಿಸಿದರು.

ಅದರಲ್ಲೂ ಉತ್ತರ ಕರ್ನಾಟಕ, ಕರಾವಳಿ ಕರ್ನಾಟಕದಲ್ಲಿ ಜಾನಪದ ಸಮೃದ್ಧವಾಗಿವೆ. ಆದರೆ, ಬಯಲು ಸೀಮೆ ಜಿಲ್ಲೆಗಳು ಸ್ವಾತಂತ್ರ್ಯ ನಂತರ ಶಿಕ್ಷಣ, ಕೈಗಾರಿಕೆ ಸೇರಿದಂತೆ ಇತರೆ ಕ್ಷೇತ್ರಗಳಲ್ಲಿ ಮುಂದುವರೆದ ಹಿನ್ನಲೆ ಜಾನಪದ ಕಲಿಕೆಗೆ ಇಲ್ಲಿನ ಜನರು ಆಸಕ್ತಿ ತೋರಲಿಲ್ಲ. ಹಾಗಾಗಿ ಕಲೆಗಳಲ್ಲಿ ಶ್ರೀಮಂತಿಕೆ ಹೊಂದಲು ಬಯಲು ಸೀಮೆ ಭಾಗದಲ್ಲಿ ಸಾಧ್ಯವಾಗದಿರುವುದು ನೋವಿನ ವಿಚಾರ ಎಂದರು.

ಕರಾವಳಿ ಕರ್ನಾಟಕದ ಯಕ್ಷಗಾನ ಪ್ರದರ್ಶನದಲ್ಲಿ ಪ್ರೇಕ್ಷಕರು– ಕಲಾವಿದರೊಂದಿಗೆ ವೈಚಾರಿಕ ಚರ್ಚೆಗಳು ನಡೆಯುತ್ತವೆ. ಇದು ಬಹಳ ವಿಶಿಷ್ಟವಾಗಿದೆ. ಇಂತಹ ವೈಶಿಷ್ಟತೆಯನ್ನು ಬೇರೆ ದೇಶದಲ್ಲಿ ಕಾಣಲು ಸಾಧ್ಯವಿಲ್ಲ. ನಾವು–ನೀವೆಲ್ಲರೂ ಜಾನಪದದ ವೈವಿಧ್ಯತೆಯನ್ನು ದಸರಾ ಸಂದರ್ಭದಲ್ಲಿ ಕಣ್ತುಂಬಿಕೊಳ್ಳುತ್ತಿರುವುದು ಸಂತೋಷದ ಸಂಗತಿ ಎಂದರು.

ದೊಡ್ಡಾಟ, ಸಣ್ಣಾಟ, ಯಕ್ಷಗಾನ, ತೊಗಲು ಗೊಂಬೆ ಸೇರಿದಂತೆ ಜಾನಪದ ವೈವಿಧ್ಯತೆ ಇರುವುದು ಒಳ್ಳೆಯ ವಿಚಾರ. ಇಂತಹ ಕಲೆಗಳನ್ನು ಗುರುತಿಸುವಲ್ಲಿ ರಂಗಾಯಣ ಯಶಸ್ವಿಯಾಗಿದೆ. ರಂಗಾಯಣ ಸ್ಥಾಪನೆಗೆ ಬಿ.ವಿ.ಕಾರಂತ ಸೇರಿದಂತೆ ಹಲವರ ಕೊಡುಗೆಯಿದೆ. ಅಲ್ಲದೆ ಕಲಾವಿದರೂ ಆಗಿದ್ದ ಮಾಜಿ ಡಿಸಿಎಂ ದಿ.ಎಂ.ಪಿ.ಪ್ರಕಾಶ್ ಅವರ ಕೊಡುಗೆ ಅಪಾರ ಎಂದು ಗುಣಗಾನ ಮಾಡಿದರು.

> ಯಕ್ಷಗಾನ ಕಲೆಯಲ್ಲಿ ನನ್ನ ತಂದೆ ಹಿರಿಯ ಯಕ್ಷಗಾನ ಕಲಾವಿದ ರಾಮಚಂದ್ರ ಗಣೇಶ ಹೆಗಡೆ 50 ವರ್ಷಗಳಿಂದ ತೊಡಗಿಸಿಕೊಂಡಿದ್ದಾರೆ. ಈ ಕಲೆ ಉತ್ತಮ ಗೌರವ ತಂದುಕೊಟ್ಟಿದೆ. ಈ ನಿಟ್ಟಿನಲ್ಲಿ ನಾನು ಯಕ್ಷಗಾನ ಕಲಾವಿದೆಯಾದೆ ಕರಾವಳಿ ಕರ್ನಾಟಕದಲ್ಲಿ ಯಕ್ಷಗಾನ ಸಾಕಷ್ಟು ಹೆಸರುವಾಸಿಯಾಗಿದೆ. ಹಲವು ಕಲಾವಿದರ ವೃತ್ತಿಯೂ ಆಗಿದೆ.
> – ಅಶ್ವಿನಿ ಕೊಂಡದಕುಳಿ, ಯಕ್ಷಗಾನ ಕಲಾವಿದೆ

ಈ ವೇಳೆ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಹಿರಿಯ ಯಕ್ಷಗಾನ ಕಲಾವಿದ ರಾಮಚಂದ್ರ ಗಣೇಶ ಹೆಗಡೆ ಅವರ ಪರವಾಗಿ ಮಗಳಾದ ಅಶ್ವಿನಿ ಕೊಂಡದಕುಳಿ ಸನ್ಮಾನ ಸ್ವೀಕರಿಸಿದರು. ನಂತರ ನರಕಾಸುರ ವಧೆ ಯಕ್ಷಗಾನ ಪ್ರದರ್ಶನಗೊಂಡು ಪ್ರೇಕ್ಷಕರ ಮನಸೆಳೆಯಿತು.

ವೇದಿಕೆಯಲ್ಲಿ ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ನವರಾತ್ರಿ ಜನಪದ ರಂಗ ಉತ್ಸವ ಸಂಚಾಲಕಿ ಬಿ.ಎನ್.ಶಶಿಕಲಾ ಸೇರಿದಂತೆ ಇತರರಿದ್ದರು. ಇದಕ್ಕೂ ಮೊದಲು ಉತ್ತರ ಪ್ರದೇಶದ ಕಲಾವಿದರಿಂದ 'ಕೃಷ್ಣ–ರಾಧೆಯ ನವಿಲು ನೃತ್ಯ ರೂಪಕ ಪ್ರದರ್ಶನ ಗೊಂಡಿತು.

ಯೋಗ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಭೇಟಿ



ಮೈಸೂರಿನ ಯೋಗ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡಿದ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯ್‌ಶಂಕರ್, ದಸರಾ ಪೂಜಾ ಕೈಂಕರ್ಯಕ್ಕೆ ಚಾಲನೆ ನೀಡಿದರು.

ಮೈಸೂರುಮ ಅ.7(ಎಂಕೆ)– ಮೈಸೂರಿನ ವಿಜಯನಗರದಲ್ಲಿರುವ ಯೋಗ ನರಸಿಂಹಸ್ವಾಮಿ ದೇಗುಲಕ್ಕೆ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯ್ ಶಂಕರ್ ಸೋಮವಾರ ಭೇಟಿ ನೀಡಿದರು.

ದೇಗುಲಕ್ಕೆ ಆಗಮಿಸಿದ ರಾಜ್ಯಪಾಲರನ್ನು ದೇಗುಲದ ಟ್ರಸ್ಟ್ ವತಿಯಿಂದ ಶ್ರೀ ಬಾಷ್ಯಂ ಸ್ವಾಮಿಜಿ ನೇತೃತ್ವದಲ್ಲಿ ಪೂರ್ಣಕುಂಭ ಸ್ವಾಗತ ನೀಡಿ ಸ್ವಾಗತಿಸಲಾಯಿತು. ಬಳಿಕ ಯೋಗ ನರಸಿಂಹಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ದಸರಾ ಪೂಜಾ ಕೈಂಕರ್ಯದ ಭಾಗವಾದ ಸುದರ್ಶನ ಹೋಮದ ಸಂಕಲ್ಪ ಪೂಜೆಗೆ ದೇಗುಲದ ಆವರಣದಲ್ಲಿ ಬೃಹತ್ ಅಗರಬತ್ತಿಗೆ ಜ್ಯೋತಿ ಹೊತ್ತಿಸುವ ಮೂಲಕ ಚಾಲನೆ ನೀಡಿದರು.

ಮೈಸೂರು ದಸರಾ ವೇಳೆಯಲ್ಲಿ ನೆಡೆಯುವ ದ್ವಾದಶ ದಿನಗಳ ಈ ಪೂಜಾ ಕೈಂಕರ್ಯದಲ್ಲಿ ಶನಿವಾರ ಸುದರ್ಶನ ಹೋಮ ಜರುಗಲಿದೆ. ವಿಜಯದಶಮಿ ದಿನ ಮಹಾ ಅಭಿಷೇಕ ಪೂಜೆ ನೆಡೆಯಲಿದ್ದು, ದೇಗುಲದ ಶುದ್ದೀಕರಣ ನಡೆಸಲಾಗುವುದು ಎಂದು ದೇಗುಲದ ಹಿರಿಯ ಅರ್ಚಕ ಶ್ರೀನಿವಾಸ್ ಮಾಹಿತಿ ನೀಡಿದರು.

ಮೈಸೂರು ಮಿತ್ರ ಮಂಗಳವಾರ 8 ಅಕ್ಟೋಬರ್ 2024

ತಾಯೂರಲ್ಲಿ 29 ಬೆಳ್ಳಿ ನಾಣ್ಯಗಳು ಪತ್ತೆ

ನಂಜನಗೂಡು, ಅ.7– ತಾಲೂಕಿನ ವರುಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ತಾಯೂರು ಗ್ರಾಮದಲ್ಲಿ 800 ವರ್ಷಗಳ ಐತಿಹಾಸಿಕ ಹಿನ್ನೆಲೆಯುಳ್ಳ ಶ್ರೀಲಕ್ಷ್ಮಿ



ವರದರಾಜಸ್ವಾಮಿ ದೇವಾಲಯ ಜೀರ್ಣೋದ್ಧಾರ ಕಾಮಗಾರಿ ವೇಳೆ ಇಂಗ್ಲೆಂಡ್ ರಾಣಿ ಎಲಿಜಬೆತ್ ಚಿತ್ರವಿರುವ 29 ಬೆಳ್ಳಿ ನಾಣ್ಯಗಳು ದೊರತಿವೆ.

ಶ್ರೀಲಕ್ಷ್ಮಿ ವರದರಾಜಸ್ವಾಮಿ ದೇವಾಲಯ ಶಿಥಿಲಗೊಂಡಿದ್ದ ಹಿನ್ನೆಲೆಯಲ್ಲಿ 3 ಕೋಟಿ ವೆಚ್ಚದಲ್ಲಿ ಜೀರ್ಣೋದ್ಧಾರ ಕಾಮಗಾರಿ ಕೈಗೊಳ್ಳಲಾಗಿದ್ದು, ಶನಿವಾರ ಗುತ್ತಿಗೆದಾರರು ಅಡಿಪಾಯ ಅಗೆದಾಗ ನಾಲ್ಕು ಬೆಳ್ಳಿ ನಾಣ್ಯಗಳು ದೊರೆತಿವೆ. ಗುತ್ತಿಗೆದಾರ ಮತ್ತು ಗ್ರಾಮದ ಮುಖಂಡರು ನಾಣ್ಯಗಳನ್ನು ಪರಿಶೀಲಿಸಿ ತಕ್ಷಣ ಬಿಳಿಗೆರೆ ಪೊಲೀಸ್ ಠಾಣೆ ಮತ್ತು ಪುರಾತತ್ವ ಇಲಾಖೆ ಅಧಿಕಾರಿಗಳಿಗೆ ವಿಷಯ ತಿಳಿಸಿದ್ದಾರೆ. ನಂತರ ಸ್ಥಳಕ್ಕೆ ಧಾವಿಸಿದ ಪೊಲೀಸರು ಮತ್ತು ಪುರಾತತ್ವ ಇಲಾಖೆ ಅಧಿಕಾರಿಗಳು ದೇಗುಲದ ಆವರಣದಲ್ಲಿ ಉತ್ಖನನ ಮಾಡಿದಾಗ ಮತ್ತೆ 25 ನಾಣ್ಯಗಳು ಸೇರಿದಂತೆ ಒಟ್ಟು 29 ನಾಣ್ಯಗಳು ದೊರೆತಿವೆ. ಈ ನಾಣ್ಯಗಳು 18ನೇ ಶತಮಾನದ ಬೆಳ್ಳಿ ನಾಣ್ಯಗಳು ಎಂದು ತಿಳಿದು ಬಂದಿದ್ದು, ನಾಣ್ಯದ ಒಂದು ಭಾಗದಲ್ಲಿ ಇಂಗ್ಲೆಂಡಿನ ವಿಕ್ಟೋರಿಯಾ ಮಹಾರಾಣಿ ಚಿತ್ರ ಅಚ್ಚು ಹಾಕಲಾಗಿದೆ. ಸುಮಾರು 800 ವರ್ಷಗಳ ಇತಿಹಾಸವಿರುವ ದೇವಸ್ಥಾನದಲ್ಲಿ ಮತ್ತಷ್ಟು ನಾಣ್ಯಗಳ ಶೋಧ ಕಾರ್ಯ ಮುಂದುವರೆದಿದೆ. ನಾಣ್ಯಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದು, ನ್ಯಾಯಾ ಲಯದ ಅನುಮತಿ ದೊರೆತ ನಂತರ ಪುರಾತತ್ವ ಇಲಾಖೆಗೆ ಹಸ್ತಾಂತರಿಸಲಿದ್ದಾರೆ.

ಅ.28, ಸರ್ಕಾರಿ ನೌಕರರ ಸಂಘದ ಚುನಾವಣೆ

ತಿ.ನರಸೀಪುರ, ಅ.7– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ತಿ.ನರಸೀಪುರ ತಾಲೂಕು ಶಾಖೆ ಕಾರ್ಯಕಾರಿ ಸಮಿತಿ ಚುನಾವಣೆ ವೇಳಾಪಟ್ಟಿ ಪ್ರಕಟಗೊಂಡಿದ್ದು, ಅ.28ರಂದು ಸೋಮವಾರ ಚುನಾವಣೆ ನಡೆಯಲಿದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕೇಂದ್ರ ಸಂಘದ ಕಾರ್ಯಕಾರಿ ಸಮಿತಿ ಸಂಘದ ಬೈಲಾ ಪ್ರಕಾರ ತಾಲೂಕು ಶಾಖೆ ಚುನಾವಣೆ ನಡೆಸಲು ತೀರ್ಮಾನಿಸಲಾಗಿದ್ದು, ಅ.9 ರಿಂದ 18ರವರೆಗೆ ನಾಮಪತ್ರಗಳ ವಿತರಣೆ ನಡೆಯಲಿದ್ದು, ಅ.18 ನಾಮಪತ್ರ ಸಲ್ಲಿಸಲು ಕೊನೆ ದಿನ. 19 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ವಾಪಸ್ ಪಡೆಯಲು ಅ.21 ಅಂತಿಮ ದಿನ. ಅ.28 ರಂದು ಬೆಳಗ್ಗೆ 9 ರಿಂದ ಸಂಜೆ 4ರವರೆಗೆ ಮತದಾನ ನಡೆಯಲಿದ್ದು, ಅಂದೇ ಮತದಾನ ಮುಕ್ತಾಯದ ನಂತರ ಮತಗಳ ಎಣಿಕೆ ಕಾರ್ಯ ನಡೆದು ಫಲಿತಾಂಶ ಪ್ರಕಟಗೊಳ್ಳಲಿದೆ.

ನಾಮಪತ್ರಗಳನ್ನು ತಾಲೂಕು ಸಂಘದ ಕಚೇರಿಯಲ್ಲಿ ಬೆಳಗ್ಗೆ 11 ರಿಂದ ಸಂಜೆ 5 ಗಂಟೆವರೆಗೆ ಪಡೆಯಬಹುದಾಗಿದೆ. ಮತದಾನ ಬಾಲಕಿಯರ ಪ್ರೌಢಶಾಲೆ ಮತ್ತು ಹಿರಿಯ ಪ್ರಾಥಮಿಕ ಬಾಲಕರ ಶಾಲೆಯಲ್ಲಿ ನಡೆಯಲಿದೆ.

ಕಟ್ಟೆಮಳಲವಾಡಿಯಲ್ಲಿ ತಂಬಾಕು ಹರಾಜು ಪ್ರಕ್ರಿಯೆಗೆ ಚಾಲನೆ

ತಂಬಾಕಿಗೆ ಆಂಧ್ರದ ಬೆಲೆ ಸಿಗುವಂತೆ ನೋಡಿಕೊಳ್ಳಿ

ಅಧಿಕಾರಿಗಳಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಸೂಚನೆ



ತಂಬಾಕು ಹರಾಜಿಗೆ ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು.

> ಈ ಕ್ಷೇತ್ರದ ಜನರು ನನಗೆ ಜನಸೇವೆ ಮಾಡಲು 10 ವರ್ಷ ಅವಕಾಶ ಮಾಡಿಕೊಟ್ಟಿದ್ದಾರೆ. ಅವರ ಋಣವನ್ನು ನಾನು ಸಾಯುವ ತನಕ ತೀರಿಸಲು ಮರೆಯುವುದಿಲ್ಲ. ಹೀಗಾಗಿ ಈ ಬಾರಿ ರೈತರಿಗೆ ಸರಾಸರಿ 300 ರೂ.ಗಿಂತ ಹೆಚ್ಚು ಬೆಲೆ ಸಿಗುವಂತಾಗಬೇಕು ಎಂದ ಅವರು, ರೈತರಿಗೆ ಯಾವುದೇ ರೀತಿಯ ಅನ್ಯಾಯವಾಗಲು ಬಿಡುವುದಿಲ್ಲ. ಇದೀಗ ನಾನು ಸಂಸದನಲ್ಲದಿದ್ದರೂ ಕೇಂದ್ರ ಸರ್ಕಾರದಲ್ಲಿ ನನ್ನದೇ ಆದ ಸಂಪರ್ಕಗಳಿದೆ. ನಾನು ರೈತರ ಜೊತೆಗೆ ಇರುತ್ತೇನೆ. ರೈತರಿಗೆ ಒಳ್ಳೆ ಬೆಲೆ ನೀಡಿ. ಬೆಲೆ ಕಡಿಮೆ ಮಾಡಿ ರೈತರಿಗೆ ಅನ್ಯಾಯ ಮಾಡಬೇಡಿ. ಕಳೆದ ಬಾರಿ ನಾನು ಸಂಸದನಾಗಿದ್ದಾಗ ಕಂಪನಿಗಳಿಗೆ ಬೆಲೆ ಏರಿಳಿತ ಮಾಡದಂತೆ ಎಚ್ಚರಿಕೆ ಕೊಟ್ಟಿದ್ದೆ. ಅದೇ ರೀತಿ ಕಂಪನಿಗಳು ನಡೆದುಕೊಂಡಿವೆ. ಕಳೆದ ವರ್ಷದಂತೆ ಈ ವರ್ಷವು ಕಂಪನಿಗಳು ನಡೆದುಕೊಳ್ಳಬೇಕು.
>
> – ಪ್ರತಾಪ ಸಿಂಹ, ಮಾಜಿ ಸಂಸದ.

ಹುಣಸೂರು/ಹಿರೀಕ್ಯಾತನಹಳ್ಳಿ, ಅ.7– ಆಂಧ್ರದ ತಂಬಾಕಿಗಿಂತ ಕರ್ನಾಟಕದ ತಂಬಾಕು ಗುಣಮಟ್ಟದಿಂದ ಕೂಡಿರುವುದರಿಂದ ರೈತರಿಗೆ ಆಂಧ್ರದ ಬೆಲೆ ಸಿಗುವಂತೆ ತಂಬಾಕು ಮಂಡಳಿ ಅಧಿಕಾರಿಗಳು ನೋಡಿಕೊಳ್ಳಬೇಕು. ಆ ಮೂಲಕ ರೈತರ ಹಿತ ಕಾಯಬೇಕು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ಕಟ್ಟೆಮಳಲವಾಡಿ ಗ್ರಾಮದ ಡಿ.ದೇವರಾಜು ಅರಸು ತಂಬಾಕು ಹರಾಜು ಮಾರುಕಟ್ಟೆಯ ಪ್ಲಾಟ್ ಫಾರಂ ನಂ.2, 3 ಹಾಗೂ 64ರಲ್ಲಿ ಹರಾಜು ಪ್ರಕ್ರಿಯೆಗೆ ಚಾಲನೆ ನೀಡಿ ಮಾತನಾಡಿದ ಅವರು, ಈ ವರ್ಷ ಆರಂಭದಲ್ಲಿ ಪ್ರತಿ ಕೆಜಿಗೆ 290 ರೂ. ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಬೆಲೆ ಸಿಗುವ ಮೂಲಕ ಆಂಧ್ರದಲ್ಲಿ ಪ್ರತಿ ಕೆಜಿಗೆ 411 ರೂ. ನೀಡಿರುವಂತೆಯೇ ಇಲ್ಲಿಯೂ ಆಂಧ್ರ ಮಾರುಕಟ್ಟೆಗೆ ಸರಿಸಮನಾಗಿ ಬೆಲೆ ಸಿಗಬೇಕು. ಒಟ್ಟಾರೆ ಈ ಬಾರಿ 300ಕ್ಕೂ ಹೆಚ್ಚು ಸರಾಸರಿ ಬೆಲೆ ಸಿಗುವಂತಾಗಬೇಕು ಎಂದ ಅವರು, ಕಂಪನಿಗಳು ಸ್ಥಿರ ಸರಾಸರಿ ಬೆಲೆ ನೀಡಬೇಕು. ಯಾವುದೇ ಕಾರಣಕ್ಕೂ ಬೆಲೆ ಕಡಿಮೆ ಮಾಡುವ ಕೆಲಸ ಮಾಡಬಾರದು ಎಂದರು.

ಪ್ರಸ್ತುತ ಕೃಷಿ ಕಾರ್ಮಿಕರ ದರ ಹೆಚ್ಚಾಗಿದ್ದು, ತಂಬಾಕು ಉತ್ಪಾದನಾ ವೆಚ್ಚವೂ ಗಣನೀಯವಾಗಿ ಹೆಚ್ಚಾಗಿದೆ. ಹರಾಜು ಮಾರುಕಟ್ಟೆಯಲ್ಲಿ ರೈತರಿಗೆ ಉತ್ತಮ ದರ ಸಿಕ್ಕಲ್ಲಿ ಅಲ್ಪಮಟ್ಟದ ಲಾಭ ಸಿಗಲಿದೆ ಎಂದರು.

ತಂಬಾಕು ಹರಾಜಿನಲ್ಲಿ ಈಗಾಗಲೇ 12 ಕಂಪನಿಗಳು ಭಾಗವಹಿಸಲು ನೋಂದಾಯಿಸಿಕೊಂಡಿದ್ದು, ಮೊದಲ ದಿನ 7 ಕಂಪನಿಗಳು ಭಾಗವಹಿಸಿವೆ. ಮುಂದಿನ ದಿನಗಳಲ್ಲಿ ಎಲ್ಲಾ ಕಂಪನಿಗಳು ಭಾಗವಹಿಸಲಿವೆ. ಮಂಡಳಿಯು ರೈತರಿಗೆ ಉತ್ತಮ ದರ ಕೊಡಿಸಲು ಬದ್ಧವಾಗಿದ್ದು, ರೈತರು ಉತ್ತಮ ಗುಣಮಟ್ಟದ ತಂಬಾಕನ್ನು ಮಾರುಕಟ್ಟೆಗೆ ತರಬೇಕು ಎಂದರು.

ಪ್ರತಾಪ್ ಸಿಂಹರವರು ಕಳೆದ 10 ವರ್ಷ ಸಂಸದರ ಅವಧಿಯಲ್ಲಿ ಸಾಕಷ್ಟು ರೈತಪರ ಕೆಲಸ ಮಾಡಿದ್ದಾರೆ. ಜೊತೆಗೆ ನಾವು ಕೇಂದ್ರ ಸರ್ಕಾರದ ಜೊತೆಗಿದ್ದು, ಅವರ ಸಂಬಂಧವನ್ನು ಬಳಸಿಕೊಂಡು ರೈತರ ಹಿತ ಕಾಯಲು ಬದ್ಧವಾಗಿದ್ದು, ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ ಎಂದರು.

ರೈತ ಕಾಳೇಗೌಡ ಮಾತನಾಡಿ, ಈ ಬಾರಿ ಪ್ರಾರಂಭದಲ್ಲೇ 290 ಸಿಕ್ಕಿದ್ದು, ಸ್ವಲ್ಪ ಮಟ್ಟಿಗೆ ಚೇತರಿಕೆ ಕಂಡಿದ್ದೇವೆ. ಈ ಸಾಲಿನಲ್ಲಿ ಅತಿವೃಷ್ಟಿ ಆತಂಕದಲ್ಲೂ ರೈತರು ಉತ್ತಮ ತಂಬಾಕು ಬೆಳೆದಿದ್ದು, ರೈತರು ಹೆಚ್ಚು ವೆಚ್ಚ ಮಾಡಿದ್ದಾರೆ. ಮಂಡಳಿ ಅಧಿಕಾರಿಗಳು ಕಂಪನಿಗಳೊಂದಿಗೆ ಮಾತನಾಡಿ, ರೈತರನ್ನು ಉಳಿಸುವ ದಿಕ್ಕಿನಲ್ಲಿ ಉತ್ತಮ ಬೆಲೆ ಕೊಡಿಸುವ ಮೂಲಕ ಮಾರುಕಟ್ಟೆ ನಡೆಸಬೇಕು ಎಂದರು. ಮಾರುಕಟ್ಟೆ ಅಧೀಕ್ಷಕ ಸಿದ್ದರಾಜು ಮಾತನಾಡಿ, ಈ ಬಾರಿ 9.5 ಮಿಲಿಯನ್ ಕೆಜಿ ತಂಬಾಕು ಉತ್ಪನ್ನಕ್ಕೆ ಗುರಿ ಇಟ್ಟುಕೊಂಡಿದ್ದು ಉತ್ತಮ ಮಳೆಯಾಗಿರುವ ಕಾರಣ ಈ ಬಾರಿ ತಂಬಾಕು ಇಳುವರಿ ಚೆನ್ನಾಗಿದ್ದು ನಮ್ಮ ಗುರಿಗಿಂತ ಹೆಚ್ಚು ಆಗಬಹುದು. ಸ್ವಲ್ಪ ಕಡಿಮೆಯೂ ಆಗಬಹುದು ಎಂದು ತಿಳಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ ಮಾತನಾಡಿದರು. ಈ ವೇಳೆ ಮಾರುಕಟ್ಟೆ ಕ್ಷೇತ್ರಾಧಿಕಾರಿ ಹರೀಶ್, ಬ್ರಿಜ್‌ಭೂಷಣ್, ಮೀನಾ, ಐಟಿಸಿ ಲೋಕೇಶ್, ತಂಬಾಕು ಮಂಡಳಿ ನಿರ್ದೇಶಕ ದಿನೇಶ್, ಗ್ರಾಪಂ ಅಧ್ಯಕ್ಷೆ ಚಿನ್ನುಮುತ್ತು, ಉಪಾಧ್ಯಕ್ಷ ದಿಲೀಪ್, ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಾಜ್ ಒಡೆಯರ್, ಜಿಲ್ಲಾ ಪರಿಷತ್ ಮಾಜಿ ಸದಸ್ಯ ನಾಗರಾಜ್, ತಾಲೂಕು ಬಿಜೆಪಿ ಅಧ್ಯಕ್ಷ ಕಾಂತರಾಜು, ಉಪಾಧ್ಯಕ್ಷ ರಾಮಚಂದ್ರ, ಪ್ರಧಾನ ಕಾರ್ಯದರ್ಶಿ ಸತೀಶ್, ಹಾರಂಗಿ ಮಹಾಮಂಡಲದ ಉಪಾಧ್ಯಕ್ಷ ಮಂಜುನಾಥ್, ನಿರ್ದೇಶಕ ಕಿರಣ್ ಕುಮಾರ್, ಮುಖಂಡರಾದ ಶ್ರೀಧರ್, ರಮೇಶ್, ಕುಮಾರ್, ಚಂದ್ರೇಗೌಡ, ರಾಮೇಗೌಡ, ಬಸವರಾಜು, ಆಂಜನೇಯ, ಪುಟ್ಟರಾಜು, ಶ್ರೀಧರ್, ನಟರಾಜ್, ತಗಡಯ್ಯ, ಐಟಿಸಿ ಕಂಪನಿಯ ಪ್ರಾಡಕ್ಟ್ ಮ್ಯಾನೇಜರ್ ಪೂರ್ಣೇಶ್, ಹರಾಜು ಅಧೀಕ್ಷಕ ಚಂದ್ರಶೇಖರ್, ಮಂಡಳಿ ಅಧಿಕಾರಿಗಳು ಹಾಜರಿದ್ದರು.

ಅ.22 ರಂದು ಅಭಿವೃದ್ಧಿಗೆ ಮುಖ್ಯಮಂತ್ರಿ ಚಾಲನೆ

ಸಂಸದ ಸುನೀಲ್ ಬೋಸ್



ಮೂಗೂರಲ್ಲಿ ಸಂಸದ ಸುನೀಲ್ ಬೋಸ್ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು.

ತಿ.ನರಸೀಪುರ, ಅ.7– ತಿ.ನರಸೀಪುರದ ಸಮಗ್ರ ಅಭಿವೃದ್ಧಿಗೆ ಅ.22ರಂದು ಸಿಎಂ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಗುದ್ದಲಿ ಪೂಜೆ ನೆರವೇರಿಸಲಿದ್ದಾರೆ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ತಾಲೂಕಿನ ಇತಿಹಾಸ ಪ್ರಸಿದ್ಧ ಮೂಗೂರು ಶ್ರೀತ್ರಿಪುರ ಸುಂದರಿ ಅಮ್ಮನವರ ದೇವಾಲಯಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪನವರು ಮೈಸೂರು ದಸರಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕಿರುವುದರಿಂದ ಕ್ಷೇತ್ರಕ್ಕೆ ಆಗಮಿಸಲು ಸಾಧ್ಯವಾಗುತ್ತಿಲ್ಲ ಎಂದ ಅವರು ಇದೇ ತಿಂಗಳ 22 ರಂದು ಸಿಎಂ ಸಿದ್ದರಾಮಯ್ಯನವರೊಂದಿಗೆ ತಿ.ನರಸೀಪುರದ ಸಮಗ್ರ ಅಭಿವೃದ್ಧಿಗೆ ಸಚಿವರು ಚಾಲನೆ ನೀಡಲಿದ್ದಾರೆ ಎಂದರು.

ತಿ.ನರಸೀಪುರದಲ್ಲಿ ಕ್ರೀಡಾಂಗಣ: ಪಟ್ಟಣದಲ್ಲಿ ಕ್ರೀಡಾಂಗಣ ನಿರ್ಮಿಸಲು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಹಾಗೂ ನಾನು ಪಟ್ಟಣದಲ್ಲಿ ಜಾಗ ಗುರ್ತಿಸಿದ್ದೇವೆ. ಸದ್ಯದಲ್ಲೇ ಕಾಮಗಾರಿಗೆ ಚಾಲನೆ ದೊರೆಯಲಿದೆ ಎಂದರು.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಹಾಗೂ ಸತೀಶ್ ಜಾರಕಿಹೊಳಿ ಭೇಟಿ ವಿಚಾರಕ್ಕೆ ಬೇರೆ ಅರ್ಥ ಕಲ್ಪಿಸುವುದು ಬೇಡ ಅವರು ಶಿಕಾರಿಪುರ ಟೋಲ್ ವಿಚಾರವಾಗಿ ಭೇಟಿ ಮಾಡಿದ್ದಾರೆ ಎಂದರು.

ಇದೇ ವೇಳೆ ಗ್ರಾಮಸ್ಥರು ಸಂಸದರನ್ನು ಸನ್ಮಾನಿಸಿದರು. ದೇಗುಲದ ಪಾರುಪತ್ತೇದಾರ ಎಂ.ಬಿ.ಸಾಗರ್, ಡೈರಿ ಕಾರ್ಯದರ್ಶಿ ನಾಗೇಂದ್ರ, ಕಾಂಗ್ರೆಸ್ ಯುವ ಮುಖಂಡ ಲಕ್ಷ್ಮಿನಾರಾಯಣ, ತಲಕಾಡು ಸುಂದರ ನಾಯಕ, ಪುರಸಭಾ ಸದಸ್ಯ ಸಿ.ಪ್ರಕಾಶ್, ಮಾಜಿ ಸದಸ್ಯ ರಾಘವೇಂದ್ರ, ಮುಖಂಡ ಶ್ರೀಕಂಠ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಗ್ರಾಮ ಪಂಚಾಯಿತಿ ಉಪಾಧ್ಯಕ್ಷೆ ಪತಿ ಅನುಮಾನಾಸ್ಪದ ಸಾವು

ಕೊಲೆ ಪ್ರಕರಣ ದಾಖಲಿಸಲು ಆಗ್ರಹಿಸಿ ಠಾಣೆ ಎದುರು ಗ್ರಾಮಸ್ಥರ ಪ್ರತಿಭಟನೆ



ನಂಜನಗೂಡು, ಅ.7– ಗ್ರಾಪಂ ಉಪಾಧ್ಯಕ್ಷೆ ಪತಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದು, ಇದು ರಾಜಕೀಯ ಪ್ರೇರಿತ ಕೊಲೆ ಎಂದು ದೂರು ದಾಖಲಿಸಿಕೊಳ್ಳುವಂತೆ ಒತ್ತಾಯಿಸಿ ಕೆಬ್ಬೇಪುರ ಗ್ರಾಮಸ್ಥರು ನಗರದ ಗ್ರಾಮಾಂತರ ಪೊಲೀಸ್ ಠಾಣೆ ಮುಂಭಾಗ ಪ್ರತಿಭಟನೆ ನಡೆಸಿದರು.

ವಿವರ: ತಾಲೂಕಿನ ದೇವರಸನಹಳ್ಳಿ ಗ್ರಾಪಂ ಉಪಾಧ್ಯಕ್ಷೆ ಸೌಭಾಗ್ಯ ಅವರ ಪತಿ ಕೆಬ್ಬೇಪುರ ಗ್ರಾಮದ ನಂಜುಂಡಸ್ವಾಮಿ (47) ತಾಲೂಕಿನ ಹೊಸೂರು ಸಮೀಪ ಭಾನುವಾರ ರಾತ್ರಿ ಗದ್ದೆ ಬದುವಿನಲ್ಲಿ ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದರು. ಇಂದು ಬೆಳಗ್ಗೆ ವಾಯು ವಿಹಾರಕ್ಕೆ ತೆರಳಿದ್ದವರು ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಅವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿದ್ದಾರೆ.



ನಂಜನಗೂಡಿನ ಗ್ರಾಮಾಂತರ ಪೊಲೀಸ್ ಠಾಣೆಯ ಮುಂಭಾಗ ಕೆಬ್ಬೆಪುರ ಗ್ರಾಮಸ್ಥರು ದೂರು ದಾಖಲಿಸುವಂತೆ ಒತ್ತಾಯಿಸಿ ಪ್ರತಿಭಟಿಸಿದರು.

ಆಸ್ಪತ್ರೆಯವರು ನೀಡಿದ ಮಾಹಿತಿ ಮೇರೆಗೆ ಸಂಚಾರ ಠಾಣೆ ಪೊಲೀಸರು ಅಪಘಾತ ಪ್ರಕರಣ ದಾಖಲಿಸಲು ಮುಂದಾಗಿದ್ದರು. ಆದರೆ ಅವರ ಪತ್ನಿ ಗ್ರಾಪಂ ಉಪಾಧ್ಯಕ್ಷೆ ಸೌಭಾಗ್ಯ ಅವರು, ನನ್ನ ಪತಿಯನ್ನು ರಾಜಕೀಯ ಉದ್ದೇಶದಿಂದ ಕೊಲೆ ಮಾಡಿದ್ದು, ಈ ಸಂಬಂಧ ಪ್ರಕರಣ ದಾಖಲಿಸುವಂತೆ ಗ್ರಾಮಾಂತರ ಠಾಣೆ ಪೊಲೀಸರಲ್ಲಿ ಮನವಿ ಮಾಡಿದರು. ಆದರೆ ಸಂಚಾರ ಠಾಣೆಯಲ್ಲಿ ಅಪಘಾತ ಮತ್ತು ಅನುಮಾನಾಸ್ಪದ ಸಾವು ದೂರು ದಾಖಲಿಸಲಾಗುವುದು. ಕೊಲೆ ಎಂದು ದೃಢಪಟ್ಟಲ್ಲಿ ಕೊಲೆ ಪ್ರಕರಣ ದಾಖಲಿಸುವುದಾಗಿ ಗ್ರಾಮಾಂತರ ಠಾಣೆ ಪೊಲೀಸರು ಹೇಳಿದ್ದರಿಂದ ರೊಚ್ಚಿಗೆದ್ದ ಗ್ರಾಮಸ್ಥರು ಹಾಗೂ ಸೌಭಾಗ್ಯ, ಪೊಲೀಸರು ಲಂಚ ಪಡೆದು ಕೊಲೆಯನ್ನು ಅಪಘಾತವೆಂದು ಮುಚ್ಚಿ ಹಾಕಲು ಮುಂದಾಗಿದ್ದಾರೆಂದು ಆರೋಪಿಸಿ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ಪ್ರತಿಭಟನೆಗೆ ಮಣಿದ ಗ್ರಾಮಾಂತರ ಠಾಣೆ ಪೊಲೀಸರು, ದೇವರಸನಹಳ್ಳಿ ಗ್ರಾಪಂ ಅಧ್ಯಕ್ಷ ಸ್ಥಾನಕ್ಕೆ ಈ ತಿಂಗಳು ಚುನಾವಣೆ ನಡೆಯಬೇಕಿದ್ದು, ಒಪ್ಪಂದದಂತೆ ಇಂದು ಹಾಲಿ ಅಧ್ಯಕ್ಷರು ರಾಜೀನಾಮೆ ನೀಡಬೇಕಿತ್ತು. ನನ್ನನ್ನು ಅಧ್ಯಕ್ಷೆಯಾಗಿ ಆಯ್ಕೆ ಮಾಡಲು ಸದಸ್ಯರು ಒಪ್ಪಿಗೆ ಸೂಚಿಸಿದ್ದರು. ಈ ಹಿನ್ನೆಲೆ ಯಲ್ಲಿ ನನ್ನ ಪತಿ ನಂಜುಂಡಸ್ವಾಮಿ ಚುನಾ ವಣೆ ವಿಷಯವಾಗಿ 4 ಲಕ್ಷ ಹಣ ತೆಗೆದುಕೊಂಡು ಭಾನುವಾರ ರಾತ್ರಿ ಹೋದವರು ಹೊಸೂರು ಸಮೀಪ ಗಾಯಗೊಂಡು ಬಿದ್ದಿದ್ದರು. ತಲೆಗೆ ಬಲವಾದ ಏಟು ಬಿದ್ದಿದ್ದು ಎಡಗೈ ಮುರಿದಿದೆ. ಅಲ್ಲದೆ ಆಸ್ಪತ್ರೆಗೆ ಸೇರಿಸುವ ಮಾರ್ಗಮಧ್ಯೆ ನನ್ನನ್ನು ಬಿಟ್ಟುಬಿಡಿ. ನನಗೆ ಹೊಡೆಯಬೇಡಿ ಎಂದು ಕನವರಿಸುತ್ತಿದ್ದರು. ಆದ್ದರಿಂದ ದೇವರಸನಹಳ್ಳಿ ಗ್ರಾಪಂ ಅಧ್ಯಕ್ಷರ ಚುನಾವಣೆ ವಿಷಯವಾಗಿ ರಾಜಕೀಯ ದ್ವೇಷದಿಂದ ನನ್ನ ಗಂಡನನ್ನು ಕೊಲೆ ಮಾಡಲಾಗಿದೆ ಎಂದು ಗ್ರಾಪಂ ಉಪಾಧ್ಯಕ್ಷೆ ಸೌಭಾಗ್ಯ ನೀಡಿದ ದೂರನ್ನು ನಂಜನಗೂಡು ಗ್ರಾಮಾಂತರ ಠಾಣೆಯಲ್ಲಿ ದಾಖಲಿಸಿಕೊಳ್ಳಲಾಗಿದೆ. ಪ್ರತಿಭಟನೆಯಲ್ಲಿ ಮುಖಂಡರಾದ ಎಚ್.ಎಸ್.ಮೂಗಶೆಟ್ಟಿ, ಕುಳ್ಳಪುರ ನಾಗರಾಜು, ಹೆಮ್ಮರಗಾಲ ಸೋಮಣ್ಣ, ಶಿವಣ್ಣ, ಗ್ರಾಮಸ್ಥರು ಉಪಸ್ಥಿತರಿದ್ದರು.

ಮರದಿಂದ ಬಿದ್ದು ರೈತ ಸಾವು

ಸಾಲಿಗ್ರಾಮ, ಅ.7– ಮರದ ಮೇಲಿಂದ ಕಾಲು ಜಾರಿ ಬಿದ್ದು ರೈತ ಸ್ಥಳದಲ್ಲೇ



ಸಾವನ್ನಪ್ಪಿರುವ ಘಟನೆ ಸಾಲಿಗ್ರಾಮ ತಾಲೂಕಿನ ಚಿಕ್ಕಭೇರ್ಯ ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ಶಿವನಂಜನಾಯಕ(60) ಸಾವನ್ನಪ್ಪಿದವರು. ಮೊದಲು ಟೈಲರಿಂಗ್ ವೃತ್ತಿ ಮಾಡುತ್ತಿದ್ದ ಇವರು ನಂತರ ಹಲವು ವರ್ಷಗಳಿಂದ ಕೃಷಿಯಲ್ಲಿ ತೊಡಗಿಸಿಕೊಂಡಿದ್ದರು. ಜೊತೆಗೆ ಆಡು ಸಾಕಾಣಿಕೆ ಮಾಡುತ್ತಿದ್ದರು. ಸೋಮವಾರ ಬೆಳಗ್ಗೆ ಆಡುಗಳಿಗೆ ಸೊಪ್ಪು ಕಡಿಯಲು ತಮ್ಮ ಜಮೀನಿನಲ್ಲಿದ್ದ ಮರಕ್ಕೆ ಹತ್ತಿದ್ದ ವೇಳೆ ರೆಂಬೆ ಮುರಿದು ಕಾಲು ಜಾರಿ ಬಿದ್ದು ಸಾವನ್ನಪ್ಪಿದ್ದಾರೆ. ಈ ಸಂಬಂಧ ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಪ್ರತಿ ಕೆಜಿಗೆ ಸರಾಸರಿ 300 ರೂ. ಸಿಗಲಿ: ಜಿ.ಡಿ.ಹರೀಶ್‌ಗೌಡ



ಚಿಲ್ಕುಂದ ತಂಬಾಕು ಮಾರುಕಟ್ಟೆ ಸಂಖ್ಯೆ 62ಕ್ಕೆ ಶಾಸಕ ಜಿ.ಡಿ.ಹರೀಶ್ ಗೌಡ ಭೇಟಿ ನೀಡಿದರು.

ಕಂಪಲಾಪುರ, ಅ.7– ಈ ಬಾರಿ ಉತ್ತಮ ಮಳೆಯಾಗಿದ್ದು, ರೈತರು ಹೆಚ್ಚು ತಂಬಾಕು ಬೆಳೆದಿದ್ದಾರೆ. ಹೀಗಾಗಿ ತಾಯಿ ಚಾಮುಂಡೇಶ್ವರಿ ಆಶೀರ್ವಾದದಿಂದ ರೈತರ ಪ್ರತಿ ಕೆಜಿ ತಂಬಾಕಿಗೆ ಸರಾಸರಿ 300 ರೂ. ದೊರೆಯಲಿ ಎಂದು ಶಾಸಕ ಜಿ.ಡಿ.ಹರೀಶ್ ಗೌಡ ತಿಳಿಸಿದರು.

ಸೋಮವಾರ ಆರಂಭವಾದ ಚಿಲ್ಕುಂದ ತಂಬಾಕು ಮಾರುಕಟ್ಟೆ ಸಂಖ್ಯೆ 62ಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ಕಳೆದ ಬಾರಿ ಪ್ರತಿ ಕೆಜಿಗೆ ಸರಾಸರಿ 270 ರೂ. ಸಿಕ್ಕಿತ್ತು. ಆಂಧ್ರಪ್ರದೇಶದ NLS ಮಾರುಕಟ್ಟೆಯಲ್ಲಿ ಪ್ರತಿ ಕೆಜಿ ತಂಬಾಕಿಗೆ 411 ರೂ. ದೊರೆತಿದೆ. ಆದರೆ ಕರ್ನಾಟಕದ ತಂಬಾಕು ವಿಶ್ವದಲ್ಲೇ ಪ್ರಸಿದ್ಧಿ ಪಡೆದಿರುವುದರಿಂದ ಪ್ರತಿ ಕೆಜಿ ತಂಬಾಕಿಗೆ ಸರಾಸರಿ 300 ರೂ. ದೊರಕಲಿ ಎಂದು ಶುಭ ಕೋರಿದರು.

ಈ ವೇಳೆ ಹಲವು ರೈತರು ಸೆಸ್ ಬಗ್ಗೆ ಶಾಸಕರ ಗಮನ ಸೆಳೆದಾಗ ತಾವು ಈ ಬಗ್ಗೆ ಮಾಜಿ ಪ್ರಧಾನಿ ದೇವೇಗೌಡರ ಗಮನಕ್ಕೆ ತಂದು ಯಾವುದೇ ಸಂದರ್ಭದಲ್ಲೂ ರೈತರಿಗೆ ಅನ್ಯಾಯವಾಗದಂತೆ ನೋಡಿಕೊಳ್ಳುವುದಾಗಿ ತಿಳಿಸಿದರು. ಸೋಮವಾರ ಆರಂಭಗೊಂಡ ಮಾರುಕಟ್ಟೆಗೆ ಒಟ್ಟು 18 ಬೇಲುಗಳು ಬಂದಿದ್ದವು. ಬೆಳಗ್ಗೆ ಪೂಜೆ ನೆರವೇರಿಸಿ ನಂತರ ಹರಾಜಿಗೆ ಚಾಲನೆ ನೀಡಲಾಯಿತು. ಎಲ್ಲಾ ತಂಬಾಕು ಉತ್ತಮ ದರ್ಜೆಯದಾದ್ದರಿಂದ ಪ್ರತಿ ಕೆಜಿಗೆ 290 ರೂ. ದೊರೆಯಿತು. ಐಟಿಸಿ, ಜಿಪಿಐ, ಎಒ, ವೃಷಭ ಸೇರಿದಂತೆ ಹಲವು ಕಂಪನಿಗಳು ಹರಾಜಿನಲ್ಲಿ ಭಾಗವಹಿಸಿದ್ದವು.

ಪ್ರಾದೇಶಿಕ ವ್ಯವಸ್ಥಾಪಕ ಲಕ್ಷ್ಮಣ್ ರಾವ್, ಹರಾಜು ಅಧೀಕ್ಷಕ ಸಿದ್ದರಾಮ್ ಡಾಂಘೆ, ಕ್ಷೇತ್ರಾಧಿಕಾರಿ ಸಂದೀಪ್, ರೂಪ, ಲಿಂಗರಾಜು, ಚಿಲ್ಕುಂದ ಪಿಎಸಿಎಸ್ ಅಧ್ಯಕ್ಷ ಪ್ರೇಂಕುಮಾರ್, ಗ್ರಾಪಂ ಅಧ್ಯಕ್ಷ ಸತೀಶ್, ಸದಸ್ಯ ಜಯಣ್ಣ, ಪಿ.ಪಟ್ಟಣ ತಾಲೂಕು ರೈತ ಮೋರ್ಚಾ ಅಧ್ಯಕ್ಷ ನಿತ್ಯಾನಂದ, ರೈತ ಮುಖಂಡರಾದ ಶಿವಣ್ಣ, ವಿಷಕಂಠಪ್ಪ, ಸಣ್ಣತಮ್ಮೇಗೌಡ ಸೇರಿದಂತೆ ಇತರರಿದ್ದರು.

ಇಂದು ಮೇಘಾಲಯ ರಾಜ್ಯಪಾಲರಿಗೆ ನಾಗರಿಕ ಸನ್ಮಾನ



ಸುದ್ದಿಗೋಷ್ಠಿಯಲ್ಲಿ ಲೋಹಿತ್ ಮಾತನಾಡಿದರು.

ಹುಣಸೂರು, ಅ.7– ನಗರದ ಕಾವೇರಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಅ.8ರಂದು ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರಿಗೆ ನಾಗರಿಕ ಸನ್ಮಾನ ಹಾಗೂ ತಾಲೂಕಿನ ಪ್ರತಿಭಾವಂತ 200ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಕಾವೇರಿ ಪ್ರತಿಭಾ ಪುರಸ್ಕಾರ ನೆರವೇರಿಸಲಾಗುವುದು ಎಂದು ಆಸ್ಪತ್ರೆ ಮುಖ್ಯಸ್ಥ ಡಾ.ಪಿ.ಎಸ್.ಲೋಹಿತ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಕಾವೇರಿ ಆಸ್ಪತ್ರೆ ಆವರಣದಲ್ಲಿ ಬೆಳಗ್ಗೆ 10 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಹುಣಸೂರಿನವರೇ ಆದ ಸಿ.ಹೆಚ್.ವಿಜಯಶಂಕರ್ ಅವರ ಸೇವೆ ಗುರ್ತಿಸಿ ಕೇಂದ್ರ ಸರ್ಕಾರ ರಾಜ್ಯಪಾಲರ ಹುದ್ದೆ ನೀಡಿದ್ದು, ತಾಲೂಕಿನ ಜನತೆ ಪರವಾಗಿ ನಮ್ಮ ಆಸ್ಪತ್ರೆ ವತಿಯಿಂದ ಸನ್ಮಾನಿಸಲಾಗುವುದು ಎಂದರು.

ಟಿಎಪಿಸಿಎಂಎಸ್ ಅಧ್ಯಕ್ಷ ಬಸವಲಿಂಗಯ್ಯ ಮಾತನಾಡಿ, ವೈದ್ಯಕೀಯ, ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಸರ್ಕಾರಿ ಕೋಟಾ ಪಡೆದಿರುವ ಹಾಗೂ 2023–24ನೇ ಸಾಲಿನಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿರುವ 114 ಪಿಯು ವಿದ್ಯಾರ್ಥಿಗಳು, 58 ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು, ಇಂಜಿನಿಯರಿಂಗ್‌ನ 17 ವಿದ್ಯಾರ್ಥಿಗಳು, ವೈದ್ಯಕೀಯ ರಂಗದ 10 ವಿದ್ಯಾರ್ಥಿಗಳು ಹಾಗೂ ಮೂವರು ಕ್ರೀಡಾ ತಾಲೂಕಿನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು ಎಂದರು.

ನಗರಸಭಾ ಸದಸ್ಯ, ಹುಡಾ ಮಾಜಿ ಅಧ್ಯಕ್ಷ ಗಣೇಶ್ ಕುಮಾರಸ್ವಾಮಿ ಮಾತನಾಡಿ, ಕಾರ್ಯಕ್ರಮಕ್ಕೂ ಮುನ್ನಾ ದೇವರಾಜ ಅರಸು ಪುತ್ಥಳಿ ಬಳಿಯಿಂದ ವಿಜಯಶಂಕರ್ ಅವರನ್ನು ಮೆರವಣಿಗೆಯಲ್ಲಿ ಕರೆ ತರಲಾಗುವುದು. ಕಾರ್ಯಕ್ರಮದಲ್ಲಿ ಶಾಸಕ ಜಿ.ಡಿ.ಹರೀಶ್‌ಗೌಡ, ಎಂಎಲ್‌ಸಿಗಳಾದ ಹೆಚ್.ವಿಶ್ವನಾಥ್, ಡಾ.ತಿಮ್ಮಯ್ಯ, ವಿವಿಧ ಮಠಾಧೀಶರು ಭಾಗವಹಿಸಲಿದ್ದಾರೆ ಎಂದರು. ಗೋಷ್ಠಿಯಲ್ಲಿ ದೇವರಾಜ್, ಸತೀಶ್ ಪಾಪಣ್ಣ, ಸುರೇಂದ್ರ, ಸತೀಶ್‌ಕುಮಾರ್ ಇದ್ದರು.

ಶಾಂತಿಪುರದಲ್ಲಿ ತಂಬಾಕು ಹರಾಜು ಪ್ರಕ್ರಿಯೆಗೆ ಚಾಲನೆ

ಬೆಲೆ ತಾರತಮ್ಯ ಸರಿಪಡಿಸಲು ಪ್ರಯತ್ನಿಸುತ್ತೇನೆ

ಸಂಸದ ಸುನೀಲ್ ಬೋಸ್ ಭರವಸೆ

ಹೆಚ್.ಡಿ.ಕೋಟೆ, ಅ.7– ಮುಂದಿನ ದಿನಗಳಲ್ಲಿ ಉನ್ನತ ಮಟ್ಟದ ಅಧಿಕಾರಿಗಳ ಸಭೆ ಕರೆದು ತಂಬಾಕು ರೈತರಿಗೆ ಆಗುತ್ತಿರುವ ಬೆಲೆ ತಾರತಮ್ಯವನ್ನು ಸರಿಪಡಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಸಂಸದ ಸುನೀಲ್ ಬೋಸ್ ಭರವಸೆ ನೀಡಿದರು.

ತಾಲೂಕಿನ ಶಾಂತಿಪುರ ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಸೋಮವಾರ ಪ್ರಕ್ರಿಯೆಗೆ ಶಾಸಕ ಅನಿಲ್ ಜೊತೆಗೂಡಿ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯದಲ್ಲಿ ಮೈಸೂರು ಭಾಗದಲ್ಲಿ ತಂಬಾಕು ಅತೀ ಹೆಚ್ಚು ಬೆಳೆಯಲಾಗುತ್ತದೆ. ಅದರಲ್ಲೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಈ ಭಾಗದ ಹೊಗೆಸೊಪ್ಪಿಗೆ ಹೆಚ್ಚು ಬೇಡಿಕೆ ಇದೆ ಆದರೂ ಬೆಲೆಯಲ್ಲಿ ತಾರತಮ್ಯ ಇದ್ದು, ತಂಬಾಕು ರೈತರು ನಷ್ಟಕ್ಕೆ ಒಳಗಾಗುತ್ತಿದ್ದಾರೆ. ಪ್ರತಿ ವರ್ಷ ಬೆಲೆ ಕಡಿಮೆ ಎಂಬುದು ರೈತರ ಅಳಲು. ನಾನು ಕೇಂದ್ರ ತಂಬಾಕು ಮಂಡಳಿ ಸದಸ್ಯ ಆಗಿದ್ದು, ಮೇಲ್ಮಟ್ಟದಲ್ಲಿ ಚರ್ಚೆ ನಡೆಸಿ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದರು.

ಈ ಬಾರಿ ಕೆಜಿ ತಂಬಾಕಿಗೆ 290 ರೂ. ನೀಡಿದ್ದು, ಇದು ಯಾವುದಕ್ಕೂ ಸಾಲದು. ರೈತರು ಒಂದು ಕೆಜಿ ಹೊಗೆಸೊಪ್ಪು ಬೆಳೆಯಲು 250 ರಿಂದ 260 ರೂ. ಖರ್ಚು ಮಾಡುತ್ತಿದ್ದು, ಅಧಿಕಾರಿಗಳು ತಂಬಾಕು ಖರೀದಿದಾರರಿಂದ 350 ರೂ. ಕೊಡಿಸಿದರೆ ಮಾತ್ರ ತಂಬಾಕು ರೈತರಿಗೆ ಅನುಕೂಲ ಆಗಲಿದೆ ಎಂದರು.



ಹರಾಜು ಪ್ರಕ್ರಿಯೆಗೆ ಸಂಸದ ಸುನೀಲ್ ಬೋಸ್, ಶಾಸಕ ಅನಿಲ್ ಚಾಲನೆ ನೀಡಿದರು.

ತಾಲೂಕು ಮಟ್ಟದ ಅಧಿಕಾರಿಗಳು ತಮ್ಮ ಉನ್ನತ ಮಟ್ಟದ ಅಧಿಕಾರಿಗಳ ಮಾರ್ಗದರ್ಶನದಲ್ಲಿ ದರ ನಿಗದಿ ಮಾಡುತ್ತಿದ್ದಾರೆ. ಇವರು ಯಾವುದೇ ನಿರ್ಧಾರ ತೆಗೆದುಕೊಂಡು ರೈತರಿಗೆ ಅನುಕೂಲ ಮಾಡಲು ಸಾಧ್ಯವಿಲ್ಲ ಎಂದು ತಿಳಿಸಿದರು. ಮೈಸೂರಿನ ಭಾಗದ ರೈತರ ಸಮಸ್ಯೆ ಪರಿಹರಿಸಲು ದಸರಾ ಮುಗಿದ ನಂತರ ಉನ್ನತ ಮಟ್ಟದ ಅಧಿಕಾರಿಗಳ ಸಭೆ ಕರೆದು ಚರ್ಚೆ ಮಾಡಲಾಗುತ್ತದೆ. ಸ್ವಲ್ಪ ದಿನ ಪರಿಹಾರ ಸಿಗಲು ವಿಳಂಬವಾದರೂ ಶಾಶ್ವತ ಪರಿಹಾರ ಸಿಗಬೇಕು. ಆ ದಿಕ್ಕಿನಲ್ಲಿ ನಾನು ಕೆಲಸ ಮಾಡುತ್ತೇನೆ ಎಂದರು.

ರೈತರಿಗೆ ಅನಾನುಕೂಲ ಆಗದ ರೀತಿ ತಂಬಾಕು ಮಂಡಳಿ ಅಧಿಕಾರಿಗಳು ಮುಂದಿನ ದಿನಗಳಲ್ಲಿ ಉತ್ತಮ ದರ ಸಿಗಲು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು. ರೈತರು ಮಾತನಾಡಿ, ತಂಬಾಕಿಗೆ ಬೆಲೆ ನಿಗದಿ ಮಾಡುವಲ್ಲಿ ಅಧಿಕಾರಿಗಳು ತಾರತಮ್ಯ ಮಾಡುತ್ತಿದ್ದು, ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆ. ಒಬ್ಬ ಲೈಸೆನ್ಸ್‌ದಾರನಿಂದ 500 ರೂ. ಇನ್ಸೂರೆನ್ಸ್ ಹಣ ಕಟ್ಟಿಸಿಕೊಳ್ಳುತ್ತಾರೆ. ಆದರೆ ಪರಿಹಾರ ನೀಡುವುದು ಕಡಿಮೆ. ಒಂದು ಕೆಜಿ ಹೊಗೆಸೊಪ್ಪಿಗೆ 290 ರೂ. ನೀಡುತ್ತಿದ್ದು ಇದು ಸಾಲುತ್ತಿಲ್ಲ. ಆಂಧ್ರ ಪ್ರದೇಶದಲ್ಲಿ ಈ ದರ ನೀಡಿದರೆ ಅವರಿಗೆ ಯಾವುದೇ ತೊಂದರೆ ಇಲ್ಲ. ಅಲ್ಲಿ ಇರುವುದು ಎಲ್ಲಾ ದೊಡ್ಡ ರೈತರು. ಇಲ್ಲಿರುವವರು ಸಣ್ಣ ರೈತರು, ಉತ್ತಮ ದರ್ಜೆಯ ಸೊಪ್ಪು ಸಿಗುವುದು ಇಲ್ಲಿ. ಹಾಗಾಗಿ ನೂತನ ಸಂಸದರು ರಾಜ್ಯದ ತಂಬಾಕು ರೈತರ ಪರವಾಗಿ ಹೋರಾಟ ಮಾಡಬೇಕು ಎಂದು ಮನವಿ ಮಾಡಿದರು. ಈ ವೇಳೆ ತಂಬಾಕು ಅಧೀಕ್ಷಕ ನಿವೇಶ ಕುಮಾರ್ ಪಾಂಡೆ, ಜಿಲ್ಲಾ ರೈತ ಸಂಘದ ಅಧ್ಯಕ್ಷ ಕುಮಾರ್, ರೈತರಾದ ಕಾಳೇಗೌಡ, ಮೊತ್ತ ಬಸವರಾಜಪ್ಪ, ಪೃಥ್ವಿ ಕುಮಾರ್, ಸಂಪತ್, ಮನು, ಕುಮಾರ್, ರಾಜೇಂದ್ರ, ಬೋರೇಗೌಡ, ಸತೀಶ್, ಕೆಂಪರಾಜು, ರಾಜು, ಅಧಿಕಾರಿಗಳಾದ ಸ್ವಾಮಿ, ಮಂಜು, ಸುಗಂಧರಾಜು, ಸುನಿಲ್ ಕುಮಾರ್, ನಯನ, ಸಂಗೀತ, ಶಿವಕುಮಾರ್, ಮಾದೇವಸ್ವಾಮಿ ಇದ್ದರು.

> ತಾಲೂಕಿನಲ್ಲಿ 45 ಸಾವಿರ ತಂಬಾಕು ರೈತರು ಇದ್ದಾರೆ. 75 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಬೆಳೆ ಬೆಳೆದಿದ್ದಾರೆ. ಆದರೆ ಪ್ರತಿವರ್ಷ ಮತ್ತಮ ಬೆಲೆ ಸಿಗದೆ ತುಂಬಾ ಸಂಕಷ್ಟಕ್ಕೆ ಒಳಗಾಗುತ್ತಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ತಾಲೂಕಿನಲ್ಲಿ ಬೆಳೆಯುವ ತಂಬಾಕಿಗೆ ಉತ್ತಮ ಬೇಡಿಕೆ ಇದೆ ಆದರೂ ಕೂಡ ಉತ್ತಮ ಬೆಲೆ ಸಿಗುತ್ತಿಲ್ಲ. ತಾಲೂಕಿನಲ್ಲಿ ಹೆಚ್ಚು ರೈತರು ಹೊಗೆಸೊಪ್ಪನ್ನು ಅವಲಂಬಿಸಿದ್ದಾರೆ. ಉತ್ತಮ ದರ ಸಿಕ್ಕಿದರೆ ಮಾತ್ರ ರೈತ ಉಳಿಯಲು ಸಾಧ್ಯ. ಹಾಗಾಗಿ ನೂತನ ಸಂಸದರು ತಂಬಾಕು ರೈತರಿಗೆ ಉತ್ತಮ ಬೆಲೆ ಕೊಡಿಸಲು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕು. ಫೆಬ್ರವರಿವರೆಗೆ ತಂಬಾಕು ಹರಾಜು ಪ್ರಕ್ರಿಯೆ ನಡೆಯುತ್ತದೆ. ನಾನು ಮತ್ತು ಸಂಸದರು ಆಗಾಗ್ಗೆ ಬಂದು ವೀಕ್ಷಿಸುತ್ತೇವೆ.
>
> – ಅನಿಲ್, ಶಾಸಕ.

ಯೋಗಾಸನದಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ



ವಿಜೇತ ಯೋಗಪಟುಗಳೊಂದಿಗೆ ಶಿಕ್ಷಕರನ್ನು ಕಾಣಬಹುದು.

ನಂಜನಗೂಡು, ಅ.7– ಶಾಲಾ ಶಿಕ್ಷಣ ಇಲಾಖೆ ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಆಯೋಜಿಸಿದ್ದ ಮೈಸೂರು ವಿಭಾಗ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಸುತ್ತೂರು ಜೆಎಸ್‌ಎಸ್ ವಸತಿ ಶಾಲೆಯ ಮೂವರು ಯೋಗಪಟುಗಳು ರಾಜ್ಯಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಇತ್ತೀಚಿಗೆ ಕಾರ್ಕಳದ ಶ್ರೀಮದ್ ಭುವನೇಂದ್ರ ಶಾಲೆಯಲ್ಲಿ ನಡೆದ 17 ವರ್ಷದೊಳಗಿನ ಯೋಗಾಸನ ಸ್ಪರ್ಧೆಯಲ್ಲಿ ಮೈಸೂರು, ಕೊಡಗು, ದಕ್ಷಿಣ ಕನ್ನಡ, ಉಡುಪಿ, ಹಾಸನ, ಮಂಡ್ಯ, ಚಾಮರಾಜನಗರ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ನೂರಾರು ಸ್ಪರ್ಧಿಗಳು ಭಾಗವಹಿಸಿದ್ದರು. ಸ್ಪರ್ಧೆಯಲ್ಲಿ ಸುತ್ತೂರು ಶಾಲೆಯ ಮೂವರು ವಿದ್ಯಾರ್ಥಿಗಳಾದ ಸಮರ್ಥ ಈರಣ್ಣ, ಸಂದೀಪ್ ದ್ಯಾಮನಗೌಡ ಹಾಗೂ ಮನೋಜ್ ಐರಾಣಿ ವಿಜೇತರಾಗಿ ಚಿತ್ರದುರ್ಗದ ಸಿರಿಗೆರೆಯಲ್ಲಿ ಅ.9 ಮತ್ತು 10ರಂದು ನಡೆಯುವ ರಾಜ್ಯಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ.

ಮೈಸೂರು ಮಿತ್ರ

ದಸರಾ ಗಜಪಡೆಗೆ ತೂಕದ ಪರೀಕ್ಷೆ

ಕ್ಯಾಪ್ಟನ್ ಅಭಿಮನ್ಯು ಬಹು ಭಾರ



ದಸರಾ ಗಜಪಡೆಯ ತೂಕದ ವಿವರ

ಆನೆ ಹೆಸರು	ಬಂದಾಗ ತೂಕ	ಈಗಿನ ತೂಕ	ತೂಕದಲ್ಲಿ ಹೆಚ್ಚಳ
ಅಭಿಮನ್ಯು	5560	5820	260 ಕೆಜಿ
ಲಕ್ಷ್ಮಿ	2480	2625	60 ಕೆಜಿ
ಭೀಮ	4945	5380	435 ಕೆಜಿ
ಏಕಲವ್ಯ	4730	5095	365 ಕೆಜಿ
ಧನಂಜಯ	5155	5255	140 ಕೆಜಿ
ರೋಹಿತ	3625	3930	305 ಕೆಜಿ
ಕಂಜನ್	4515	4725	210 ಕೆಜಿ
ಗೋಪಿ	4970	5280	310 ಕೆಜಿ
ಪ್ರಶಾಂತ	4875	5240	365 ಕೆಜಿ
ಮಹೇಂದ್ರ	4910	5150	240 ಕೆಜಿ
ವರಲಕ್ಷ್ಮಿ	3495	3555	60 ಕೆಜಿ
ಸುಗ್ರೀವ	5190	5540	355 ಕೆಜಿ
ಹಿರಣ್ಯ	2930	3160	230 ಕೆಜಿ
ದೊಡ್ಡಹರವೆ ಲಕ್ಷ್ಮಿ	3485	3570	85 ಕೆಜಿ

ಮೈಸೂರು,ಅ.7(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 14 ಆನೆಗಳಿಗೆ ಸೋಮ ವಾರ ಅಂತಿಮ ಹಂತದ ತೂಕದ ಪರೀಕ್ಷೆ ನಡೆಸಲಾಗಿದ್ದು, ಅಭಿಮನ್ಯು ತೂಕ ದಲ್ಲಿ ಮೊದಲ ಸ್ಥಾನ ಪಡೆದರೆ ಭೀಮ ಮೈಸೂರಿಗೆ ಬಂದ ನಂತರ ಅತೀ ಹೆಚ್ಚು ತೂಕ ಹೊಂದಿದ ಆನೆಯಾಗಿ ಹೊರಹೊಮ್ಮಿದೆ.

ಪ್ರಸಕ್ತ ಸಾಲಿನ ದಸರಾ ಮಹೋತ್ಸವ ದಲ್ಲಿ ಪಾಲ್ಗೊಳ್ಳಲು ಈ ಬಾರಿ 14 ಆನೆಗಳನ್ನು ಆಯ್ಕೆ ಮಾಡಲಾಗಿದ್ದು, ಆ.21ರಂದು ಮೊದಲ ತಂಡದಲ್ಲಿ 9, ಸೆ.5ರಂದು ಎರಡನೇ ತಂಡದಲ್ಲಿ 5 ಆನೆಗಳು ಮೈಸೂರಿಗೆ ಆಗಮಿಸಿದ್ದವು. ಅರಮನೆ ಪ್ರವೇಶಿಸಿದ ನಂತರ ಸಂಪ್ರದಾಯ ದಂತೆ ಮೊದಲ ತಂಡದ 9 ಆನೆಗಳಿಗೆ ಆ.24ರಂದು, ಎರಡನೇ ತಂಡದ 5 ಆನೆಗಳಿಗೆ ಸೆ.6ರಂದು ಮೈಸೂರಿನ ಧನ್ವಂತರಿ ರಸ್ತೆಯಲ್ಲಿರುವ ಸಾಯಿರಾಂ ಅಂಡ್ ಕೋ ಎಲೆಕ್ಟ್ರಾನಿಕ್ ತೂಕದ ಕೇಂದ್ರದಲ್ಲಿ ತೂಕ ಮಾಡಿಸಲಾಗಿತ್ತು ಎಲ್ಲಾ 14 ಆನೆಗಳ ತೂಕದ ವಿವರವನ್ನು ದಾಖಲೀಕರಿಸಲಾಗಿತ್ತು

ಪ್ರತಿ ವರ್ಷ ಆಯುಧ ಪೂಜೆಯ ದಿನ ಕೊನೆಯದಾಗಿ ಆನೆಗಳಿಗೆ ತೂಕ ಮಾಡಿ ಸುವ ಪದ್ಧತಿ ಇದ್ದು, ಈ ಬಾರಿ ಐದು ದಿನ ಮುನ್ನವೇ ಆನೆಗಳಿಗೆ ತೂಕದ ಪರೀಕ್ಷೆ ನಡೆಸಲಾಗಿದೆ. ದೀಪಾಲಂಕಾರ ವೀಕ್ಷಣೆಗೆ ಸಂಜೆ ವೇಳೆಗೆ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದ್ದು, ಸಂಜೆ ವೇಳೆ ಅರಮನೆ ಸುತ್ತಮುತ್ತಲಿನ ರಸ್ತೆ ಸೇರಿದಂತೆ ಮೈಸೂರಿನ ಪ್ರಮುಖ ರಸ್ತೆಗಳಲ್ಲಿ ಟ್ರಾಫಿಕ್ ಜಾಮ್ ಉಂಟಾ ಗುತ್ತಿದೆ. ಈ ಹಿನ್ನೆಲೆಯಲ್ಲಿ ಆಯುಧ ಪೂಜೆಯ ದಿನ ವಾಹನ ದಟ್ಟಣೆ ನಡುವೆ ಆನೆಗಳನ್ನು ಕರೆದೊಯ್ಯಲು ಕಷ್ಟಸಾಧ್ಯವಾಗ ಬಹುದೆಂಬ ಮುಂದಾಲೋಚನೆಯಿಂದ ಇಂದು ದಸರಾ ಗಜಪಡೆಗೆ ಅಂತಿಮ ಹಂತದ ತೂಕದ ಪರೀಕ್ಷೆ ನಡೆಸಲಾಯಿತು.

ಸಾಲಾಗಿ ಬಂದ ಆನೆಗಳು: ಅರಮನೆಯಿಂದ ಸೋಮವಾರ ಬೆಳಗ್ಗೆ ಹೊರಬಂದ ದಸರಾ ಗಜಪಡೆ ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ಧನ್ವಂತರಿ ರಸ್ತೆ ಮೂಲಕ ಸಾಯಿರಾಂ ಅಂಡ್ ಕೋ ತೂಕದ ಕೇಂದ್ರಕ್ಕೆ ಆಗಮಿಸಿದವು. ಅರಣ್ಯ ಮತ್ತು ಪೊಲೀಸ್ ಸಿಬ್ಬಂದಿಗಳ ಭದ್ರತೆಯಲ್ಲಿ ಆಗಮಿಸಿದ ಗಜಪಡೆ ಸದಸ್ಯರನ್ನು ಸರದಿ ಸಾಲಿನಲ್ಲಿ ತೂಕ ಮಾಡಿ ದಾಖಲೀಕರಿಸಲಾಯಿತು.

ಆನೆಗಳ ಮೈಕಟ್ಟಿದ ಪೌಷ್ಟಿಕ ಆಹಾರ: ಜಂಬೂಸವಾರಿಯಲ್ಲಿ ಅಂಬಾರಿ ಹೊರುವ ಸಾಮರ್ಥ್ಯ ವೃದ್ಧಿಸುವ ಹಾಗೂ ಅರಮನೆಯಿಂದ ಬನ್ನಿ ಮಂಟಪದ ಪಂಜಿನ ಕವಾಯತ್ ಮೈದಾನದವರೆಗೂ ಸಾಗಲು ಶಕ್ತಿ ಹೆಚ್ಚಿಸಲು ಪೂರಕವಾದ ಪ್ರಮಾಣದಲ್ಲಿ ಎಲ್ಲಾ ಆನೆಗಳಿಗೂ ಪೌಷ್ಟಿಕ ಆಹಾರ ಪೂರೈಸಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಎಲ್ಲಾ ಆನೆಗಳು ಮೈ ಕಟ್ಟಲು ಹಾಗೂ ತೂಕ ಹೆಚ್ಚಿಸಿಕೊಳ್ಳಲು ಪೌಷ್ಟಿಕ ಆಹಾರ ನೆರವಾಗಿದೆ. ಅಲ್ಲದೆ, ಆನೆಗಳ ಆರೋಗ್ಯ ಸ್ಥಿತಿ ಉತ್ತಮವಾಗಿದ್ದು, ಎಲ್ಲಾ ಆನೆಗಳ ದೈಹಿಕ ಸಾಮರ್ಥ್ಯ ಹೆಚ್ಚಾಗಿರುವುದು ಅರಣ್ಯ ಇಲಾಖೆಯ ಅಧಿಕಾರಿಗಳಲ್ಲಿ ಸಮಾಧಾನ ತಂದಿತ್ತಿದೆ. 14 ಆನೆಗಳಲ್ಲಿ ಅಭಿಮನ್ಯು ಹೆಚ್ಚು ತೂಕವುಳ್ಳ ಆನೆಯಾಗಿದ್ದರೆ, ಪೌಷ್ಟಿಕ ಆಹಾರ ಸೇವನೆಯಿಂದ ತೂಕ ಹೆಚ್ಚಿಸಿಕೊಂಡ ಆನೆಗಳಲ್ಲಿ ಭೀಮ ಮೊದಲಿಗನಾಗಿದ್ದಾನೆ.

ಈ ಸಂದರ್ಭದಲ್ಲಿ ಡಿಸಿಎಫ್ ಡಾ.ಐ.ಪ್ರಭುಗೌಡ, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ರೆಹಮಾನ್, ಸಹಾಯಕರಾದ ಅಕ್ರಂ, ರಂಗರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಜಂಬೂಸವಾರಿಗೆ ಗಜಪಡೆ ಸಜ್ಜು

ಮೈಸೂರು,ಅ.7(ಎಂಟಿವೈ)– ದಸರಾ ಮಹೋತ್ಸವ ಜಂಬೂಸವಾರಿಯಲ್ಲಿ ಪಾಲ್ಗೊಳ್ಳಲು ಗಜಪಡೆ ಹಾಗೂ ಮಾವುತ, ಕಾವಾಡಿಗಳು ಮಾನಸಿಕವಾಗಿ ಸಜ್ಜಾಗಿದ್ದು, ಗಜಪಡೆಯ ಆರೋಗ್ಯದ ಮೇಲೆ ಕಾಳಜಿ ವಹಿಸಲಾಗಿದೆ ಎಂದು ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ತಿಳಿಸಿದ್ದಾರೆ.

ದಸರಾ ಗಜಪಡೆಗೆ ತೂಕ ಮಾಡಿಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಅಂತಿಮ ತೂಕದ ಪರೀಕ್ಷೆಯಿಂದ ಗಜಪಡೆಯ ಆರೋಗ್ಯದ ಬಗ್ಗೆ ಸ್ಪಷ್ಟ ಮಾಹಿತಿ ಸಿಕ್ಕಂತಾಗಿದೆ. ಎಲ್ಲಾ ಆನೆಗಳು ಪೌಷ್ಟಿಕ ಆಹಾರ ಸೇವನೆಯಿಂದ ಶಕ್ತಿ ಹೆಚ್ಚಿಸಿಕೊಂಡಿವೆ. ಎಲ್ಲಾ ಆನೆಗಳ ತೂಕದಲ್ಲಿ 60 ರಿಂದ 435 ಕೆಜಿ ಹೆಚ್ಚಳವಾಗಿರುವುದು ಕಂಡು ಬಂದಿದೆ. ಭೀಮ ಆನೆ 435 ಕೆಜಿ, ಏಕಲವ್ಯ 365 ಕೆಜಿ ತೂಕ ಹೆಚ್ಚಿಸಿಕೊಂಡಿವೆ. ಎಲ್ಲಾ ಆನೆಗಳು ಜಂಬೂಸವಾರಿ ಮೆರವಣಿಗೆಯಲ್ಲಿ ಪಾಲ್ಗೊಳ್ಳಲು ಸಮರ್ಥವಾಗಿವೆ. ಆನೆಗಳ ತೂಕದಲ್ಲಿ ಹೆಚ್ಚಳವಾಗಿ ರುವುದರಿಂದ ಅವುಗಳ ದೈಹಿಕ ಸಾಮರ್ಥ್ಯ ಹೆಚ್ಚಳವಾಗಿರುವುದು ದೃಢಪಟ್ಟಿದೆ ಎಂದರು.

ಕುಮ್ಕಿ ಆನೆಯಾಗಿ ಲಕ್ಷ್ಮೀ, ಹಿರಣ್ಯ: ಶ್ರೀರಂಗಪಟ್ಟಣ ದಸರಾದಲ್ಲಿ ಪಾಲ್ಗೊಂಡಿದ್ದ ಲಕ್ಷ್ಮಿ ಆನೆ ವಿಚಲಿತ ಗೊಂಡ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆ ನೀಡಿದ ಅವರು, ಶ್ರೀರಂಗಪಟ್ಟಣ ದಸರಾಗೂ ಒಂದು ದಿನ ಮೊದಲೇ ಅಲ್ಲಿಗೆ ಹೋಗಿದ್ದ ಆನೆಗಳಿಗೆ ಅಂದು ರಾತ್ರಿ ಕಬ್ಬು ನೀಡಿ ಆರೈಕೆ ಮಾಡಲಾಗಿತ್ತು. ಮರುದಿನ ಶ್ರೀರಂಗಪಟ್ಟಣ ದಸರಾ ನಡೆಯುವ ಸ್ಥಳಕ್ಕೆ ಕರೆದೊಯ್ಯಲು ಲಾರಿಗೆ ಹತ್ತಿಸಲು ಪ್ರಯತ್ನಿಸಿದಾಗ ಅದು ಹಿಂದೇಟು ಹಾಕಿ ಓಡಿತ್ತು. ಅದನ್ನು ನಮ್ಮ ಮಾವುತ, ಕಾವಾಡಿಗಳು ಸಮಾಧಾನಿಸಿ ನಿಯಂತ್ರಣಕ್ಕೆ ತಂದಿದ್ದರು. ಬಳಿಕ ಲಕ್ಷಾಂತರ ಜನರ ಸಮ್ಮುಖದಲ್ಲಿ ಅಂಬಾರಿ ಹೊತ್ತಿದ್ದ ಮಹೇಂದ್ರ ಆನೆಯೊಂದಿಗೆ ಕುಮ್ಕಿ ಆನೆಯಾಗಿ ಹಿರಣ್ಯ ಹಾಗೂ ಲಕ್ಷ್ಮೀ ಯಶಸ್ವಿಯಾಗಿ ಸಾಗಿವೆ. ಆ ಕಾರಣದಿಂದ ಜಂಬೂಸವಾರಿಯಲ್ಲಿ ಎಲ್ಲಾ ಆನೆಗಳು ಯಶಸ್ವಿಯಾಗಿ ಪಾಲ್ಗೊಳ್ಳಲಿವೆ. ಜನ ಆತಂಕ ಪಡುವ ಅಗತ್ಯವಿಲ್ಲ ಎಂದರು.

ನಿಶಾನೆ ಆನೆಯಾಗಿ ಧನಂಜಯ, ಗೋಪಿ ನೌಫತ್

ಮೈಸೂರು,ಅ.7(ಎಂಟಿವೈ)– ಜಂಬೂಸವಾರಿ ಮೆರವಣಿಗೆಯಲ್ಲಿ ಈ ಬಾರಿ ನಿಶಾನೆ ಆನೆಯಾಗಿ ಧನಂಜಯ ಹಾಗೂ ನೌಫತ್ ಆನೆಯಾಗಿ ಗೋಪಿ ಯನ್ನು ಆಯ್ಕೆ ಮಾಡಲಾಗಿದೆ ಎಂದು ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ತಿಳಿಸಿದ್ದಾರೆ.



ಜಂಬೂಸವಾರಿ ಮೆರವಣಿಗೆಯ ಆನೆಗಳ ಜವಾಬ್ದಾರಿಯನ್ನು ಹಂಚಿಕೆ ಮಾಡಲಾಗಿದ್ದು, ಧನಂಜಯ ಆನೆ ಮೆರವಣಿಗೆಯ ಮುಂಚೂಣಿಯಲ್ಲಿ ನಿಶಾನೆ ಆನೆಯಾಗಿ ಸಾಗಲಿದೆ. ಅದರ ಬಳಿಕ ನೌಫತ್ ಆನೆಯಾಗಿ ಗಜಪಡೆಯ ಹಿರಿಯ ಸದಸ್ಯ ಗೋಪಿ ಸಾಗಲಿದೆ. ಈ ಬಾರಿ 9 ಆನೆಗಳು ಜಂಬೂಸವಾರಿ ಮೆರವಣಿಗೆಯಲ್ಲಿ ಸಾಗಲಿವೆ. ಪಟ್ಟದ ಆನೆಯಾಗಿ ಕಂಜನ್, ಪಟ್ಟದ ನಿಶಾನೆ ಆನೆಯಾಗಿ ಭೀಮ ಈಗಾಗಲೆ ಕರ್ತವ್ಯ ನಿರ್ವಹಿಸುತ್ತಿದೆ ಎಂದರು.

ನಿಶಾನೆ ಆನೆಯ ಪಾತ್ರ: ಸಾಮಾನ್ಯವಾಗಿ ಜಂಬೂ ಸವಾರಿ ಮೆರವಣಿಗೆಯಲ್ಲಿ ನಿಶಾನೆ ಹಾಗೂ ನೌಫತ್ ಆನೆಯಾಗಿ ಹಿರಿಯ ಆನೆಗಳನ್ನೇ ಕಳುಹಿಸುವ ವಾಡಿಕೆ. ಮೆರವಣಿಗೆಯಲ್ಲಿ ಸಾಲಾನೆಯಾಗಿ ಸಾಗುವ ಆನೆಗಳನ್ನು ದೊಡ್ಡಣ್ಣನಂತೆ ನಿಯಂತ್ರಿಸುವ ಪಾತ್ರ ನಿಶಾನೆ ಹಾಗೂ ನೌಫತ್ ಆನೆಯದ್ದಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಬಾರಿಯೂ ಹಿರಿಯ ಗಂಡಾನೆಯೇ ನಿಶಾನೆ ಆನೆಯಾಗಿ ಸಾಗಲಿದೆ.

ಈ ಹಿಂದೆ ಅಂಬಾರಿ ಹೊರುವ ಜವಾಬ್ದಾರಿಯಿಂದ ನಿವೃತ್ತಿ ಹೊಂದಿದ ನಂತರ ಬಲರಾಮ ಆನೆ ನಿಶಾನೆ ಆನೆಯಾಗಿ ಸಾಗಿತ್ತು. ಆ ವೇಳೆ ನೌಫತ್ ಆನೆಯಾಗಿ ಅಭಿಮನ್ಯು ಹೆಜ್ಜೆ ಹಾಕಿದ್ದರೆ, ಅರ್ಜುನ ಅಂಬಾರಿ ಹೊತ್ತು ಸಾಗಿತ್ತು 2019ರಲ್ಲಿ ಅಂಬಾರಿ ಹೊತ್ತು ನಿವೃತ್ತಿ ಹೊಂದಿದ ನಂತರ 2020 ಮತ್ತು 2021ರಲ್ಲಿ ಸರಳ ದಸರಾ ಆಚರಿಸಿ ಅರಮನೆ ಆವರಣಕ್ಕಷ್ಟೇ ಜಂಬೂಸವಾರಿ ಸೀಮಿತ ಗೊಂಡಿತ್ತು. ಈ ಹಿನ್ನೆಲೆಯಲ್ಲಿ ಎರಡು ಬಾರಿ ದಸರಾ ಮಹೋತ್ಸವದಿಂದ ದೂರವುಳಿದಿದ್ದ ಅರ್ಜುನ ಕಳೆದ ವರ್ಷ ನಿಶಾನೆ ಆನೆಯಾಗಿ ಮೆರವಣಿಗೆಯಲ್ಲಿ ಸಾಗಿತ್ತು ಈ ಬಾರಿ ಬಲರಾಮ, ಅರ್ಜುನನ ಅನುಪಸ್ಥಿತಿಯಲ್ಲಿ ನಡೆಯುತ್ತಿರುವ ಜಂಬೂಸವಾರಿ ಮೆರವಣಿಗೆಯಲ್ಲಿ ಧನಂಜಯನ ನಿಶಾನೆ ಆನೆಯಾಗಿ ಸಾಗುತ್ತಿದೆ.

ವಿಸ್ತಾರ ಸಹಸ್ರ ಚಂಡಿಕಾ ಹೋಮ





ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಶರನ್ನವರಾತ್ರಿ ಪ್ರಯುಕ್ತ ನಡೆಯುತ್ತಿರುವ ವಿಸ್ತಾರ ಸಹಸ್ರ ಚಂಡಿಕಾ ಹೋಮದ ಐದನೇ ದಿನವಾದ ಸೋಮವಾರ ವೇದಬ್ರಹ್ಮ ಶ್ರೀ ಭಾನುಪ್ರಕಾಶ ಶರ್ಮ ನೇತೃತ್ವದಲ್ಲಿ ನಡೆದ ಪೂರ್ಣಾಹುತಿಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ್ ಹಾರ್ನಳ್ಳಿ, ಮಹಾಸಭಾದ ಮೈಸೂರು ಜಿಲ್ಲಾಧ್ಯಕ್ಷ ಡಿ.ಟಿ. ಪ್ರಕಾಶ್ ಮುಂತಾದವರು ಭಾಗವಹಿಸಿದ್ದರು.

ಪುಸ್ತಕಗಳಿರುವ ಸ್ಥಳ ಓದುಗನ ಪಾಲಿಗೆ ದೇವರ ಮನೆ

ಹಿರಿಯ ಸಾಹಿತಿ ಡಾ.ಬಸವರಾಜ ಸಾದರ ಅಭಿಮತ

ಮೈಸೂರು, ಅ.7(ಎಸ್‌ಪಿಎನ್)– ಒಂದು ಮನೆಯಲ್ಲಿ ಪುಟ್ಟ ಪುಸ್ತಕಗಳಿರುವ ಸ್ಥಳ ಓದುಗನಿಗೆ ದೇವರ ಕೋಣೆ ಇದ್ದಂತೆ ಎಂದು ಹಿರಿಯ ಸಾಹಿತಿ ಡಾ.ಬಸವ ರಾಜ ಸಾದರ ಅಭಿಪ್ರಾಯಪಟ್ಟರು.

ಮೈಸೂರು ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ದಸರಾ ಪುಸ್ತಕ ಮೇಳ ಉಪಸಮಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಸಹಯೋಗದೊಂದಿಗೆ ಆಯೋಜಿಸಿದ್ದ 'ಸೆಲ್ಫಿ ವಿತ್ ಸಾಹಿತಿ' ದಸರಾ ಪುಸ್ತಕ ಮೇಳದ ರಿಯಾಯಿತಿ ಮಾರಾಟ ಮೇಳ ದಲ್ಲಿ ಭಾಗವಹಿಸಿ ಮಾತನಾಡಿದರು.

ಯಾವುದೇ ವ್ಯಕ್ತಿ ಒಳ್ಳೆಯ ಪುಸ್ತಕ ಓದುವುದನ್ನು ಅಭ್ಯಾಸ ಮಾಡಿಕೊಳ್ಳ ಬೇಕು. ಅಂತಹ ವ್ಯಕ್ತಿಯ ಭಾವನೆಯಲ್ಲಿ ಸಾಕಷ್ಟು ಸುಧಾರಣೆಯಾಗಲಿದೆ. ಇದಕ್ಕೆ ಸ್ಪಷ್ಟ ಉದಾಹರಣೆ ಮಹಾತ್ಮ ಗಾಂಧೀಜಿ ಅವರ ವ್ಯಕ್ತಿತ್ವ ಬದಲಾವಣೆಯ ಘಟನೆ ಗಳನ್ನು ಉಲ್ಲೇಖಿಸಿದರು. ದಸರಾ ನೋಡಲು ಆಗಮಿಸುವ ಪೋಷಕರು, ಇತರೆ ಕಾರ್ಯ ಕ್ರಮಗಳ ಜೊತೆಗೆ ಪುಸ್ತಕ ಮೇಳಕ್ಕೂ ತಮ್ಮ ಮಕ್ಕಳೊಂದಿಗೆ ಆಗಮಿಸಬೇಕು. ಇದರಿಂದ ಮಕ್ಕಳ ಜ್ಞಾನದ ಹಸಿವು ಹೆಚ್ಚಾಗುತ್ತದೆ ಎಂದು ತಿಳಿಸಿದರು.



'ಸೆಲ್ಫಿ ವಿತ್ ಸಾಹಿತಿ' ದಸರಾ ಪುಸ್ತಕ ಮೇಳದ ರಿಯಾಯಿತಿ ಮಾರಾಟ ಮೇಳದಲ್ಲಿ ಹಿರಿಯ ಸಾಹಿತಿ ಡಾ.ಬಸವರಾಜ ಸಾದರ ಅವರೊಂದಿಗೆ ಉಪಸಮಿತಿ ಸದಸ್ಯರಿದ್ದರು.

ಪ್ರಸ್ತುತ ಜಗತ್ತಿನಲ್ಲಿ ತಂತ್ರಜ್ಞಾನ ನಾಗ ಲೋಟದಲ್ಲಿ ಹೋಗುತ್ತಿದೆ. ಯುವಕರೂ ಸಹ ಇದರ ಜೊತೆ ಸಾಗುತ್ತಿದ್ದಾರೆ. ಇದಕ್ಕೆ ತಕ್ಕಂತೆ ಪ್ರೀತಿಯ ಪುಸ್ತಕೋದ್ಯಮ ಸಾಗಲು ಪ್ರಕಾಶಕರು ಸಜ್ಜಾಗಬೇಕು. ದಸರಾ ಪುಸ್ತಕ ಮೇಳದಲ್ಲಿ ನಾಡಿನ ಎಲ್ಲಾ ಭಾಗದ ಲೇಖಕರ ಪುಸ್ತಕಗಳು ಲಭ್ಯವಿದೆ. ಇದನ್ನು ಪ್ರಜ್ಞಾವಂತರು ಸದುಪಯೋಗ ಪಡಿಸಿಕೊಳ್ಳುವಂತೆ ಮನವಿ ಮಾಡಿದರು.

ಒಂದು ಪುಸ್ತಕ ಖರೀದಿ ಕಡ್ಡಾಯ ಮಾಡಿ: ದಸರಾ ಮಹೋತ್ಸವ ಕಣ್ತುಂಬಿಕೊಳ್ಳಲು ಬರುವ ಗ್ರಾಹಕ ಒಂದು ಪುಸ್ತಕ ಖರೀದಿ ಸುವುದು ಕಡ್ಡಾಯ ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಬೇಕು. ಈ ನೀತಿ ಜಾರಿಗೆ ತರಲು ಎಲ್ಲಾ ಚಿಂತಕರು, ಪ್ರಜ್ಞಾವಂತರು ಸರ್ಕಾರಕ್ಕೆ ಸಲಹೆ ನೀಡಬೇಕು ಎಂದು ಒತ್ತಾಯಿಸಿದರು.

ಡಿಜಿಟಲ್ ಯುಗದಲ್ಲಿ ಪುಸ್ತಕೋದ್ಯಮ ವನ್ನು ಹೇಗೆ ಬೆಳೆಸಬೇಕು? ಓದುಗನ ಮನಸ್ಥಿತಿ ಹೇಗಿದೆ ಎಂಬುದನ್ನು ಮೊದಲು ಲೇಖಕ, ಚಿಂತಕರು, ಪ್ರಾಧ್ಯಾಪಕರು, ಶಿಕ್ಷಕರು ಅವಲೋಕಿಸಿ ಅದಕ್ಕೆ ತಕ್ಕಂತೆ ಜ್ಞಾನದ ಉದ್ಯಮ(ಪುಸ್ತಕೋದ್ಯಮ)ವನ್ನು ಬೆಳೆಸಲು ಎಲ್ಲರೂ ಸಹಕರಿಸುವಂತೆ ಮನವಿ ಮಾಡಿದರು.

ನಂತರ ಎಲ್ಲಾ ಮಳಿಗೆಗಳಿಗೆ ಭೇಟಿ ನೀಡಿ, ಯಾವ ಯಾವ ಲೇಖಕರ ಪುಸ್ತಕ ಗಳು ಪ್ರದರ್ಶನದಲ್ಲಿವೆ ಎಂಬುದನ್ನು ವೀಕ್ಷಣೆ ಮಾಡಿದರಲ್ಲದೆ, ಓದುಗರ ಮನವಿಗೆ ಸೆಲ್ಫಿಗೆ ಪೋಸ್ ನೀಡಿದರು. ಇದಕ್ಕೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಸದಸ್ಯರಾದ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಎಂ.ಚಂದ್ರಶೇಖರ್, ಯು.ಎಸ್.ಮಹೇಶ್, ಡಾ.ಸಿ.ಡಿ.ಪರಶು ರಾಮ್, ಸಾತನೂರು ದೇವರಾಜ್, ಅಭಿರುಚಿ ಗಣೇಶ್, ಸುಚಿತ್ರ ಹೆಗಡೆ, ಬೆಟ್ಟಸ್ವಾಮಿ, ಪ್ರಕಾಶಕ ನಿಂಗರಾಜು ಚಿತ್ತಣ್ಣವರ್ ಉಪಸ್ಥಿತರಿದ್ದರು. ನಂತರ ಚಂಪಕ ಅಕಾಡೆಮಿಯ ವಿದುಷಿ ನಾಗಲಕ್ಷ್ಮಿ ತಂಡದವರು ನೃತ್ಯ ಪ್ರದರ್ಶನ ನೀಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ) ದೇವರ (ಕ)	1+3 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೈರಾದೇವಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ದೇವರ (ತೆ)	4 ಪ್ರದರ್ಶನಗಳು
ರಾಜಕಮಲ್	
ಜೋಕರ್ ಪೋಲಿಕಾ ಡ್ಯೂಕ್ಸ್ (ಇಂ)	4 ಪ್ರದರ್ಶನಗಳು
ಸಂಗಂ	
ಭೈರಾದೇವಿ (ಕ)	4 ಪ್ರದರ್ಶನಗಳು
ಲಿಡೋ	
ಉಪೇಂದ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಪ್ರಭಾ	
ಭೀಮ (ಕ)	2 ಪ್ರದರ್ಶನಗಳು
ರಾಜಯೋಗ (ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಬೆ.10.05ಕ್ಕೆ, ಸಂ.4.05ಕ್ಕೆ, ರಾ.7ಕ್ಕೆ, ರಾ.9.55ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1ಕ್ಕೆ.
ಸ್ಕ್ರೀನ್ 2	ದೇವರ 1 (ತೆ): ರಾ.10ಕ್ಕೆ.
ಸ್ಕ್ರೀನ್ 3	ಸ್ತ್ರೀ 2 (ಹಿಂ): ಬೆ.10.05ಕ್ಕೆ, ದೇವರ 1 (ತೆ): ಮ.1ಕ್ಕೆ, ಅನ್ನ (ಕ): ಸಂ.4.30ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7ಕ್ಕೆ, ಕಳಿಂಗ (ತೆ): ರಾ.10.10ಕ್ಕೆ.
ಸ್ಕ್ರೀನ್ 4	ಪುಷ್ಪಕ ವಿಮಾನಂ (ಮ): ಬೆ.10.20ಕ್ಕೆ, ಭೈರಾದೇವಿ (ಕ): ಮ.1.05ಕ್ಕೆ, ದೇವರ 1 (ತೆ): ಮ.3.45ಕ್ಕೆ, ರಾ.7.05ಕ್ಕೆ, ತೆಕ್ಕು ವಡಕ್ಕು (ಮ): ರಾ.10.30ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.10ಕ್ಕೆ, ಸ್ವಾಗ್ (ತೆ): ಸಂ.4.10ಕ್ಕೆ, ತೆಕ್ಕು ವಡಕ್ಕು (ಮ): ರಾ.7.10ಕ್ಕೆ, ಗುಮಾಸ್ತಾನ್ (ಮ): ರಾ.9.40ಕ್ಕೆ.
ಸ್ಕ್ರೀನ್ 2	ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಮ.1.45ಕ್ಕೆ, ದೇವರ 1 (ತೆ): ಸಂ.4.40ಕ್ಕೆ, ರಾ.8ಕ್ಕೆ.
ಸ್ಕ್ರೀನ್ 3	ಭೈರಾದೇವಿ (ಕ): ಮ.1.40ಕ್ಕೆ, ಸಂ.4.15ಕ್ಕೆ, ಜೋಕರ್ ಫೋಲಿಕಾ ಡ್ಯೂಕ್ಸ್ (ಇಂ): ಸಂ.6.50ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 4	ದೇವರ 1 (ಕ): ಮ.1.30ಕ್ಕೆ, ದೇವರ 1 (ತೆ): ಸಂ.6.05ಕ್ಕೆ, ರಾ.9.20ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139


ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮಾಜಿ ಶಾಸಕ ಮೊಯಿದ್ದೀನ್ ಬಾವಾ ಸೋದರ ಮುಮ್ತಾಜ್ ಅಲಿ ಮೃತದೇಹ ಪತ್ತೆ

ಮಹಿಳೆ ಸೇರಿ 6 ಮಂದಿ ವಿರುದ್ಧ ಕೇಸ್ ದಾಖಲು

ಮಂಗಳೂರು: ಪೊಲೀಸ್ ಠಾಣಾ ವ್ಯಾಪ್ತಿಯ ಕೂಳೂರು ಸೇತುವೆ ಮೇಲೆ ಕಾರು ಬಿಟ್ಟು ನಾಪತ್ತೆಯಾಗಿದ್ದ ಉದ್ಯಮಿ ಬಿ.ಎಂ.ಮುಮ್ತಾಜ್ ಅಲಿ ಅವರ ಮೃತದೇಹ ಸೋಮವಾರ ಕೂಳೂರು ಸೇತುವೆಯ ಬಳಿ ಪತ್ತೆಯಾಗಿದೆ.



ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಕೋಸ್ಟ್ ಗಾರ್ಡ್ ಸೇರಿದಂತೆ ಸ್ಥಳೀಯ ನಾಡದೋಣಿ ಮೀನುಗಾರರು ಸೋಮವಾರ ಬೆಳಗ್ಗೆ 6 ಗಂಟೆಯಿಂದ ಹುಡುಕಾಟದಲ್ಲಿ ತೊಡಗಿದ್ದರು. ಮಂಗಳೂರು–ಕೂಳೂರು ಸೇತುವೆ ಬಳಿ ಬೆಳಿಗ್ಗೆ 10.40ರ ಸುಮಾರಿಗೆ ಸ್ಥಳೀಯ ಮೀನುಗಾರರ ದೋಣಿಗೆ ಮೃತದೇಹ ಪತ್ತೆಯಾಗಿದೆ. ಮುಮ್ತಾಜ್ ಅಲಿ ಅವರನ್ನು ನಿರಂತರವಾಗಿ ಬೆದರಿಸಿ, ಬ್ಲ್ಯಾಕ್‌ಮೇಲ್ ಮಾಡಿ ಲಕ್ಷಾಂತರ ರೂ. ಹಣವನ್ನು ಕಿತ್ತುಕೊಂಡು ಮತ್ತಷ್ಟು ಹಣಕ್ಕೆ ಬೇಡಿಕೆಯಿಟ್ಟ ಆರೋಪದಲ್ಲಿ ಮಹಿಳೆ ಸೇರಿದಂತೆ 6 ಮಂದಿ ಆರೋಪಿಗಳ ವಿರುದ್ಧ ಈಗಾಗಲೇ ಕಾವೂರು ಪೊಲೀಸ್ ಠಾಣೆಯಲ್ಲಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ 173ರ ಅಡಿ ಎಫ್‌ಐಆರ್ ದಾಖಲಾಗಿದೆ. ನಿನ್ನೆ ಮಂಗಳೂರಿನ ಕೂಳೂರಿನ ಸೇತುವೆ ಮೇಲೆ ಮುಮ್ತಾಜ್ ಕಾರು ಪತ್ತೆಯಾಗಿತ್ತು. ಈಜು ತಜ್ಞ ಈಶ್ವರ್ ಮಲ್ಪೆ ಅವರು ಮುಮ್ತಾಜ್ ಶೋಧ ಕಾರ್ಯಾಚರಣೆ ನಡೆಸಿದ್ದರು. ಫಲ್ಗುಣಿ ನದಿಯಲ್ಲಿ ಸ್ಕೂಬಾ ಡೈವ್ ಮಾಡಿ ಶೋಧ ನಡೆಸಿದ್ದರು.

ಇ–ಆಸ್ತಿ ತಂತ್ರಾಂಶ ಸಂಯೋಜನೆಗೆ ಅವಕಾಶ

ಮೈಸೂರು,ಅ.7– ನಗರಾಭಿವೃದ್ಧಿ ಇಲಾಖೆಯ ವತಿಯಿಂದ ಮೈಸೂರು ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆಸ್ತಿಗಳ ಹಕ್ಕು ವರ್ಗಾವಣೆಗೆ ಸಂಬಂಧಿಸಿದಂತೆ ಇ–ಆಸ್ತಿ ತಂತ್ರಾಂಶ ಮತ್ತು ಕಾವೇರಿ ತಂತ್ರಾಂಶ ವನ್ನು ಸಂಯೋಜನೆ ಮಾಡಲಾಗುತ್ತಿದೆ.

ಇದಕ್ಕೆ ಸಂಬಂಧಿಸಿದಂತೆ ಮೈಸೂರು ಜಿಲ್ಲೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಸ್ಥಿರಾಸ್ತಿಗಳ ನೋಂದಣಿಯನ್ನು ಇ–ಆಸ್ತಿ ತಂತ್ರಾಂಶದಿಂದ ಕಡ್ಡಾಯವಾಗಿ ಮಾಹಿತಿ ಪಡೆದು ನೋಂದಾಯಿಸಲು ಇ–ಆಸ್ತಿ ತಂತ್ರಾಂಶವನ್ನು ಕಾವೇರಿ–2 ತಂತ್ರಾಂಶ ದೊಂದಿಗೆ ಸಂಯೋಜನೆ ಮಾಡಲಾಗಿದ್ದು, ಮೈಸೂರು ಜಿಲ್ಲಾ ವ್ಯಾಪ್ತಿಯ ಎಲ್ಲಾ ಉಪ ನೋಂದಣಿ ಕಚೇರಿಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಆಸ್ತಿಯನ್ನು ನೋಂದಾಯಿಸಲು ಆಸ್ತಿಯ ಮಾಹಿತಿಯನ್ನು ಕಡ್ಡಾಯವಾಗಿ ಇ–ಆಸ್ತಿ ತಂತ್ರಾಂಶದಿಂದಲೇ ಪಡೆಯಬೇಕಾಗಿರುತ್ತದೆ.

ಇ–ಆಸ್ತಿ ಸಂಯೋಜನೆಯಿಂದ ಸಾರ್ವಜನಿಕರು ಸ್ವತ್ತುಗಳ ನೋಂದಣಿ ವೇಳೆ ಮೋಸ ಹೋಗು ವುದನ್ನು ತಡೆಯುವುದು, ಸ್ವತ್ತಿನ ಸ್ವರೂಪ ಮತ್ತು ನೈಜ ಮಾಲೀಕರನ್ನು ಗುರುತಿಸಲು ಸಾಧ್ಯ ವಾಗುತ್ತದೆ, ನೈಜ ಮಾಲೀಕರಿಗೆ ವಂಚಿಸಿ ಬೇರೆಯವರಿಂದ ಸ್ವತ್ತುಗಳ ನೋಂದಣಿಯನ್ನು ತಪ್ಪಿಸುವುದು, ಸ್ವತ್ತುಗಳ ಖರೀದಿದಾರರಿಗೆ ಸ್ವತ್ತಿನ ನೈಜ ಮಾಲೀಕರನ್ನು ಗುರುತಿಸುವುದು, ಭವಿಷ್ಯದಲ್ಲಿ ಉಂಟಾಗಬಹುದಾದ ವ್ಯಾಜ್ಯ ಕಾನೂನು ತೊಂದರೆಗಳನ್ನು ತಪ್ಪಿಸಬಹುದಾ ಗಿದ್ದು, ಸಾರ್ವಜನಿಕರು ಇ–ಆಸ್ತಿ ಸಂಯೋ ಜನೆಯ ಸದುಪಯೋಗವನ್ನು ಪಡೆದುಕೊಳ್ಳ ಬಹುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀ ಕಾಂತ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರಮನೆ ಅಂಗಳದಲ್ಲಿ ಕಂಗೊಳಿಸುತ್ತಿದೆ ಪುಷ್ಪ ಲೋಕ

- 10 ಸಾವಿರ ಕುಂಡಗಳಲ್ಲಿ ಚಿಗುರೊಡೆದ ಅಲಂಕಾರಿಕ ಸಸ್ಯ
- 20 ಎಕರೆ ಪ್ರದೇಶದ ಉದ್ಯಾನವನಗಳಲ್ಲಿ ಅರಳಿವೆ ಹೂಗಳು
- ಅರಮನೆ ಮಂಡಳಿಯ ವಿಶಿಷ್ಟ ಪ್ರಯತ್ನದ ಫಲ






ಮೈಸೂರು ಕುಪ್ಪಣ್ಣ ಪಾರ್ಕ್‌ನಲ್ಲಿ ನಡೆಯುತ್ತಿರುವ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಅರಮನೆ ಮಂಡಳಿ ಹೂವಲ್ಲೇ ಸಿದ್ಧಪಡಿಸಿರುವ ಟಾಂಗಾ ಗಾಡಿ ಹಾಗೂ ಸಿರಿಧಾನ್ಯದಲ್ಲಿ ರಾಜಮಾತೆ ವಾಣಿವಿಲಾಸ ಸನ್ನಿಧಾನ ಅವರ ಪ್ರತಿಮೆ ಮೂಡಿಸಿರುವುದನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಅ.7(ಪಿಎಂ)– 'ಮೈಸೂರು ಅರಮನೆ' ದೇಶ–ವಿದೇಶ ಪ್ರವಾಸಿಗರನ್ನು ಆಕರ್ಷಿಸಿರುವ ಪ್ರಸಿದ್ಧ ತಾಣ. ಇದೀಗ ದಸರಾ ಹಿನ್ನೆಲೆಯಲ್ಲಿ ಇದರ ಅಂದ–ಚಂದ ಮತ್ತು ಶೃಂಗಾರ ಮತ್ತಷ್ಟು ಇಮ್ಮಡಿಗೊಂಡಿದೆ.

ಮೈಸೂರು ಅರಮನೆ ಮಂಡಳಿ, ದಸರಾಗಾಗಿ ಸಾಕಷ್ಟು ಹಿಂದೆಯೇ ಅರಮನೆಯ ಸೌಂದರ್ಯೀಕರಣ ಕಾರ್ಯ ಕೈಗೆತ್ತಿಕೊಂಡಿತ್ತು. ಇದರ ಪರಿಣಾಮ ಈಗ ಅರಮನೆ ಅಂದ ನೋಡುವುದೇ ಒಂದು ಸೊಗಸು ಎನ್ನುವಂತಾಗಿದೆ. ಮಂಡಳಿಯಿಂದ



❛ಅರಮನೆ ಮಂಡಳಿ ಕಚೇರಿ ಮುಖ್ಯ ದ್ವಾರದಲ್ಲಿ ಪುಷ್ಪದಲ್ಲಿ ಮೂಡಿಸಿರುವ ಎರಡು ನವಿಲು ಹಾಗೂ ಸಿರಿಧಾನ್ಯದಲ್ಲಿ ಮೂಡಿಸಿರುವ ನಾಲ್ವಡಿಯವರ ಪ್ರತಿಮೆ ಜನತೆಯನ್ನು ಆಕರ್ಷಿಸುತ್ತಿದೆ. ಬೆಳಗ್ಗೆಯಿಂದ ಸಂಜೆಯವರೆಗೆ ಯಾವಾಗ ನೋಡಿದರೂ ನೂರಾರು ಜನ ಅವುಗಳೊಂದಿಗೆ ಫೋಟೋ, ಸೆಲ್ಫಿ ತೆಗೆದುಕೊಳ್ಳುವುದು ನಿತ್ಯ ಕಂಡು ಬರುತ್ತಿದೆ. ಹೂ–ಅಲಂಕಾರಿಕ ಸಸ್ಯಗಳಿಂದ ಶೃಂಗಾರಗೊಂಡಿರುವ ಐತಿಹಾಸಿಕ ಮೈಸೂರು ಅರಮನೆ ಆವರಣದಲ್ಲಿ ದೇಶ–ವಿದೇಶ ಪ್ರವಾಸಿಗರು ಸೆಲ್ಫಿ ಹಾಗೂ ಫೋಟೋ ಮೊರೆ ಹೋಗುತ್ತಿದ್ದಾರೆ.



-ಟಿ.ಎಸ್.ಸುಬ್ರಹ್ಮಣ್ಯ, ಉಪನಿರ್ದೇಶಕರು, ಅರಮನೆ ಮಂಡಳಿ, ಮೈಸೂರು.

ದಸರಾಗಾಗಿ ಅರಮನೆ ಸಜ್ಜುಗೊಳಿಸುವ ಕಾರ್ಯಗಳು ಈಗಾಗಲೇ ಪೂರ್ಣಗೊಂಡು, ಅರಮನೆ ಕಣ್ಮನ ಸೆಳೆಯುತ್ತಿದೆ.

ಅಂತೆಯೇ ಅರಮನೆ ಆವರಣದಲ್ಲಿ ವಿಭಿನ್ನ ರೀತಿಯ ಅಲಂಕಾರಿಕ ಗಿಡಗಳನ್ನು ಒಳಗೊಂಡ 10 ಸಾವಿರ ಕುಂಡಗಳಲ್ಲಿ ಬಣ್ಣಬಣ್ಣದ ಹೂಗಳು ಅರಳಿ ಆಕರ್ಷಿಸುತ್ತಿವೆ. ಈ ಕುಂಡಗಳಲ್ಲಿ 32 ಜಾತಿಯ ಸಸ್ಯಗಳು ನಳನಳಿಸುತ್ತಿದ್ದರೆ, ಈ ಪೈಕಿ ಸಾಕಷ್ಟು ಸಸ್ಯಗಳು ಪುಷ್ಪಗಳನ್ನು ಅರಳಿಸಿ ಅರಮನೆಯ ಅಂದ ವೃದ್ಧಿಸುವಂತೆ ಮಾಡಿವೆ. ಇದರಲ್ಲಿ ಮೆರಿಗೋಲ್ಡ್, ಸಾಲ್ವಿಯ, ಡೇಲಿಯ, ಸೇವಂತಿಗೆ, ಕೋಲಿಯಸ್, ಸಿಲೋಷಿಯ, ಆಂಟಿರೈನಂ, ಬೋನ್ಸಾಯ್ ಗಿಡಗಳು ಸೇರಿದಂತೆ 32 ಜಾತಿಯ ಹೂವಿನ ಗಿಡಗಳು ಸೇರಿವೆ.

ಅರಮನೆ ಆವರಣದ ಸುಮಾರು 20 ಎಕರೆ ಪ್ರದೇಶದ ಉದ್ಯಾನವನಗಳಲ್ಲಿ ಸಸ್ಯಗಳು ಬೆಳೆದು, ಹೂಗಳು ಮೂಡಿ, ನೋಡಲು ಮುದವಾಗುವಂತಾಗಿದೆ. ಅದೇ ರೀತಿ ಅಲಂಕಾರಿಕ ಸಸ್ಯ ಮತ್ತು ಹಳದಿ ಮತ್ತು ಕೆಂಪು ಬಣ್ಣದ ಪುಷ್ಪಗಳಿಂದ '2024 ದಸರಾ ಫೆಸ್ಟಿವಲ್' ನಾಮಫಲಕ ಸಿದ್ಧಪಡಿಸಿದ್ದು, ಇದು ಪ್ರವಾಸಿಗರ ಸೆಲ್ಫಿ ಹಾಗೂ ಫೋಟೋಶೂಟ್ ಸ್ಪಾಟ್ ಆಗಿ ಮಾರ್ಪಟ್ಟಿದೆ.

ಸಿರಿಧಾನ್ಯದಲ್ಲಿ ಮೂಡಿದ ನಾಲ್ವಡಿ: ಅರಮನೆ ಮಂಡಳಿ ಕಚೇರಿ ಮುಖ್ಯ ದ್ವಾರವೀಗ ಆಕರ್ಷಕ ತಾಣವಾಗಿದೆ. ಇಲ್ಲಿ ಆಧುನಿಕ ಮೈಸೂರು ನಿರ್ಮಾತೃ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆಯನ್ನು ಸಿರಿಧಾನ್ಯದಲ್ಲಿ ಮೂಡಿಸಿದ್ದು, ನಾಲ್ವಡಿ ಪ್ರತಿಮೆ ಅಕ್ಕಪಕ್ಕದಲ್ಲಿ ಎರಡು ನವಿಲುಗಳನ್ನು ಪುಷ್ಪದಲ್ಲಿ ಅನಾವರಣಗೊಳಿಸಲಾಗಿದೆ. ಬಗೆಬಗೆಯ ಬಣ್ಣದ ಪುಷ್ಪದ ನಡುವೆ ಅಲಂಕಾರಿಕ ಸಸ್ಯಗಳನ್ನು ಒಳಗೊಂಡ ಕುಂಡಗಳನ್ನು ಜೋಡಿಸಿದ್ದು, ಇದು ಮತ್ತಷ್ಟು ಕಳೆತಂದಿದೆ.

ಲಕ್ಷ ಹೂಗಳಲ್ಲಿ ಅರಳಿದ ಟಾಂಗಾ: ಕುಪ್ಪಣ್ಣ ಉದ್ಯಾನವನದಲ್ಲಿ ನಡೆಯುತ್ತಿರುವ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ಭಾಗವಹಿಸಿರುವ ಅರಮನೆ ಮಂಡಳಿ, ಇಲ್ಲಿಯೂ ಪುಷ್ಪ ಹಾಗೂ ಅಲಂಕಾರಿಕ ಸಸ್ಯಗಳಲ್ಲಿ ತನ್ನ ಕೈಚಳಕ ತೋರಿದೆ. ಮೈಸೂರು ಪಾರಂಪರಿಕ ಟಾಂಗಾ ಗಾಡಿ ಕಲಾಕೃತಿಯನ್ನು ಇಲ್ಲಿ ಹೂವಿನಿಂದ ಅರಳಿಸಲಾಗಿದೆ. ಇದಕ್ಕಾಗಿ 1 ಲಕ್ಷ ವಿವಿಧ ಹೂಗಳನ್ನು ಬಳಸಲಾಗುತ್ತಿದ್ದು, ಗುಲಾಬಿ, ಕ್ರೈಸಾಂಥಿಮಮ್, ಪಿಂಗ್‌ಪಾಂಗ್, ಕಾರ್ನೇಷನ್, ಅಸ್ಟ್ರಮೇರಿಯಾ, ಜರ್ಬೆರಾ, ಆಂಥೋರಿಯಮ್, ಆರ್ಕಿಡ್ಸ್, ಬ್ಲೂಡೈಸಿ, ಡ್ರೆಸಿನಾ, ಇತರೆ ಅಲಂಕಾರಿಕ ಹೂಗಳು ಮಾತ್ರವಲ್ಲದೆ, ಊಟಿ ಕಟ್ ಫ್ಲವರ್‌ಗಳನ್ನು ಇದಕ್ಕಾಗಿ ಬಳಕೆ ಮಾಡಲಾಗುತ್ತಿದೆ. ಜೊತೆಗೆ ಕುಪ್ಪಣ್ಣ ಉದ್ಯಾನವದ ಅಲಂಕಾರಿಕ ಸಸ್ಯ ಹಾಗೂ ಪುಷ್ಪಗಳ ನಡುವೆ ಸಿರಿಧಾನ್ಯದಲ್ಲಿ ರಾಜಮಾತೆ ವಾಣಿ ವಿಲಾಸ ಸನ್ನಿಧಾನ (ಕೆಂಪನಂಜಮ್ಮಣ್ಣಿಯವರು) ಅವರ ಪ್ರತಿಮೆ ಮೂಡಿಸಲಾಗಿದೆ.



ಸಿರಿಧಾನ್ಯದಲ್ಲಿ ಮೂಡಿಸಿರುವ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಪ್ರತಿಮೆ.

ಕೆಎಸ್‌ಆರ್‌ಟಿಸಿಗೆ 20 ಹೊಸ ಐಷಾರಾಮಿ ಬಸ್ ಸೇರ್ಪಡೆ

ಪ್ರತಿ ಬಸ್ಸಿಗೆ 1.78 ಕೋಟಿ ಬೆಲೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ(ಕೆಎಸ್‌ಆರ್‌ಟಿಸಿ) ಈ ತಿಂಗಳ ಅಂತ್ಯದೊಳಗೆ ಐರಾವತ್ ಕ್ಲಬ್ ಕ್ಲಾಸ್ 2.0 ಮಾದರಿಯ 20 ಹೊಸ ಐಷಾರಾಮಿ ಬಸ್‌ಗಳನ್ನು ಪ್ರತಿ ಬಸ್‌ಗೆ 1.78 ಕೋಟಿ ರೂಪಾಯಿ ನೀಡಿ ಖರೀದಿಸುತ್ತಿದೆ. ಪ್ರಸ್ತುತ ಕೆಎಸ್‌ಆರ್‌ಟಿಸಿಯಲ್ಲಿ ಒಟ್ಟು 443 ಐಷಾರಾಮಿ ಬಸ್‌ಗಳಿವೆ.

ಅಧಿಕಾರಿಗಳ ಪ್ರಕಾರ, ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್‌ಆರ್ ಶ್ರೀನಿವಾಸ್ (ವಾಸು) ಅವರೊಂದಿಗೆ ಹೊಸ ಬಸ್‌ಗಳನ್ನು ಪರಿಶೀಲಿಸಲು ಹೊಸಕೋಟೆ ಬಳಿಯ ವೋಲ್ವೋ ಬಸ್ ತಯಾರಿಕಾ ಕಾರ್ಖಾನೆಗೆ ಭೇಟಿ ನೀಡಿದರು.

ಈ ಬಸ್‌ನ ಕೆಲವು ಪ್ರಮುಖ ವೈಶಿಷ್ಟ್ಯಗಳೆಂದರೆ, ಶಕ್ತಿಶಾಲಿ ಹ್ಯಾಲೋಜೆನ್ ಹೆಡ್‌ಲೈಟ್‌ಗಳು ಮತ್ತು ಡೇಟೈಮ್ ರನ್ನಿಂಗ್ ಲೈಟ್‌ಗಳು ಹೊಸ ಫ್ಲಷ್ ಇಂಟೀರಿಯರ್‌ಗಳು ಮತ್ತು ಬಾಹ್ಯ ಸ್ಕ್ಯಾಂಡಿನೇವಿಯನ್ ವಿನ್ಯಾಸ ಹೊಂದಿವೆ.

ಈ ಬಸ್ ಏರೋಡೈನಾಮಿಕ್ ವಿನ್ಯಾಸದಿಂದ ಉತ್ತಮ ಇಂಧನ ದಕ್ಷತೆ ಹೊಂದಿದೆ. ನವೀನ ತಂತ್ರಜ್ಞಾನ/ತಾಂತ್ರಿಕತೆಯಿಂದ ಸುಧಾರಿತ ಇಂಜಿನ್ ಹೊಂದಿದ್ದು, ಅತ್ಯುತ್ತಮ ಕಾರ್ಯಕ್ಷಮತೆ ಹಾಗೂ ಸುಧಾರಿತ ಇಂಜಿನ್ ಕೆಂಪಿಎಲ್ ನೀಡುತ್ತದೆ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ಈ ಹೊಸ ಬಸ್ ಒಟ್ಟಾರೆ ಉದ್ದದಲ್ಲಿ ಶೇಕಡಾ 3.5 ಹೆಚ್ಚಿರುವುದರಿಂದ ಪ್ರಯಾಣಿಕರ ಆಸನಗಳ ನಡುವೆ ಹೆಚ್ಚಿನ ಸ್ಥಳಾವಕಾಶವನ್ನು ಒದಗಿಸುತ್ತದೆ.

ವಿಂಡ್‌ಶೀಲ್ಡ್ ಗಾಜು 9.5% ರಷ್ಟು ವಿಸ್ತಾರವಾಗಿದ್ದು, ಚಾಲಕನಿಗೆ ಗೋಚರತೆಯನ್ನು ಹೆಚ್ಚಿಸಿ ಬ್ಲೈಂಡ್ ಸ್ಪಾಟ್ ಅನ್ನು ಕಡಿಮೆ ಮಾಡುತ್ತದೆ ಎಂದು ಅವರು ಹೇಳಿದ್ದಾರೆ.

ಸಿಎಂ ಸಿದ್ದರಾಮಯ್ಯ ವಿರುದ್ಧ ಇಡಿ ತನಿಖೆ ಹುನ್ನಾರ

ಅ.16, ದೆಹಲಿ ಚಲೋ, ರಾಷ್ಟ್ರಪತಿಗಳಿಗೆ ದೂರು

ಮೈಸೂರು, ಅ.7(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಮುಗಿಸುವ ದುರುದ್ದೇಶದಿಂದ ಕೇಂದ್ರ ಸರ್ಕಾರ ಇಡಿ ತನಿಖೆಗೆ ಮುಂದಾಗಿದ್ದು, ಕೇಂದ್ರದ ಈ ಹುನ್ನಾರದ ವಿರುದ್ಧ ಅ.16ರಂದು ದೆಹಲಿ ಚಲೋ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು, ರಾಷ್ಟ್ರಪತಿ ಅವರಿಗೆ ದೂರು ನೀಡಲಿದ್ದೇವೆ ಎಂದು ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್–ಬಿಜೆಪಿ ಮೈತ್ರಿ ಪಕ್ಷಗಳು ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಲು ಶತಾಯಗತಾಯ ಪ್ರಯತ್ನಿಸುತ್ತಿದ್ದು, ರಾಜ್ಯದಲ್ಲಿ ಕರಾಳ ರಾಜಕಾರಣವನ್ನು ಪ್ರಾರಂಭ ಮಾಡಿವೆ. ಪ್ರಧಾನಿ ನರೇಂದ್ರಮೋದಿ ಅವರ ಪ್ರೀತಿಗೆ ಪಾತ್ರರಾಗಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತ್ತು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಈ ಕರಾಳ ರಾಜಕಾರಣದ ನಾಯಕರಾಗಿದ್ದಾರೆ ಎಂದು ಆರೋಪಿಸಿದರು.

ರಾಜ್ಯ ಬಿಜೆಪಿ ಒಬಿಸಿ ಮೋರ್ಚಾದ ಅಧ್ಯಕ್ಷ ಆರ್.ರಘು ಕೌಟಿಲ್ಯ ಅವರು ಗಂಗರಾಜು ಎಂಬ ವ್ಯಕ್ತಿಯಿಂದ ವಿವಿಧ ದಾಖಲೆಗಳನ್ನು ಪಡೆದು ಸ್ನೇಹಮಯಿ ಕೃಷ್ಣ ಅವರಿಗೆ ನೀಡಿದ್ದಾರೆ. ಹೀಗೆ ವ್ಯವಸ್ಥಿತವಾಗಿ ಸಿದ್ದರಾಮಯ್ಯ ಅವರ ವಿರುದ್ಧ ಸಂಚು ರೂಪಿಸಲಾಗಿದೆ ಎಂದು ಆರೋಪಿಸಿದರು.

ಮುಡಾ ಪ್ರಕರಣ ಸಿವಿಲ್ ಪ್ರಕರಣವಾಗಿದ್ದು, ಈ ಪ್ರಕರಣದಲ್ಲಿ ಯಾವುದೇ ರೀತಿಯ ಹಣ ವರ್ಗಾವಣೆ ಆಗಿಲ್ಲ. ಹಾಗಿದ್ದರೂ ಇಡಿ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರ ವಿರುದ್ಧ ಯಾವ ಆಧಾರದ ಮೇಲೆ ತನಿಖೆ ಮಾಡುತ್ತದೆ ಎಂದು ಪ್ರಶ್ನಿಸಿ, ಸಿದ್ದರಾಮಯ್ಯ ಸಮಾಜವಾದಿ ಹಿನ್ನೆಲೆ ಇರುವ ಸಾಮಾಜಿಕ ನ್ಯಾಯದ ಕೊನೆಯ ಕೊಂಡಿ. ಅಲ್ಪಸಂಖ್ಯಾತ, ಹಿಂದುಳಿದ, ದಲಿತ ಮುಂತಾದ ಶೋಷಿತ ವರ್ಗಗಳ ರಕ್ಷಣೆಗೆ ಸಿದ್ದರಾಮಯ್ಯ ಅಧಿಕಾರದಲ್ಲಿರುವುದು ಅತ್ಯಗತ್ಯ. ಒಂದು ವೇಳೆ ಅಹಿಂದ ವರ್ಗಗಳು ಸಿದ್ದರಾಮಯ್ಯ ಅವರನ್ನು ಕಳೆದುಕೊಂಡರೆ ಸಾಮಾಜಿಕ ನ್ಯಾಯದ ಪರಿಕಲ್ಪನೆಗೆ ಬಹುದೊಡ್ಡ ಪೆಟ್ಟು ಬೀಳುತ್ತದೆ ಎಂದು ಕಳವಳ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಹಿಂದುಳಿದ ವರ್ಗಗಳ ಮುಖಂಡರಾದ ಶಾಂತಕುಮಾರ್, ಮೋಗಣ್ಣಾಚಾರ್, ರವಿನಂದನ್, ಯೋಗೇಶ್ ಉಪ್ಪಾರ್, ಎಚ್.ಎಸ್.ಪ್ರಕಾಶ್, ರಾಜೇಶ್ ಉಪಸ್ಥಿತರಿದ್ದರು.

ಆರೋಗ್ಯ ಉಚಿತ ತಪಾಸಣಾ ಶಿಬಿರ

ಮೈಸೂರು, ಅ.7– ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತಾಶ್ರಯದಲ್ಲಿ ಅ.8ರಂದು ಬೆಳಗ್ಗೆ 9.30 ರಿಂದ ಮಧ್ಯಾಹ್ನ 2 ರವರೆಗೆ ಮಂಡಿ ಮೊಹಲ್ಲಾ, ಕಬೀರ್ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರವಿರುವ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಆರೋಗ್ಯ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಹೆಚ್.ಎಸ್. ಬಸವರಾಜ್, ಮೊ. 94487 53597, ಎಂ.ಎನ್. ಜೈಪ್ರಕಾಶ್, ಮೊ. 99161 55453, 94487 38657 ಸಂಪರ್ಕಿಸಬಹುದು.